
ಶ್ರೀ

# ನೀತಿಸಾರಾವಳಿ

ರಚನೆ

**ವಿದ್ವಾನ್ ಜಗ್ಗು ಶಿಂಗರಯ್ಯಂಗಾರ್ಯ**

# ಮೊದಲ ಮಾತು



ಇಂದಿನ ಜನಾಂಗಕ್ಕೆ, ಅದರಲ್ಲೂ ವಿಶೇಷವಾಗಿ ಯುವಜನಾಂಗಕ್ಕೆ ಸಂಸ್ಕೃತ ಭಾಷೆ ಸಾಹಿತ್ಯಗಳ ಪರಿಚಯ ಮಾಡಿಕೊಡಬೇಕೆಂಬ ಉದ್ದೇಶದಿಂದ ನಮ್ಮ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದೆವು. ಭಾರತೀಯ ಭಾಷೆಗಳ ಅಧ್ಯಯನಕ್ಕೆ, ಭಾರತೀಯತೆಯ ಪ್ರತಿಪಾದನೆಗೆ ಅಷ್ಟೇ ಅಲ್ಲ ಮಾನವೀಯ ಮೌಲ್ಯಗಳ ಅರಿವಿಗೆ ಸಂಸ್ಕೃತ ಭಾಷೆ ಸಾಹಿತ್ಯಗಳ ಅಧ್ಯಯನ ಅತ್ಯವಶ್ಯ ಎಂದು ನಮ್ಮ ಅಭಿಮತ. ಸಂಸ್ಕೃತ ಭಾಷೆ ಸಾಹಿತ್ಯ ಇವು ಮಾನವ ಧರ್ಮದ ಪ್ರತೀಕಗಳು. ಮಾನವತಾಧರ್ಮದ ಬುನಾದಿ. ಈ 'ನೀತಿಸಾರಾವಳಿ'ಯನ್ನು ರಚಿಸಿರುವ ವಿದ್ವಾಂಸರು ಶ್ರೀ ಜಗ್ಗು ಶಿಂಗರಯ್ಯಂಗಾರ್ಯರು. ಸಂಸ್ಕೃತ ವಿದ್ವಾಂಸರ, ಭಗವದ್ಭಕ್ತರ ವಂಶದಲ್ಲಿ ಜನಿಸಿದ ಶ್ರೀಯುತರು ತಮ್ಮ ತಾತಂದಿರ ಬಳಿಯಲ್ಲೇ ಸಂಸ್ಕೃತವನ್ನು ಅಭ್ಯಾಸಮಾಡಿದರು. ಖರನಾಮ ಸಂವತ್ಸರದಲ್ಲಿ ಜನಿಸಿದ ಶ್ರೀಯುತರು 'ಬಾಣಭಟ್ಟನಂತೆ ದೇಶಾಟನೆ' ಮಾಡಿದ್ದಾರೆ. ಮದರಾಸಿನ ಸುಪ್ರಸಿದ್ಧ ಅಡ್ಯಾರ್ ಸಂಸ್ಕೃತ ಪುಸ್ತಕ ಭಂಡಾರದಲ್ಲಿ ಕಾರ್ಯಕ್ಕಾಗಿ ನಿಂತು ತಮ್ಮ ಕಾರ್ಯದಕ್ಷತೆಯಿಂದ ಆನಿಬೆಸೆಂಟರವರ ಪ್ರಶಂಸೆಗೆ ಪಾತ್ರರಾದವರು.

"ಯದುಶೈಲ ಚಂಪು" ಇವರಿಂದ ರಚಿತವಾದ ಪ್ರಥಮ ಸಂಸ್ಕೃತ ಕಾವ್ಯ. "ದಾಶರಥಿಚರಿತಂ" "ಕಾವ್ಯಕಲಾಪ" : "ವೆಂಕಟೇಶ ಪದಾವಲಂಬ ಸ್ತೋತ್ರಂ" ಎಂಬ ಇತರ ಸಂಸ್ಕೃತ ಕಾವ್ಯಗಳನ್ನು ರಚಿಸಿದ್ದಾರೆ.

"ನೀತಿಸಾರಾವಳೀ", "ಸುಭಾಷಿತಗಳು", "ಚೆಲ್ವನಾರಾಯಣ ಶತಕ", "ಸಾರ್ವಜ್ಞ ಪದಗಳು", "ಆರ್ಚೆಯ ಅಚ್ಯುತ", "ಬರಲಿನ ಭಾಗ್ಯ" ಇವು ಕನ್ನಡದಲ್ಲಿನ ಮುದ್ರಿತ ಕೃತಿಗಳು.

'ನೀತಿಸಾರಾವಳಿ'ಯ ಮೊದಲ ಮುದ್ರಣದ ಎಲ್ಲ ಪ್ರತಿಗಳೂ ಮುಗಿದಿದ್ದು ಈಗ ಈ ಕೃತಿಯ ಎರಡನೆಯ ಆವೃತ್ತಿಯನ್ನು ನಮ್ಮ ಸಂಸ್ಕೃತ ಅಧ್ಯಯನ ಸಂಸ್ಥೆಯಿಂದ ಪ್ರಕಾಶಿಸುತ್ತಿದ್ದೇವೆ. ಶ್ರೀ ಜಗ್ಗು ಶಿಂಗರಯ್ಯಂಗಾರ್ಯರಂತಹ ವಿದ್ವಾಂಸರಿಂದ ರಚಿತವಾದ ಈ ಕೃತಿಯನ್ನು ಪ್ರಕಟಿಸುವುದು ನಮಗೆ ತುಂಬ ಸಂತೋಷದ ವಿಷಯ. ಇದಕ್ಕೆ ಅವಕಾಶ ಮಾಡಿಕೊಟ್ಟ ಈ ಹಿರಿಯರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು.

ಇದನ್ನು ಬಹುಬೇಗ ಅಚ್ಚುಕಟ್ಟಾಗಿ ಮುದ್ರಿಸಿರುವ ಶ್ರೀಮಾನ್ ಶೇಷನಾರಾಯಣ ಅವರಿಗೆ ನಮ್ಮ ವಿಶೇಷ ಕೃತಜ್ಞತೆಗಳು.

ಪ್ರಕಾಶಕರು ಎಷ್ಟೇ ಶ್ರಮವಹಿಸಿ ಕರಡಚ್ಚು ನೋಡಿದರೂ ಕೆಲವೊಂದು ಅಚ್ಚಿನ ದೋಷಗಳು ಉಳಿದಿರಲು ಸಾಕು. ಅಂತಹವನ್ನು ತಿದ್ದಿ ಕೊನೆಗೆ ಕೊಟ್ಟಿದೆ.

**ಟಿ. ನ. ಮಂಗಳಾ**
ಕಾರ್ಯದರ್ಶಿನಿ
ಆರ್. ವಿ. ಸಂಸ್ಕೃತ ಅಧ್ಯಯನ ಸಂಸ್ಥೆ

ಶ್ರೀಃ

# ನೀತಿಸಾರಾವಳೀ

1 ಪದುಮನಾಭನು ಸಿರಿಯ ರಮಣನು
ಯದುಗಿರಿಯ ಶಿಖರದಲಿ ನೆಲಸಿಹ
ಸದಯ ನಾರಾಯಣನು ನಮ್ಮನು
ಮುದದಿ ಮಂಗಳವಿತ್ತು ಸಲಹಲಿ ಕೇಳಿ ಸಹೃದಯರೇ

2 ಕೆಲವು ನೀತಿಯ ಮಾತಹೇಳಲು
ನಲವಿನಲಿ ನಾನಿಂದು ತೊಡಗಿಹೆ-
ನೊಲಿದು ಕೇಳಲು ಮತ್ತೆ ನಡೆಸಲು
ಫಲವಿದಕೆ ಸುಖ ಕೀರ್ತಿಸದ್ಗತಿ ಕೇಳಿ ಸಹೃದಯರೇ

3 ಸೋತು ಸೊರಗದೆ ಸುಲಭ ಪದಗಳ
ಮಾತನಾಡುವ ತೆರದಿ ಜೋಡಿಸಿ
ನೀತಿ ಪದ್ಯಗಳೆಂಬ ನೂತನ
ತಾತಿ ಕನ್ನಡ ಮಾತೆಗಿಡುವೆನು ಕೇಳಿ ಸಹೃದಯರೇ

4 ಯಾರು ಹೇಳದ ನೀತಿ ವಚನವ
ನಾರಿಸುತ ರಚಿಸುವೆನು ನಾನೇ
ಧೀರನೆನ್ನುವ ಹೆಮ್ಮೆಯಿಲ್ಲವು
ತೋರಿದುದನರುಹುವೆನು ವಿನಯದಿ ಕೇಳಿ ಸಹೃದಯರೇ

5 ಆಡಬಾರದು ಸುಳ್ಳುಮಾತನು
ಮಾಡಬಾರದು ದುಷ್ಟತನವನು
ಕೊಡಬಾರದು ಕೆಟ್ಟಜನರೊಳು
ಬೇಡಬಾರದು ಹಣವ ಕೃಪಣರ ಕೇಳಿ ಸಹೃದಯರೇ

6 ಸ್ನಾನಮಾಡದೆ ತಿನ್ನಬಾರದು
ದಾನಕೊಟ್ಟುದ ಹೇಳಬಾರದು
ಮಾನಹೀನರ ಸೇರಬಾರದು
ತಾನೆ ಮೇಲೆಂದರಿಯಬಾರದು ಕೇಳಿ ಸಹೃದಯರೇ

7 ಹೆಂಗಸಿಲ್ಲದ ಮನೆಯು ಮಸಣವು
ಕಂಗಳಿಲ್ಲದ ಬದುಕು ನರಕವು
ಇಂಗು ಬೆರಸದ ಹುಳಿಯು ರುಚಿಸದು
ಅಂಗಡಿಗಳಿರದೂರು ವಿಪಿನವು ಕೇಳಿ ಸಹೃದಯರೇ

8 ಕಾಳು ಬೆಳೆಯದ ನೆಲಗಳೇತಕೆ ?
ಪಾಳುಬಿದ್ದಿಹ ಮನೆಗಳೇತಕೆ ?
ನಾಳೆಯೆನ್ನುವ ದಾನವೇತಕೆ ?
ಕೂಳು ಬಡಿಸದ ಮದುವೆಯೇತಕೆ ಹೇಳಿ ಸಹೃದಯರೇ

9 ಕಪ್ಪೆ ಬಿಸಿಲೊಳು ಬದುಕಬಲ್ಲುದೆ
ಮುಪ್ಪುಬಾರದ ಜನಗಳಿರುವರೆ
ತುಪ್ಪವಿಲ್ಲದ ಊಟ ರುಚಿಪುದೆ
ಬೆಪ್ಪ ತಪ್ಪನು ಮಾಡದಿರುವನೆ ಹೇಳಿ ಸಹೃದಯರೇ

10 ಅಂಜುಪುರುಕಿಗೆ ಸಮರ ಸರಸವೆ
ಬಂಜೆ ಬಲ್ಲಳೆ ಹೆರುವ ಕಷ್ಟವ
ಮಂಜು ಕೆಡಿಸದೆ ಕಮಲ ಕಾಂತಿಯ
ಗಂಜಿಯುರಗದ ರೋಗಿಗನ್ನವೆ ಹೇಳಿ ಸಹೃದಯರೇ

11 ಆಳಲರಿಯದೆ ಅರಸನಾಗನು
ಗಾಳಿಯಿಲ್ಲದೆ ಜೀವಿ ಬದುಕದು
ಬೇಳೆಯಿಲ್ಲದ ಸಾರು ರುಚಿಸದು
ಮೋಳೆಬಿದ್ದರೆ ಕೆರೆಯು ನಿಲ್ಲದು ಕೇಳಿ ಸಹೃದಯರೇ

12 ಮಾತು ಬಲ್ಲವ ಜಗಳವಾಡನು
ನೀತಿವಂತನು ಸೋತು ನಡೆವನು
ರೀತಿವಂತನಿಗಾತರಿಲ್ಲವು
ಜೀತಗಾರನು ಸುಖವನರಿಯನು ಕೇಳಿ ಸಹೃದಯರೇ

13 ಬಟ್ಟೆ ಬೆಟ್ಟಕೆ ಹೊದಿಸಲಳವೇ
ಸುಟ್ಟ ಬೀಜವು ಮೊಳೆತು ಬೆಳೆವುದೆ
ಗುಟ್ಟ ನೀಚನು ರಟ್ಟುಮಾಡನೆ
ಕೆಟ್ಟಮನುಜಗೆ ನೀತಿ ಹಿಡಿವುದೆ ಹೇಳಿ ಸಹೃದಯರೇ

14 ಇಲಿಯು ಬಿಲದೆಡೆ ಬೆಕ್ಕು ಸುಳಿವುದು
ಹುಲಿಯು ಜಲದೆಡೆ ಹೊಂಚುತಿರುವುದು
ಸುಳಿಯು ಸೆಳೆವುದು ನರನ ಜಲದೊಳು
ಖಳನು ಕೆಡಿಸಲು ಕಾಯುತಿರುವನು ಕೇಳಿ ಸಹೃದಯರೇ

15 ಬಾಯಿಮುತೊಳೆ ಬೆಣ್ಣೆಯುಣಿಸುತ
ಕಾಯಕಷ್ಟದಿ ದೂರ ಸರಿಯುತ
ಈಯಲಾರದೆ ಕೈಯ್ಯೊಳಿಹುದನು
ಸಾಯುವರು ತಾ ನೀಚ ಜನಗಳು ಕೇಳಿ ಸಹೃದಯರೇ

16 ಜ್ಞಾತಿಜನರೊಳು ವೈರ ಬೆಳೆಸುವ
ಮಾತು ಮಾತಿಗು ಕೋಪಗೊಳ್ಳುವ
ಭೂತದಯೆಯಿನಿತಾದರಿಲ್ಲದ
ನಾತನೇ ಬಲುಕೆಟ್ಟ ಮನುಜನು ಕೇಳಿ ಸಹೃದಯರೇ

17 ತಾಯನಿಂದಿಪ ಮನುಜ ಮನುಜನೆ
ವಾಯಸಕೆ ಪಂಜರವೆ ಸಾಕಲು
ಗಾಯ ತಗುಲದೆ ತಗುಲಿದೆಡೆಯೊಳೆ
ನಾಯಿ ಬಲ್ಲುದೆ ಶುಚಿಯ ಶುಚಿಯನು ಹೇಳಿ ಸಹೃದಯರೇ

18 ತಮ್ಮ ಸುಖಕೆಂದಿತರ ಜನಗಳ
ನೆಮ್ಮದಿಯ ಕೆಡಿಸುವರು ಬಡವರ
ಸುಮನೆಯ ಕಾಡುವರು ದುಷ್ಟರು
ಹೆಮ್ಮೆಪಡುವರು ಸಿರಿಯು ಬಂದರೆ ಕೇಳಿ ಸಹೃದಯರೇ

19 ತನಗೆ ವಿಷಯವು ತಿಳಿಯದಿದ್ದರು
ಜನರ ಮಧ್ಯದಿ ಹೆಮ್ಮೆಯಿಂದಲಿ
ಮನವು ಬಂದಂತೊದರಿ ತಾವೇ
ಮನುವುಯೆನ್ನುವರಯ್ಯ ಕೆಲವರು ಕೇಳಿ ಸಹೃದಯರೇ

20 ಅರಿತಬುಧರಿರದೆಡೆಯೊಳಿದ್ದರೆ
ನರನು ಸಾಮಾನ್ಯನೆ ಸುಪಂಡಿತ
ತರುಗಳುದಿಸದ ಕಡೆಯೊಳಿರುತಿಹ
ಹರಳುಗಿಡವದೆ ದೊಡ್ಡಮರವಲೆ ಕೇಳಿ ಸಹೃದಯರೇ

21 ಇದಿರೊಳುಪಚರಿಸುತ್ತ ಹೊಗಳುತ
ಬದಿಗಿರಿಸಿ ಬೈಯುತ್ತ ಹಿಂದೆಡೆ
ಒದರುವರು ಯಲ್ಲರನು ಕೆಲವರು
ಇದು ಮಹಾದುರ್ಗುಣವು ಜನರಿಗೆ ಕೇಳಿ ಸಹೃದಯರೇ

22 ಕೆಡುಕ ವಿದ್ಯಾಪೂರ್ಣನಾದರು
ಬಿಡುವುದುಂಚಿತವು ಸಂಗವವನೊಳು
ಹೆಡೆಯು ರತ್ನದಿ ಸರ್ಪವೆಂರೆದರು
ನಡುಗಿಸದೆ ಜನಮನವ ಭಯದಿಂ ಹೇಳಿ ಸಹೃದಯರೇ

23 ಕಾಮಿಗಿಲ್ಲವು ಭಯವು ನಾಚಿಕೆ
ಪ್ರೇಮವಿಲ್ಲವು ಹಣವಸುಲಿವಗೆ
ನೇಮವಿಲ್ಲವು ಹೆಂಡಕುಡಿವಗೆ
ಸಾಮವಚನವು ಕ್ರೂರಿಗಿಲ್ಲವು ಕೇಳಿ ಸಹೃದಯರೇ

24 ಪಾಲಗಡಲೊಳು ಜನಿಸಿತಾದರು
ಕಾಲಕೂಟವು ಜಗವ ದಹಿಸಿತು
ಮೇಲೆನಿಪ ವಂಶದಲಿ ಜನಿಸಿಯು
ಶೀಲರಹಿತರು ಹಿಂಸೆಗೈವರು ಕೇಳಿ ಸಹೃದಯರೇ

25 ಅನಘಪುಣ್ಯವನೆಸಗೆ ದುರುಳರು
ಜನರಿಗವರಿಂದಿಹುದು ಬಾಧೆಯು
ಅನಶನವ್ರತದಲ್ಲಿ ಹುಲಿಯಿರೆ
ಕೊನೆಗೆ ಪಶು ಮಾರಣದಪಾರಣೆ ಕೇಳಿ ಸಹೃದಯರೇ

26 ಅನಘಪುಣ್ಯವನೆಸಗೆದುರುಳರು
ಜನರಿಗವರಿಂದಿಹುದು ಬಾಧೆಯು
ತನುವ ಶೋಷಿಸಿ ತಪದಿ ರಾವಣ–
ನನವರತ ಪೀಡಿಸಿದ ಜಗವನು ಕೇಳಿ ಸಹೃದಯರೇ

27 ತನ್ನ ತಪ್ಪುಗಳನ್ನು ಮರೆಸುತ–
ಲನ್ಯರಲಿ ದೋಷಗಳ ಹುಡುಕುತ
ಮನ್ನಣೆಗೆ ತಕ್ಕವರ ಜರೆಯುತ
ಉನ್ನತಿಯ ಬಯಸುವನು ದುಷ್ಟನು ಕೇಳಿ ಸಹೃದಯರೇ

28 ಸುಗುಣಿ ಕರ್ಣನ ಕೀರ್ತಿ ನಶಿಸಿತು
ಜಗದಿ ದುರ್ಯೋಧನನ ಸಂಗದಿ
ಬಗಿದ ಸಖ್ಯವು ದುಷ್ಟಜನರೊಳು
ಹಗುರಗೊಳಿಸದೆ ಸುಜನವೃಂದವ ಕೇಳಿ ಸಹೃದಯರೇ

29 ಹಿತವನರುಹಲು ಖಲರ ಕಲುಷಿತ
ಮತಿಯು ಶಾಂತಿಗೆ ಬದಲು ಕೋಪವ
ನತಿಶಯದಿ ಹೊಂದುವುದು ಫಣಿಮುಖ
ಪತಿತದುಗ್ಧವೆ ವಿಷವಿವರ್ಧಕ ಕೇಳಿ ಸಹೃದಯರೇ

30 ತನ್ನ ಕಷ್ಟವನೆಣಿಸದೆಯೆ ತಾ–
ನನ್ಯರಿಗೆ ಮಾಡುವನು ಹಿತವನು
ಮನ್ನಿಸುವ ತಪ್ಪುಗಳನಿತರರ
ಧನ್ಯನೈ ಸಜ್ಜನನು ಜಗದೊಳು ಕೇಳಿ ಸಹೃದಯರೇ

31 ಮುಂದದೊಳೂ ಮಿಗೆ ಕಷ್ಟದೆಸೆಯೊಳು
ಹೃದಯ ಸುಜನರದೊಂದೆ ವಿಧವದು
ಉದಯ ಸಮಯದೊಳಸ್ತಮಯದೊಳು
ಪದುಮ ಬಂಧುವು ಕೆಂಪಗಿರುವನು ಕೇಳಿ ಸಹೃದಯರೇ

32 ನಳಿನಪತ್ರದಿ ಜಲವು ಬೀಳಲು
ಎಲೆಗೆ ತಗುಲಿಯು ತಗುಲದಂತಿದೆ
ಅಲೆದು ಮಿಗೆ ಸಂಸಾರದೊಳು ನರ
ಸಿಲುಕಿ ಸಿಲುಕದ ತೆರದೊಳಿರೆ ಸುಖ ಕೇಳಿ ಸಹೃದಯರೇ

33 ನಿಂದಿಸಲಿ ಮಿಗೆ ನೀತಿನಿಪುಣರು
ಬಂದು ನೆಲಸಿಹ ಸಿರಿಯು ತೊಲಗಲಿ
ಇಂದೆ ಮರಣವು ಬರಲಿ ಸುಜನರ–
ದೆಂದಿಗೂ ಸತ್ಯವನು ಮೀರರು ಕೇಳಿ ಸಹೃದಯರೇ

34 ಇತರ ದೂಷಣೆಗಿವರು ಮೂಕರು
ಸತಿಯರನ್ಯರ ನೋಡೆ ಕುರುಡರು
ಕೃತಕ ವಿನಯುವನಟಿಸೆ ಮಂಕರು
ಜಿತನಿಜೇಂದ್ರಿಯರಿಂತು ಸುಜನರು ಕೇಳಿ ಸಹೃದಯರೇ

35 ಉತ್ತಮೋತ್ತಮ ಸುಗುಣವಂತರು
ಮೃತ್ಯು ಬಂದರು ಬಿಡರು ಸ್ವಗುಣವ
ಸತ್ಯಧರ್ಮವ ಕಷ್ಟದೆಸೆಯೊಳ–
ಗೆತ್ತಿತೋರುವರಾಚರಣೆಯಂಲಿ ಕೇಳಿ ಸಹೃದಯರೇ

36 ಕಷ್ಟಕೊಳಗಾಗದವನಾವನು
ಸೃಷ್ಟಿಯಲಿಗಳಿಸಿಹನು ಕೀರ್ತಿಯ
ಕಷ್ಟ ಶ್ರೇಷ್ಠತೆಗಳೆ ಯಶಸ್ಕರ
ಶ್ರೇಷ್ಠ್ಯಕಾಸಿದ ಚಿನ್ನಕಲ್ಲವೆ ಹೇಳಿ ಸಹೃದಯರೇ

37 ಸಜ್ಜನರ ಮನ ತಮ್ಮ ಕಷ್ಟದಿ
ವಜ್ರಕಿಂತಲು ಕಠಿನತರವದು
ಉಜ್ಜುಗಿಸಿ ಪರದುಃಖ ನೀಗಲು
ಮಜ್ಜಿಗೆಯೊಳಿಹ ಬೆಣ್ಣೆಗುಂಮಿದು ಕೇಳಿ ಸಹೃದಯರೇ

38 ಚಿಕ್ಕತನದಲೆ ಸಿಂಹ ಮದಜಲ
ವುಕ್ಕುವಾನೆಯ ಶಿರವ ಸಿಗಿವುದು
ತಕ್ಕುದಿದು ದೃಢಸತ್ವಯುತರಿಗೆ
ಲೆಕ್ಕಿಸರು ಬಾಲ್ಯವ ಸಮರ್ಥರು ಕೇಳಿ ಸಹೃದಯರೇ

39 ಪರರಿಗರುಹದೆ ದಾನ ಸವಿನುಡಿ
ಕರುಣೆ ಸತ್ಯವು ಧೈರ್ಯ ವಿನಯುವು
ಸ್ಮರಣೆ ನಾರಾಯಣ ಪದಾಬ್ಜದ
ಸರಳತೆಯು ಸಜ್ಜನರ ಗುಣಗಳು ಕೇಳಿ ಸಹೃದಯರೇ

40 ಪರಮಪೂಜ್ಯರ ಜೊತೆಯೊಳಲ್ಪರು
ಬರಲು ಗೌರವ ಸಲುವುದವರಿಗು
ಬೆರೆತು ಹೂವಿನಮಾಲೆಯೊಂದಿಗೆ
ಶಿರದಿ ನಾರೂ ಮೆರೆವುದಲ್ಲವೆ ಹೇಳಿ ಸಹೃದಯರೇ

41 ತನ್ನ ಲಾಭವ ತೊರೆದು ಪರಹಿತ
ವನ್ನು ಸಜ್ಜನನೆಸಗುತಿರುವನು
ಇನ್ನು ಕೆಲವರ ನಡತೆಯಿದು ತಾ
ವನ್ಯರನು ಹಿಂಸಿಸುತ ಸುಖಿಪರು ಕೇಳಿ ಸಹೃದಯರೇ

42 ದುಡಿದು ಪರಹಿತವೆಸಗಲುತ್ತಮು
ಬಿಡದೆ ನಿಜ ಸಂಖವೋವ ಮಧ್ಯಮು
ಕೆಡಿಪ ಪರರನು ಪಾಪಿ ಸ್ವಾರ್ಥಕೆ
ಕೆಡುತ ಕೆಡಿಪನೇನಪೇಳ್ವುದೊ ಕಾಣೆ ಸಹೃದಯರೇ

43 ಜಲವನುಳಿಸದು ಕಾದಕಬ್ಬಿಣ
ನಳಿನದಳ ಮುತ್ತಂತೆ ತಳೆವುದು
ಜಲಧಿ ಶುಕ್ತಿಯು ಮುತ್ತ ರಚಿಪುದು
ಖಲರ ಮಧ್ಯಮರುತ್ತಮರ ಗುಣವಿಂತು ಸಹೃದಯರೇ

44 ಆಡಿ ಬಾಯೊಳು ಮಾಡಲಾರರು
ಹೇಡಿ ಜನಗಳು ಬರಿದೆ ಮೆರೆವರು
ಮಾಡಿಯೂ ಬಲು ಕಷ್ಟಕಾರ್ಯವ
ನಾಡರದ ಜನರೊಡನೆ ಸುಜನರು ಕೇಳಿ ಸಹೃದಯರೇ

45 ಹುಳಿಯು ಹಾಲಿಗೆ ಸೇರಿದಂತೆಯೆ
ಖಳರ ಸಖ್ಯವು ಮತ್ತೆ ಸುಜನರ
ಬಳಿಯೊಳಿರುವುದು ತುಪ್ಪ ಸಕ್ಕರೆ
ಕಲಸಿ ತಿಂದಂತಿಹುದು ಜನರಿಗೆ ಕೇಳಿ ಸಹೃದಯರೇ

46 ನೆಳಲು ಹಗಲಿನ ಪೂರ್ವಭಾಗದಿ
ಬೆಳೆದುದಳಿವುದು ಮೆಲ್ಲಮೆಲ್ಲಗೆ
ಬಳಿಕ ಕಿರಿದದು ಬೆಳೆವುದುದ್ದಕೆ
ಖಳರ ಸುಜನರ ಸಖ್ಯವೀಪರಿ ಕೇಳಿ ಸಹೃದಯರೇ

47 ಖಳರು ಸಭೆಯಲಿ ಮಾತು ಕೊಟ್ಟರು
ಜಲದಿ ಲಿಪಿ ಬರೆದಂತೆ ನಿಲ್ಲದು
ಒಲಿದು ಸುಜನರದೊಮ್ಮೆ ನುಡಿದರು
ಶಿಲೆಯ ಶಾಸನದಂತೆ ಶಾಶ್ವತ ಕೇಳಿ ಸಹೃದಯರೇ

48 ಬಗೆಯೊಳೆಣಿಸುತ ಕಾವ್ಯಶಾಸ್ತ್ರವ
ನಗುತ ಸುಜನರು ಕಾಲಕಳೆವರು
ಪಗಡೆ ಜೂಜಾಟಗಳು ನಿದ್ದೆಯು
ಜಗಳವಿವು ದಿನಗೆಲಸ ಖಲರಿಗೆ ಕೇಳಿ ಸಹೃದಯರೇ

49 ಬಾಯಿ ತುಂಬದ ತಿಂಡಿಯಾದರು
ನಾಯಿ ಮೂಳೆಯ ಕಡಿದು ತಣಿವುದು
ಸಾಯುತಿದ್ದರು ಸಿಂಹ ಮದಗಜ
ಕಾಯವನು ಬಯಸುವುದು ತಿನ್ನಲು ಕೇಳಿ ಸಹೃದಯರೇ

50 ಬಾಲವಾಡಿಸುತುದರವದನವ
ನಾಲಿಗೆಯ ತೋರುತ್ತ ನಾಯಿಯು
ಕಾಲಿಗೆರಗುವುದನ್ನವಿಡುವವ
ಗೋಲವಿಸೆ ಗಜ ಮೆಲ್ಲಣುವುದು ಕೇಳಿ ಸಹೃದಯರೇ

51 ಅರಿಯದಜ್ಞರಿಗರುಹಲೊಪ್ಪುವ
ದರಿತಬುಧರಿಗೆ ಪೇಳ್ವುದತಿ ಸುಖ
ಅರಿಯದರಿತವನೆಂದು ಮೆರೆಯುವ
ನರನ ಬ್ರಹ್ಮನು ತಿದ್ದಲಾರನು ಕೇಳಿ ಸಹೃದಯರೇ

52 ಪ್ರಿಯದ ವಚನವ ನುಡಿವ ಮಿತ್ರರು
ಅಯುತರಿರುವರು ಕೇಳಲಪ್ರಿಯ
ನಯದಿ ಹಿತಕರವಚನವರುಹುವ
ದಯಿತರಿರುವರೆ ಕೇಳ್ವರಿರುವರೆ ಹೇಳಿ ಸಹೃದಯರೇ

53 ರಾಮಚಂದ್ರನು ನಳನು ದಶರಥ
ಭೀಮ ಧರ್ಮಾರ್ಜುನರು ಕರ್ಣ
ಈ ಮಹಾತ್ಮರು ಕಷ್ಟಪಟ್ಟಿರೆ
ಕ್ಷೇಮವೆಲ್ಲಿಯದಿತ್ತು ಜನರಿಗೆ ಹೇಳಿ ಸಹೃದಯರೇ

54. ಸಂಕಟವು ಬಂದಾಗ ಜನಗಳು
ವೇಂಕಾಟೇಶನ ಜಗದಿ ಬೈವರು
ಮಂಕುತನವಿದು ನಿಜವು ತಮ್ಮ ಕ–
ಳಂಕವನು ಹೊರಿಸುವುದು ಹರಿಯೊಳು ಕೇಳಿ ಸಹೃದಯರೇ

55 ಗಜವು ಭುಜಗವು ಬಂಧದಲ್ಲಿರೆ
ದ್ವಿಜಪ ಸೂರ್ಯರ ರಾಹು ಪೀಡಿಸೆ
ಸುಜನರೂ ಬಡತನಕೆ ಸಿಲುಕಿರೆ
ತ್ರಿಜಗವೂ ವಿಧಿವಶವು ನಿಜವಿದು ಕೇಳಿ ಸಹೃದಯರೇ

56 ವಿಧಿಗತಿಯನು ಮೀರಿನಡೆಯುವ
ಬುಧರು ಮೂಲೋಕದೊಳಗಿರುವರೆ
ಸಂಧೆಯಂ ನಸುರರು ಸವಿಯಲಾಯಿತೆ
ವಿಧುವು ಕಳೆಗುಂದುವುದು ಹೋಯಿತೆ ಹೇಳಿ ಸಹೃದಯರೇ

57 ಒಲಿದಿರಲು ಸಿರಿ ರೋಗದುಪಟಳ
ಕಲೆಗಳಲಿ ನಿಪುಣನಿಗೆ ಬಡತನ
ಚಲುವ ರೂಪೊಳು ವಿದ್ಯೆಬರದಿದೆ
ಗೆಲಲಶಕ್ಯದ ವಿಧಿಯ ಬಲವಿವು ಕೇಳಿ ಸಹೃದಯರೇ

58 ಖ್ಯಾತ ವೈದ್ಯನ ಗೃಹದಿ ರೋಗಿಯು
ಜಾತಕಜ್ಞನ ಮಗಳು ವಿಧವೆಯು
ಭೂತ ಪೀಡಿತೆ ಮಾಂತ್ರಿಕನ ಸತಿ
ಈ ತೆರನೆ ವಿಧಿಬಲಕೆ ಸಾಕ್ಷಿಯು ಕೇಳಿ ಸಹೃದಯರೇ

59 ಹಣೆಯು ಬರಹದ ತೆರದಿ ಫಲಗಳ
ನುಣಿಸುವುವು ಕರ್ಮಗಳು ಜೀವಿಗೆ
ದಣಿಯಲೇತಕೆ ಬರಿದೆ ನಾವೆಂ
ದೆಣಿಸಿ ಸುಮ್ಮನೆ ಕೂರಬಾರದು ಕೇಳಿ ಸಹೃದಯರೆ

60 ಪುರುಷಯತ್ನಗಳೊಡನೆ ದೈವವು
ಬೆರೆತು ಕರ್ಮದ ಫಲವ ಕೊಡುವುದು
ಬರುವ ಕಷ್ಟಗಳನ್ನು ಸಹಿಸುವ
ಹರುಷದಿಂ ಕೆಲಸಗಳ ಮಾಡಿರಿ ಕೇಳಿ ಸಹೃದಯರೇ

61 ನಡೆಯುತಿರಲಿರುವೆಗಳ ಸಾಲೇ
ಕಡಲು ದಡವನು ಸೇರಿಬಿಡುವುದು
ಕಡೆಗು ಕುಳಿತಿರೆ ಗರುಡನಾದರು
ಅಡಿಯಳತೆ ಜಾಗವನು ಸರಿಯದು ಕೇಳಿ ಸಹೃದಯರೇ

62 ಗತಿಸಿ ಹೋದುದ ಮನದಿ ಚಿಂತಿಸು
ತತಿಶಯದಿ ಕೊರಗಿದರೆ ಫಲವೇಂ
ಪ್ರತಿಭಟಿಸಿ ಹಿರಿದೆದರನೆಲ್ಲವ
ಹಿತವ ಸಾಧಿಸುವುದನು ನೋಡಿರಿ ಕೇಳಿ ಸಹೃದಯರೇ

63 ಅಡಚಣೆಯ ಭಯದಿಂದ ನೀಚರು
ತೊಡಗರೆ ಕೆಲಸವನು ಮಧ್ಯಮ-
ರೆಡವಿ ವಿಘ್ನದಿ ಬಿಡುವರುತ್ತಮ-
ರೆಡರು ಬಂದರು ಬಿಡರು ಹಿಡಿದುದ ಕೇಳಿ ಸಹೃದಯರೇ

64 ಕಷ್ಟದೆಸೆಯಲಿ ಧೈರ್ಯ ತೋರಿಸಿ-
ರಿಷ್ಟ ಜನರೊಡಗೂಡಿ ಭುಂಜಿಸಿ
ಶಿಷ್ಟರನು ನಯದಿಂದ ಪೂಜಿಸಿ
ದುಷ್ಟಜನಗಳ ದೂರ ತೊಲಗಿಸಿ ಕೇಳಿ ಸಹೃದಯರೇ

65 ಮೋಸಗಾರರ ಬಲೆಗೆ ಬೀಳದಿರಿ
ಮಾಸಿ ನಾರುವ ಬಟ್ಟೆಯುಡದಿರಿ
ಕಾಸ ಬಳಸದೆ ನೆಲದೊಳಿಡದಿರಿ
ಮೂಸದಿರಿ ಮೂಗೊಳ್ಳಗೆ ಹೂಗಳ ಕೇಳಿ ಸಹೃದಯರೇ

66 ಕೊಳೆಯ ನೀರನು ಕುಡಿಯಬಾರದು
ಚಳಿಯೊಳಗೆ ಮೈಯೊಡ್ಡಬಾರದು
ಹಳಸಿದನ್ನವ ತಿನ್ನಬಾರದು
ಘಳಿಗೆಘಳಿಗೆಗು ಉಗುಳಬಾರದು ಕೇಳಿ ಸಹೃದಯರೇ

67 ಮಕ್ಕಳಿಂದಲೆ ಮುಂದೆ ದೇಶವು
ಮಕ್ಕಳಿಂದಲೆ ಸುಖವು ಸದ್ಗತಿ
ಮಕ್ಕಳಿಂದಲೆ ನಮಗೆ ಜೀವನ
ಮಕ್ಕಳಂತಿರಲೆನಗೆ ಬಯಕೆಯು ಕೇಳಿ ಸಹೃದಯರೇ

68 ಮಕ್ಕಳಾಡುವ ತೆರದೊಳಾಡಲು
ಮುಕ್ಕಣೇಶ್ವರನವನು ಶಕ್ತನೆ
ಸಿಕ್ಕುವುದು ಪರಿಶುದ್ಧ ಭಾವವು
ಮಕ್ಕಳಲ್ಲಿಯೆ ಸಹಜ ಸಂತಸ ಕೇಳಿ ಸಹೃದಯರೇ

69 ಚಿಕ್ಕತನದಲಿ ವಿದ್ಯೆ ಕಲಿಯದೆ
ಬೆಕ್ಕಿನಂದದಿ ಕದ್ದು ತಿನ್ನುತ
ಅಕ್ಕತಂಗಿಯರನ್ನು ಗದರಿಸಿ
ಸೊಕ್ಕಿ ನಡೆಯುವ ಹುಡುಗ ಕೆಡುವನು ಕೇಳಿ ಸಹೃದಯರೇ

70 ಓದುಬರಹವ ಕಲಿಯಲಾರದೆ
ಬೀದಿಬೀದಿಗಳಲ್ಲಿ ತಿರುಗುತ
ಕಾದಿ ಹುಡುಗರ ಹೊಡೆವ ಕೆಡುಕಿಯ-
ನಾದಿನವೆ ತೊಲಗಿಸುವುದುಚಿತವು ಕೇಳಿ ಸಹೃದಯರೇ

71 ಅಂಕೆಯಿಲ್ಲದ ಕಪಿಯು ನೆಗೆಯುತ
ಲಂಕೆಯೆಲ್ಲವ ತನ್ನ ಬಾಲದ
ಬೆಂಕಿಯಿಂದಲಿ ಬೂದಿಮಾಡಿತು
ಅಂಕೆಯಿಡದಿರೆ ಹುಡುಗ ಕೆಡುವನು ಕೇಳಿ ಸಹೃದಯರೇ

72 ಪೊರೆದು ವರ್ಷಗಳೈದು ನೃಪರವೊ-
ಲಿರಿಸಿ ಸೇವಕರಂತೆ ಮುಂದಿನ
ವರುಷ ಹತ್ತನು ಬಳಿಕ ಪುತ್ರರ-
ನರಿಯಬೇಕೈ ಮಿತ್ರರಂದದಿ ಕೇಳಿ ಸಹೃದಯರೇ

73 ಹುಡುಗನಾವನು ಹಿರಿಯರುಕ್ತಿಯ
ಗಡುಸ ಸೈರಿಸಿ ಕುಗ್ಗಿ ನಡೆವನೊ
ಪಡೆವನವನುನ್ನತಿಯ ರತ್ನವ
ಕಡೆದೊಡದು ನೃಪಶಿರದಿ ಮೆರೆವುದು ಕೇಳಿ ಸಹೃದಯರೇ

74 ವಿದ್ಯೆ ಕಲಿಯಲು ಶ್ರಮಿಸುವವನಿಗೆ
ಸದ್ಯದಲ್ಲಿಯೆ ಸುಖವು ದೊರೆಯದು
ಸದ್ಯದಲ್ಲಿಯೆ ಸುಖವನಾಶಿಸೆ
ವಿದ್ಯೆಯವನಿಗೆ ಬರುವುದಿಲ್ಲವು ಕೇಳಿ ಸಹೃದಯರೇ

75 ಆಣುಗರಿಲ್ಲದ ಮನೆಯೊಳಿರುತಿಹ
ಹಣವು ಧಾನ್ಯವು ಪಶುವು ನೆಲಗಳು
ಹೆಣದ ಸಿಂಗರದಂತೆಯೆಂಬುದ
ನೆನೆಸಿ ಪಾತ್ರಕೆ ಕೊಡುವುದುಚಿತವು ಕೇಳಿ ಸಹೃದಯರೇ

76 ಗುಡುಗಿ ಮಿಂಚುತ ಮಳೆಯು ಬರದಿರೆ
ಅಡಿಗೆಯಾದುದ ಬಡಿಸದುಣದಿರೆ
ಕೊಡದೆ ತಿನ್ನದೆ ಕೊಡದೊಳಿಡೆ ಹಣ
ಕಡಲೊಳಡಗಿದ ನದಿಗೆ ಸಮವಿವು ಕೇಳಿ ಸಹೃದಯರೇ

77 ಜಿಪುಣತನವೊಂದಿರಲು ನರನೊಳು
ವಿಪುಲ ಸುಗುಣಗಳನ್ನು ಮರೆಸುತ
ಲಪಯಶವ ಹರಡುವುದು ಲೋಭಿಗೆ
ವಿಪಿನಪಾಲಾಗುವುವು ಸುಖಗಳು ಕೇಳಿ ಸಹೃದಯರೇ

78 ಕಡಲು ನದಿಗಳ ಸಿಹಿಯ ನೀರನು
ಪಡೆದು ಬಾಯಿಗೆ ಬಿಡದ ತೆರದಲಿ
ಕೆಡಿಸಿ ಬಡಬಾನಲಕೆ ತೆರುವುದು
ಕಡುಜಿಪುಣರೊಡವೆಗಳು ಪರರಿಗೆ ಕೇಳಿ ಸಹೃದಯರೇ

79 ಕೊಡುವುದನುಭವಿಸುವುದು ನಾಶವು
ಬಿಡದೆ ಹಣಕಿವು ಮೂರು ಗತಿಗಳು
ಕೊಡದೆ ತಿನ್ನದೆ ಇಡುವವನ ಹಣ
ಕಡೆಗೆ ಮೂರನೆ ಗತಿಯ ಪಡೆವುದು ಕೇಳಿ ಸಹೃದಯರೇ

80 ಬಟ್ಟೆ ಕುದುರೆಯು ಯಂತ್ರವಾಯುಧ
ಕಟ್ಟಿದೆಡೆಯೊಳೆ ಕಟ್ಟಿ ಮುಟ್ಟದೆ
ಬಿಟ್ಟರವು ಕೆಲ ದಿನಗಳಲ್ಲಿಯೆ
ಕೆಟ್ಟು ಕೆಲಸಕೆ ಬಾರದಿರುವುವು ಕೇಳಿ ಸಹೃದಯರೇ

81 ಕೊಡುವ ಮತಿಯಿರೆ ಬಡವನಾದರು
ಕೊಡುವ ತನ್ನೊಳಗಿಹುದರಲ್ಲಿಯೆ
ಹಡಗು ಹಿಡಿಸದ ಪರಿಯೊಳಿದ್ದರು
ಕೊಡನು ಜಿಪುಣನು ಕವಡೆಯೊಂದನು ಕೇಳಿ ಸಹೃದಯರೇ

82 ಪಕ್ಷಿಗಳಂ ಫಲವೃಕ್ಷದೆಡೆಯಂನು
ಭಿಕ್ಷುಕರು ಕೊಡುಗೈಯ್ಯ ದಾನಿಯೊ-
ನೀಕ್ಷಿಸಲು ತೆರಳುವರು ಲೋಕದೊ-
ಳಕ್ಷಯದ ಸುಕೃತವಿದೆ ದಾನಿಗೆ ಕೇಳಿ ಸಹೃದಯರೇ

83 ಪರರಿಗುಪದೇಶಿಸುತ ತಿದ್ದಲು
ಬರುವರೆಲ್ಲರು ಮುಂದೆ ತಾವದ
ನಿರದೆ ನಡಿಸಲು ಮಾತ್ರ ಬಯಸರು
ಬರಿದೆ ಮಾತಿನೊಳೇನು ಪಲವ್ಸ ಹೇಳಿ ಸಹೃದಯರೇ

84 ನೂರು ಜನರೊಳು ಶೂರನೊಬ್ಬನು
ಸೂರಿಸಾವಿರ ಮಂದಿಗೊಬ್ಬನು
ಚಾರುವಾಗ್ಮಿಯುಂ ಲಕ್ಷಕೊಬ್ಬನು
ಯಾರೊ ಕೇಳಿದನೀವ ದಾನಿಯು ಕಾಣೆ ಸಹೃದಯರೇ

85 ಬಡವರಿಗೆ ಕೊಡಿ ತುಂಬಿದೊಡಲಿನ
ಸಿಡುಕಿ ಮೆಲ್ಲುವ ಧನಿಕರಿಗೆ ನೀ
ವಿಡಲು ತವಕಿಸಲೇಕೆ ರೋಗಿಗೆ
ಕೊಡುವರೌಷಧ ದೃಢರಿಗೇತಕೆ ಹೇಳಿ ಸಹೃದಯರೇ

86 ಹಸಿದ ಮನುಜಗೆ ಗಂಧ ಹೂಗಳ
ಬಿಸಿಲೊಳಿರ್ಪಗೆ ಬೆಂಕಿ ಕಾಯಿಸೆ
ಕೊಸರಿ ಕೊಡಲುಪಚಾರವೇನದು
ಮಿಸುನಿಯೂ ಕಸ ಸಮಯ ತೋರದಿರೆ ಕೇಳಿ ಸಹೃದಯರೇ

87 ಕಾಲ ದೇಶವನರಿತುಕೊಡುವುದ
ಮೇಲುದಾನವು ಕಿರಿದದಾದರು
ಕಾಲಿನಲಿ ಮುಳ್ಳಿರಲು ನೃಪತಿಗೆ
ಬಾಲನೀಯುವ ಸೂಜಿಯುದೆ ನಿಧಿ ಕೇಳಿ ಸಹೃದಯರೇ

88 ಮೆಚ್ಚಿಸಲು ಜನವನ್ನು ಮಾಡುವ
ಸಚ್ಚರಿತದಿಂದೇನು ಫಲವೈ
ಮುಚ್ಚುಮರೆಯನು ಕಂಡುಹಿಡಿಯುವ
ನಚ್ಯುತನು ಜಗಕೆಲ್ಲ ಸಾಕ್ಷಿಯು ಕೇಳಿ ಸಹೃದಯರೇ

89 ಕೊಂಬು ಕುದುರೆಗೆ ಮೊಳೆತು ಬೆಳೆದರು
ಡೊಂಬರಾಗಣೆ ಚಿಗುರಿ ಬಲಿತರು
ಇಂಬನಿತ್ತರು ಗಗನ ಕೂರಲು
ನಂಬದಿರಿ ವಂಚಕರ ಮಾತನು ಕೇಳಿ ಸಹೃದಯರೇ

90 ಹೆಂಡದಿಂ ಮತಿಶಾಂತಿ ಪಡೆದರು
ಕೆಂಡಕೈಯಿಗೆ ತಣ್ಣಗಿದ್ದರು
ದುಂಡುಚಂಡಳು ಮೂಲೆ ಕೂಡರು
ಭಂಡ ಜನರೊಡನಾಟ ಕೂಡದು ಕೇಳಿ ಸಹೃದಯರೇ

91 ಪಾಯಸದ ಬಿಸಿಯಿಂದ ಮಗುವಿನ
ಬಾಯಿ ಸುಡಲುರುಬುತಲೆ ಮೊಸರನು
ಕಾಯಿಸಿದೆಯೆಂದಳುಕಿ ಕುಡಿಯಿತು
ನೋಯಿಸಲು ವಂಚಕರು ಬೆದರರೆ ಹೇಳಿ ಸಹೃದಯರೇ

92 ತನ್ನ ಜಾಗವ ಬಿಟ್ಟು ಕದಲಿದೊ-
ಡುನ್ನತಿಯ ಪಡೆಯುಂವುವು ನಾಲ್ಕಿವು
ಹೊನ್ನು ಸುಕವಿತೆ ರತ್ನ ಪಂಡಿತ-
ರೆನ್ನುವಿವುಗಳ ಮಹಿಮೆಯದ್ಭುತ ಕೇಳಿ ಸಹೃದಯರೇ

93 ಉಗುರ ಹಲ್ಲಿನ ತಲೆಯ ಕೂದಲ
ಸೊಗಸು ತನ್ನೆಡೆಯಲ್ಲಿ ಮಾತ್ರವೆ
ತೆಗೆದು ಕಳಗಿಡೆ ನಿಂದ್ಯವಿವುಗಳೆ
ಜಗದೊಳಧಿಕೃತ ಜನವು ಹೀಗೆಯೆ ಕೇಳಿ ಸಹೃದಯರೇ

94 ಸ್ಥಾನಬಲದಿಂ ನರನಿಗತಿಶಯ
ಸ್ಥಾನ ಬಲವೇ ಮುಖ್ಯ ಜಗದೊಳು
ಶ್ವಾನವಾದರು ನೃಪರ ಬಳಿಯಿಹ
ಮಾನಿಸುತ ಸೇವಿಸುವರೆಲ್ಲರು ಕೇಳಿ ಸಹೃದಯರೇ

95 ಯುದ್ಧವೇ ಬೇಡೆಂಬ ಧರ್ಮಜ-
ಗಿದ್ದ ಕಡೆಯು ಯುಧಿಷ್ಠಿರಾಖ್ಯೆಯು
ಬುದ್ಧಿಯಿರಲಿರದಿರಲಿ ಗೌರವ
ಗದ್ದುಗೆಯೊಳಿರುವವಗೆ ಸಿದ್ಧವು ಕೇಳಿ ಸಹೃದಯರೇ

96 ಪದವಿ ಬರಲಧಿಕಾರಿ ತನ್ನಯ
ಪದದ ಗೌರವವನ್ನು ಕೆಡಿಸದೆ
ಗದರದುಪಕಾರವನೆ ಮಾಳ್ಪುದು
ಮೃದುತೆ ದಕ್ಷತೆ ಮುಖ್ಯವಿವನಿಗ ಕೇಳಿ ಸಹೃದಯರೇ

97 ವಿನಯ ವಿದ್ಯೆಗೆ ಮನಕೆ ಶಾಂತಿಯು
ಧನಕೆ ದಾನ ಶುಚಿತ್ವ ದೇಹಕೆ
ಅನವರತ ಹಿತಕಾರ್ಯಪ್ರಭುತೆಗೆ
ಘನತರದ ಭೂಷಣಗಳಿವುಗಳು ಕೇಳಿ ಸಹೃದಯರೇ

98 ಒಂದು ಘಳಿಗೆಯೊಳಾಪ್ತಮಿತ್ರತೆ
ಯೊಂದು ಘಳಿಗೆಯೊಳಧಿಕ ವೈರವ
ಹೊಂದುವಂತಹ ಚಪಲಚಿತ್ತರ
ಚಂದದೊಲುಮೆಯು ಕೂಡ ಭೀಕರ ಕೇಳಿ ಸಹೃದಯರೇ

99 ಕುಲವು ರೂಪವು ಪ್ರಭುತೆ ಯೌವನ
ಕಲೆಯಲವಿವೇಕಿಗಳಿಗಿವುಗಳು
ಪ್ರಲಯದಂದದಿ ಕೆಡಿಸುವುದು ನಿಜ
ನೆಲೆಯಿದರ ತಿಳಿಯಿರಿ ವಿವೇಕದಿ ಕೇಳಿ ಸಹೃದಯರೇ

100 ನರಪತಿಯೆ ಪ್ರಜೆಗೆಲ್ಲ ಬಂಧುವು
ನರಪನಿಂದಲೆ ದೇಶದುನ್ನತಿ
ಸಿರಿಯು ಸಂತಸ ನೃಪತಿಯಿಂದಲೆ
ನರಪನಾಜ್ಞೆಗೆ ತಗ್ಗಿ ನಡೆಯಿರಿ ಕೇಳಿ ಸಹೃದಯರೇ

101 ಶರ್ವಪದ್ಮಜ ವಿಷ್ಣುವೆಂಬೀ
ಸರ್ವದೇವಾತ್ಮಕನು ನೃಪತಿಯು
ನಿರ್ವಿವಾದವಿದಲ್ತೆಯದರಿಂ
ದುರ್ವಿಯೊಡೆಯನೊಳಿಡಿರಿ ಭಕ್ತಿಯ ಕೇಳಿ ಸಹೃದಯರೇ

102 ಕೆಲವು ಮಕ್ಕಳ ಪೊರೆವ ತಂದೆಯೆ
ಆಲೆದು ಬಳಲುವನಲ್ತೆ ಹೀಗಿರೆ
ಒಲಿದು ಪ್ರಜೆಗಳನೆಲ್ಲ ಸಲಹುವ
ಇಳೆಯಧೀಶಗೆ ಕಷ್ಟವೆಷ್ಟಿದೆ ನೋಡಿ ಸಹೃದಯರೇ

103 ದೇವರೊಲಿಯಲಿ ಕೋಪಗೊಳ್ಳಲಿ
ಸಾವಕಾಶದಿ ಫಲವು ಬರುವುದು
ಝಾವವೂ ತಡೆಯದೆಯೆ ನೃಪರನು-
ಜೀವಿಗಳಿಗಿದೆ ಸುಫಲ ದುಷ್ಫಲ ಕೇಳಿ ಸಹೃದಯರೇ

104 ರಾಜಪಾರ್ಶ್ವವ ಸೇರಿ ಬದುಕಲು
ಮೂಜಗವು ಮಿಗೆ ಪೊಗಳುವಂತಹ
ನೈಜಭಕ್ತಿಯು ಕಾರ್ಯದಕ್ಷತೆ
ಸೂಜಿಯಗ್ರದ ಬುದ್ಧಿ ಮುಖ್ಯವು ಕೇಳಿ ಸಹೃದಯರೇ

105 ಬರಿಯ ಕೈಯ್ಯಲಿ ರಾಜಸನ್ನಿಧಿ
ಗುರುಸವಿಧ ಶಿಶುವೃದ್ಧರಿಹ ಮನೆ
ಭರದಿ ದೇವಾಲಯಗಳೀ ಕಡೆ
ತೆರಳದುಪಹಾರಗಳನೊಯ್ಯುವುದು ಕೇಳಿ ಸಹೃದಯರೇ

106 ಹೊಟ್ಟುಬೆಲೆಯಿಲ್ಲದದು ನಿಜವದ
ಬಿಟ್ಟುಬಿತ್ತಿದ ಅಕ್ಕಿ ಬೆಳೆವುದೆ
ಮಟ್ಟತರವೆಂದೆಣಿಸಿಯೊಂದನು
ಬಿಟ್ಟುಕಳೆಯಲು ಬಾರದು ಕೇಳಿ ಸಹೃದಯರೇ

107 ಬಲು ಕಡಮೆಯಿದುಯೇತಕೆನ್ನುತ
ತೊಲಗಿಸಲ್ಕದು ವೃದ್ಧಿಯಾಗದು
ಜಲದ ಬಿಂದುಗಳೆಲ್ಲ ಸೇರಿಯೆ
ಜಲಧಿಪಾರವೆಯಿಲ್ಲದಾಗಿದೆ ಕೇಳಿ ಸಹೃದಯರೇ

108 ಬಿಟ್ಟು ರೀತಿಯ ಮಾಡೆ ಕಾರ್ಯವು
ಕೆಟ್ಟುಹೋದರು ಸರಿಯಿದೆನ್ನುತ
ಪಟ್ಟು ಹಿಡಿವರು ಕೆಲರು ದಿಟ್ಟರಂ
ಜಟ್ಟಿಬಾರಲದೊಂದು ವರಿಸೆಯು ಕೇಳಿ ಸಹೃದಯರೇ

109 ಅಕ್ಕತಂಗಿಯರೊಡವೆಯಾದರು
ಸಿಕ್ಕಿದರೆ ಬಿಡರದನು ಕೆಲವರು
ನೆಕ್ಕುವಂತಹ ನಾಯಿಪೀಠವ
ನಕ್ಕರೆಯ ತೋರುವುದ ಲಿಂಗದಿ ಕೇಳಿ ಸಹೃದಯರೇ

110 ಸಗಣಿಗನ ಸಹವಾಸಕಿಂತಲು
ಮಿಗೆ ಸುಗಂಧಿಗನೊಡನೆ ಜಗಳವು
ಸಿಗುವುದೇ ಮೇಲೆಂಬರದರಿಂ
ಒಗೆದು ದುಷ್ಟರ ಹೊಗಿರಿ ಸುಜನರ ಕೇಳಿ ಸಹೃದಯರೆ

111 ಚಿಕ್ಕ ತಂದೆಯು ವೊಬ್ಬನಣ್ಣನ
ಮಕ್ಕಳಿಗೆ ಉಣಲಿಕ್ಕೆ ತಾನೂ
ಇಕ್ಕಲೊಲ್ಲನು ತಿರುಪೆಯಕ್ಕಿಯ
ನಿಕ್ಕಗೊಡಿಸನು ಹೀಗೆ ಕೆಲವರು ಕೇಳಿ ಸಹೃದಯರೇ

112 ಷೆುದೆಗೆ ಬೆಂಕಿಯುನಿಕ್ಕಿ ಸುತ್ತಲು
ಚದರಿದರಳಾರಿಸುವ ತೆರದಲಿ
ಅಧಿಕ ವೆಚ್ಚದಿ ಕಡಮೆ ಗಳಿಸುವ
ಬದುಕಮಾಡಲು ತೊಡಗಬಾರದು ಕೇಳಿ ಸಹೃದಯರೇ

113 ಕೆಸರಕೈಯಲಿ ಬಳಿಯದಿದ್ದರೆ
ಮೊಸರು ಬಾಯಿಗೆ ಬರುವುದಿಲ್ಲವು
ನುಸುಳಿಕೊಳ್ಳದೆ ಕಾರ್ಯಸಮಯದೊ-
ಳಸುವತೇದರೆ ಸುಖವು ಸಿದ್ಧವು ಕೇಳಿ ಸಹೃದಯರೇ

114 ಕೊಡುವ ಕಷ್ಟಗಳನ್ನು ಸಹಿಸುತ
ಒಡಲ ತೇಯುತ ದಿನವು ದುಡಿದರು
ಒಡೆಯ ಜರೆದರು ನುಡಿಯಬಾರದು
ಬಡವ ಮುನಿದರೆ ತುಟಿಗೆ ಮಾರಿಯು ಕೇಳಿ ಸಹೃಯಯರೇ

115 ಮನೆಯೊಳಕ್ಕಿಯ ವೆಚ್ಚವಿಲ್ಲದೆ
ತನಗೆ ನೆಂಟರು ದಿನವು ಬರಲೆಂ-
ದೆನುವ ನಿಪುಣರ ಮನದ ಬಯಕೆಯ
ನೆನೆಯಬಾರದು ತರವಿದಲ್ಲವು ಕೇಳಿ ಸಹೃದಯರೇ

116 ಅತ್ತೆ ಮೇಲಿನ ಕೋಪವನು ತಾ
ಕೊತ್ತಿಯೊಳು ಸೊಸೆ ತೋರುವಂದದಿ
ಚಿತ್ತದುರುಬೇನೆಯೊಳು ತಮ್ಮಯ
ಭೃತ್ಯ ಜನರನು ಕಾಡಬಾರದು ಕೇಳಿ ಸಹೃದಯರೇ

117 ತಾನು ಕಳ್ಳನು ಪರರ ನಂಬನು
ಯೇನ ನುಡಿದರು ಶಂಕೆ ಪಡುವನು
ಹೀನ ಗುಣವಿದಾ ಬಿಡದ ಮನುಜಗೆ
ಕಾನನವು ಜಗವೆಲ್ಲಕಡೆಗಿದು ಕೇಳಿ ಸಹೃದಯರೇ

118 ಗಂಡ ಹೆಂಡಿರ ಜಗಳವದು ತಾ
ವುಂಡು ಮಲಗುವವರೆಗು ಯೆಂಬುದ
ಕಂಡು ಕಂಡೂ ಬರಿದೆಯೇತಕೊ
ಚಂಡಿತನದಲಿ ಜಗಳಗೈವರು ಕಾಣೆ ಸಹೃದಯರೇ

119 ಇಳಿಯುಮುಳುಗಿದಮೇಲೆ ನೀರೊಳು
ಚಳಿಯು ಗಾಳಿಯು ಮಳೆಯು ಭಯವೇ-
ನಳುಕದಿರಿ ತೊಡಗಿರುವ ಕಾರ್ಯದಿ
ಬಳಲದೆಯೇ ಧೈರ್ಯದಲಿ ಮಾಡಿರೆ ಕೇಳಿ ಸಹೃದಯರೇ

120 ಅಣಕಿಪರು ಜನರೆಂದು ನಾಚುತ
ದಣಿದು ಕಲಿತಿಹ ಕುಶಲ ವಿದ್ಯದಿ
ತಣಿಸದಿರೆ ಸಭಿಕರನು ಫಲವೇಂ
ಕುಣಿಯೆ ಬಂದಿರೆ ಮುಸುಕದೇತಕೆ ಹೇಳಿ ಸಹೃದಯರೇ

121 ಮನೆಯು ಕದವನು ಕೊಟ್ಟು ಬೆಳಗಿನ
ತನಕ ನಾಯನು ಕಾಯುತಿದ್ದರು
ಎನುವ ತೆರದಲಿ ಮಿತಿಯು ಮೀರಿದ
ಜನದಿ ದಾಕ್ಷಿಣ್ಯವನು ತೊರೆಯಿರಿ ಕೇಳಿ ಸಹೃದಯರೇ

122 ಅತ್ತೆಗೊಂದಿದು ಕಾಲವಾದರೆ
ಮತ್ತೆ ಸೊಸೆಗೊಂದಿಹುದು ಕಾಲವು
ಕುತ್ತವನೆ ಹಿಡಿಯುತ್ತ ಜನಗಳ-
ನೊತ್ತಿ ಕಾಡಲು ತಮಗು ಹೀಗೆಯೆ ಕೇಳಿ ಸಹೃದಯರೇ

123 ವರುಷ ಕುಂಬಾರನಿಗೆ ಮಾಡಲು
ಹರುಬಿಯೊಡೆಯಲು ನಿಮಿಷ ದೊಣ್ಣೆಗೆ
ವಿರಚಿಸಲು ವಸ್ತುಗಳ ಕಷ್ಟವು
ಹರಿದು ಮುರಿಯಲು ಕಷ್ಟವೇನಿದೆ ಹೇಳಿ ಸಹೃದಯರೇ

124 ಹೋಗುಯೆನ್ನುವ ಬದಲು ಹೊಗೆಯೆನು
ಬೇಗ ಹಾಕಿದರೆಂಬ ತೆರದಲಿ
ಸಾಗಿಸದೆ ನೀವತಿಥಿಜನಗಳ
ಕೂಗಿ ಕೈಲಾದಷ್ಟು ಉಣಲಿಡಿ ಕೇಳಿ ಸಹೃದಯರೇ

125 ಇಬ್ಬರಾಡುವ ಜಗಳದಿಂ ಬೇ
ರೊಬ್ಬರಿಗೆ ದೊರೆಯುವುದು ಲಾಭವು
ಅಬ್ಬರಿಸಿ ತಮ್ಮೊಳಗೆ ಕಾದದೆ
ಹಬ್ಬಿಸುತ ಸಖ್ಯವನು ಸುಖಿಸಿರಿ ಕೇಳಿ ಸಹೃದಯರೇ

126 ಅಗಸ ಹೊಸದರೊಳೆತ್ತಿ ಗೋಣಿಯ
ನೊಗೆದನೆನೆ ಕೆಲಮಕ್ಕಳೋದಲು
ಹಗಲಿರುಳು ಮೊದಮೊದಲು ದುಡಿವರು
ಮಗುಚಿ ನೋಡರು ಕೊನೆಗೆ ಪಾಠವ ಕೇಳಿ ಸಹೃದಯರೇ

127 ಹತ್ತು ಕಟ್ಟುವ ಬದಲು ಹೊಳೆಯುವ
ಮುತ್ತನೊಂದನು ಕಟ್ಟುಯೆಂಬರು
ಕತ್ತೆಗಳು ನಲವತ್ತಕಿಂತಲು
ಉತ್ತಮವುವೊಂದಿರಲು ಕುದುರೆಯು ಕೇಳಿ ಸಹೃದಯರೇ

128 ಹೊತ್ತು ಗೊತ್ತಿಲ್ಲದೆಯೆ ಪರರೆಡೆ
ಮತ್ತೆ ಮತ್ತೆ ಬರುತ್ತಲುಣುತಿರೆ
ಉತ್ತಮನು ತಾನಾದೊಡೇನವ
ತುತ್ತು ತೂಕವ ಕೆಡಿಸುವುದು ನಿಜ ಕೇಳಿ ಸಹೃದಯರೇ

129 ಅಂಬರವನಿಲುಕಿಸುವ ಮನೆಯಿದೆ
ಸಂಬಳವು ಸಾವಿರಕೆ ಮೇಲಿರೆ
ಜಂಬವಿಲ್ಲ ವಿವೇಕಿಗೆಂದಿಗು
ತುಂಬಿದಂತಹ ಕೊಡವು ತುಳುಕದು ಕೇಳಿ ಸಹೃದಯರೇ

130 ಹಣ್ಣೆಲೆಯ ನೋಡುತ್ತ ಚಿಗುರೆಲೆ
ಬಣ್ಣವೇರುತ ಹಾಸ್ಯಮಾಡಲು
ಅಣ್ಣ ನಿನಗೂ ನನ್ನ ಗತಿಯಿದೆ
ತಣ್ಣಗಿರುಯೆಂದುದುರಿತಾಯೆಲೆ ಕೇಳಿ ಸಹೃದಯರೇ

131 ನಳಿನನಾಭನ ಪೂಜೆಮಾಡಲು
ಗಳಿಸಬೇಕೇ ಹಣವ ಕಷ್ಟದಿ
ತುಳಸಿದಳವೊಂದಿಡಲು ಸಾಲದೆ
ಅಳಿಲ ಭಕ್ತಿಯು ಮಳಲ ಸೇವೆಯು ಕೇಳಿ ಸಹೃದಯರೇ

132 ಅರಿವನುಪದೇಶದಲಿ ಪಡೆದರು
ನರನ ನಿಜಭಾವವದು ಕದಲದು
ಉರಿಯು ಕಾವಿಗೆ ಕಾದನೀರದು
ಮರಳಿ ತಣ್ಣಗೆ ಕೊರೆಯುವಂದದಿ ಕೇಳಿ ಸಹೃದಯರೇ

133 ಸ್ನಾನ ಮಾಡಿರಲಾನೆ ಮೈಯ್ಯನು
ತಾನೆ ಧೂಳಿಂ ಕಿಡಿಸಿಕೊಳುವುದು
ಜ್ಞಾನವುಪದೇಶದಲಿಪಡೆದರು
ಮಾನವನು ದುಷ್ಕೃತ್ಯವೆಸಗುವ ನೋಡಿ ಸಹೃದಯರೇ

134 ಹಚ್ಚಿಗೊಬ್ಬರವಾಗಿ ಕಸ್ತೂರಿ
ಪಚ್ಚಕರ್ಪೂರವಡಿಯ ಪಾತಿಯೊ-
ಳಚ್ಚ ಪನ್ನೀರೆರೆದು ಬೆಳೆಯಿಸ
ಲಚ್ಚಳಿಯದೀರುಳ್ಳಿವಾಸನೆ ಕೇಳಿ ಸಹೃದಯರೇ

135 ಕೋತಿ ಹಲ್ಲನು ಕಿರಿವುದೇತಕೆ
ಓತಿ ತಲೆ ನಡುಗಿಸುವುದೇತಕೆ
ಕೊತವನು ನೆಲ ಕೆರೆಯುವುದೇತಕೆ
ಈ ತೆರನೆ ಕೆಲಜನರ ಚೇಷ್ಟೆಯು ಕೇಳಿ ಸಹೃದಯರೇ

136 ಮೊದಲೆ ಕೋತಿಯು ಹುಳಿತ ಹೆಂಡವ
ನದಕೆ ಕುಡಿಸಿರೆ ಚೇಳು ಬಾಲದ
ತುದಿಯು ಚುಚ್ಚೆ ಪಿಶಾಚ ಹಿಡಿದಿರ-
ಲದರ ಕುಚೇಷ್ಟೆಯೆಂತುದೊ ನೋಡಿ ಸಹೃದಯರೇ

137 ಜ್ಞಾನಿಗಳಲತ್ಯುತ್ತಮನು ಮೇ-
ಣೇನನರಿಯದ ಮೂಢತಮನೂ
ತಾನೆ ತಾನಾಗಿರುತ ಸುಖಿಪರು
ಹಾನಿ (ವೃದ್ಧಿ) ಗಳಿತರಜನರಿಗೆ ಕೇಳಿ ಸಹೃದಯರೇ

138 ಸತಿಗೆ ಪತಿಯೊಳು ಸರಸವುಚಿತವು
ಇತರ ಪುರುಷರೊಳವೆ ವಿರುದ್ಧವು
ಹಿತದ ಧೂಪವು ಗಂಧತರುವಿಂ-
ದಿತರ ವೃಕ್ಷದಿ ಹೊರಡಲದು ಹೊಗೆ ಕೇಳಿ ಸಹೃದಯರೇ

139 ಸರಸ ಕವಿತೆಗೆ ಮಧುರ ಗಾನಕೆ
ತರುಣಿಯರ ಸುವಿಲಾಸಭಾವಕೆ
ಕರಗಿ ಬೆರಗಾಗದ ಮನುಷ್ಯನು
ಪರಮಯೋಗಿಯದಲ್ಲದೊಡೆ ಪಶಂ ಕೇಳಿ ಸಹೃದಯರೇ

140 ಆಳು ಮುನಿದರೆ ಕೆಲಸ ನಡಿಸರೆ
ಕೋಳಿ ಕೂಗದೆ ಬೆಳಕು ಹರಿಯದೆ
ಕೆಳದಿರೆ ಜನ ಕವಿತೆಯೆಸಗರೆ
ಬಾಳು ತನ್ನಿಂದೆನಲೆಬಾರದು ಕೇಳಿ ಸಹೃದಯರೇ

141 ಕಾವ್ಯ ರಚನೆಗೆ ಧನವು ಕೀರ್ತಿಯು
ದೇವರೊಲುಮೆಯು ಲೋಕ ಸೇವೆಯುಂ
ಈ ವಿಧದ ಸತ್ಫಲಗಳಿವೆ ಇವ
ಭಾವಿಸಿಯೆ ಕವಿ ಕೃತಿಯನೆಸಗುವ ಕೇಳಿ ಸಹೃದಯರೇ

142 ರವಿಗೆ ಕಾಣದುದುದೆಲ್ಲ ಕಾಂಬುದು
ಕರುಣೆಯೆಂಬುದು ನಿಜವು ನವರಸ
ಸವಿಯು ಬಗೆಬಗೆಯಾಗಿ ಬೀರುತ
ಭುವನವೆಲ್ಲವ ಕವಿಯು ತಣಿಸುವ ಕೇಳಿ ಸಹೃದಯರೇ

143 ವನಿತೆಯೂ ಮೇಣ್ ಕವಿತೆಯೀರ್ವರು
ಘನತೆಯುಳ್ಳವರಿವರೆ ವೊಲಿದರೆ
ಎನಿತೊ ಸುಖವಿದೆ ನಾವು ಸೆಳೆಯಲು
ಮುನಿದಂ ಸರಸವ ವಿರಸಗೈಯ್ವರು ಕೇಳಿ ಸಹೃದಯರೇ

144 ಪದವ ಕೆಲವರು ರಸವ ಕೆಲವರು
ಘೃದುತ್ತರಾರ್ಥವ ಕೆಲರು ಕೇಳ್ವರು
ವಧುವಿನಂದವ ಯುವಕ ಶ್ರೇಷ್ಠಿಯು
ಪದಕನೇಯ್ವವ ವಸ್ತ್ರ ನೋಳ್ಪನು ಕೇಳಿ ಸಹೃದಯರೇ

145 ಆವ ಕವಿಜನ ಮನವ ಸೆಳೆಯುವ
ಭಾವ ರಸಗುಣ ಶೈಲಿ ತತ್ವಗ–
ಳಾವುವೂ ಕೆಡದಂತೆ ರಚಿಪನೊ
ಜೀವ ಕವಿಯುವ ಕಪಿಗಳಿತರರು ಕೇಳಿ ಸಹೃದಯರೇ

146 ರೋಗಿ ಮೃಷ್ಟಾನ್ನವನ್ನು ಜರೆವನು
ರೇಗಿ ಯುವತಿಯ ಷಂಡ ಜರೆವನು
ಹೀಗೆಯೇ ಖಲರೊಳ್ಳೆ ಕವಿತೆಯ
ಬೀಗಿ ಹೊಗಳುವ ಬದಲು ಜರೆವರು ಕೇಳಿ ಸಹೃದಯರೆ

147 ತಿಳಿವವಿ ಬುಧರಿಗಧಿಕ ಮತ್ಸರ
ತಿಳಿಯಲಾರದವರಿಗೆ ನಿಷ್ಫಲ
ಇಳೆಯಧೀಶರಿಗಿತರ ಚಿಂತೆಗ–
ಳಳಿವುದೊಡಲೊಳೆ ನಿಜ ಸುಭಾಷಿತ ಕೇಳಿ ಸಹೃದಯರೆ

148 ಕವಿಯು ಕೇವಲ ಕಾವ್ಯ ರಚಿಸಿರೆ
ಸವಿಯುಲದ ಹರಡುವರು ಸುಜನರು
ಅವತರಿಸೆ ಕಮಲಗಳು ನೀರೊಳು
ರವಿಯು ತಾನರಳಿಸುವನವುಗಳ ಕೇಳಿ ಸಹೃದಯರೆ

149 ಕವಿಯು ಹಿತನುಡಿ ಜನರ ಮನಸಲಿ
ನವಸುಬೋಧೆಯು ನೆಲಸುವಂದದಿ
ಸ್ರವಿಸಿ ನಯ ದಯೆ ಧರ್ಮಸತ್ಯಗ–
ಳಿವುಗಳನು ಸೃಜಿಸುವುವು ಸತತವು ಕೇಳಿ ಸಹೃದಯರೆ

150 ಗುಣವೆ ಪೂಜಾಸ್ಥಾನ ನರನೊಳು
ಹಣವು ಪ್ರಾಯವು ಜಾತಿಯಿವುಗಳ–
ನೆಣಿಸದೆಯೆ ಗುಣವನ್ನೆ ಗಣಿಸಿರಿ
ಮಣಿಯು ಚಿಪ್ಪಿನೊಳಿರಲು ಬಿಡುವರೆ ಹೇಳಿ ಸಹೃದಯರೇ

151 ದೋಷಗಳು ಗುಣದೊಡನೆ ಕಲೆತಿವೆ
ದೋಷವಿಲ್ಲದ ವಸ್ತುವಿಲ್ಲವು
ಘೋಷಿಸುತ ದೋಷಗಳ ಗಣ ಪೀ–
ಯೂಷವನು ಬಿಡಬಹುದೆ ಮೌಢ್ಯದಿ ಹೇಳಿ ಸಹೃದಯರೆ

152 ತಲೆಯು ತರಿದನು ಶಿವನು ಬ್ರಹ್ಮನ
ಬಲಿಯು ಹರಿ ವಂಚಿಸಿದ ಬೇಡುತ
ಕಲೆತ ಗೌತಮಸತಿಯೊಳಿಂದ್ರನು
ಎಲಲ ದೋಷವಿದೂರರಿರುವರೆ ಹೇಳಿ ಸಹೃದಯರೆ

153 ಗುಣಗಳಿರಲೊಳ್ಳೆಯುವು ತಾವೇ
ಮಿಣುಗುವುವು ಮರೆಮಾಚಲಪ್ಪುದ
ಪುಣುಗು ಕತ್ತುರಿಯಾಣೆಯಿಟ್ಟರಂ
ತಣಿಪ ಗಂಧವ ಬೀರದಿರುವುದೆ ಹೇಳಿ ಸಹೃದಯರೆ

154 ತನಗೆ ಮೇಲಾದವನ ನೋಡಲು
ಮನಕೆ ತೋರ್ಪುದು ತನ್ನ ಬಡತನ
ತನಗು ಹೀನಸ್ಥಿತಿಯೊಳಿರುವರ
ದಿನವು ನೋಡುತ ಶಾಂತಿ ಪಡೆಯಿರಿ ಕೇಳಿ ಸಹೃದಯರೆ

155 ಪುಸ್ತಕದೊಳಿಹ ವಿದ್ಯೆಯೂ ಪರ–
ಹಸ್ತದಲ್ಲಿಹ ಧನವು ಸಮಯದಿ
ವಿಸ್ತರಿಸಲುಪಯೋಗವಿಲ್ಲದೆ
ಮಸ್ತಕವ ಕೆರೆವಂತೆ ಮಾಳ್ಪುದು ಕೇಳಿ ಸಹೃದಯರೆ

156 ಮನವು ವನಿತೆಯು ಧನವು ಮೂರೂ
ಜನವು ಬದುಕಲು ಕೆಡಲು ಕಾರಣ–
ವೆನುತ ಸನ್ಮಾರ್ಗದೊಳಗಿವುಗಳ–
ನನುಗೊಳಿಸಿ ನಡೆಸಿದರೆ ಸುಖವಿದೆ ಕೇಳಿ ಸಹೃದಯರೆ

157 ಹಣ್ಣು ಹೂವುಗಳಂ ಮಧುರ ರೂಪವ
ಹೆಣ್ಣು ಹೊನ್ನುಗಳಿವುಗಳಲಿ ತಾ
ಕಣ್ಣನಿಡದಿಹ ಮನುಜನಿದ್ದರೆ
ಪುಣ್ಯವಿದು ಜಿತಚಿತ್ತನಾತನೆ ಕೇಳಿ ಸಹೃಡಯರೆ

158 ತರುಣಿ ದೇಹವೆ ವಿಪಿನ ಕುಚಯುಗ
ಗಿರಿಗಳಿರಲದರೊಳಗೆ ಹೊಕ್ಕುತ–
ಲಿರುವ ಮನ್ಮಥಚೋರ ಕಳುಹಿಸೆ
ಪುರುಷಮನಪಥಿಕನನಂ ಕೆಡಕಿದೆ ಕೇಳಿ ಸಹೃದಯರ

159 ತಪದಿ ವಿಶ್ವಾಮಿತ್ರಮುನಿವರ
ವಿಪುಲ ಶಕ್ತಿಯು ಗಳಿಸುತಿರಲದ–
ನಪಹರಿಸಿ ಮೇನಿಕೆಯು ಗೆಲಿದಳಂ
ಜಪದ ಬಲ ಚಪಲಾಕ್ಷಿಯಿರದೆಡೆ ಕೇಳಿ ಸಹೃದಯರೇ

160 ಗೃಹಿಣಿಯಿರದಿರೆ ಗೃಹವದಲ್ಲವು
ಗೃಹದ ರಾಜ್ಯದ ದೇವಿ ವನಿತೆಯು
ಇಹಪರದ ಶುಭ ಸೂತ್ರಧಾರಿಣಿ
ಗೃಹಿಣಿ ಗೌರವ ನಾರಿಗಿಲ್ಲವೆ ಹೇಳಿ ಸಹೃದಯರೇ

161 ಹೊತ್ತು ಹೆತ್ತಿಹ ತಾಯಿಯಲ್ಲಿಡಿ
ಭಕ್ತಿಯನು ಮೊದಲೆಂದು ನುಡಿದಿದೆ
ಸೂಕ್ತವೇ ಸ್ತ್ರೀಯರನು ಪುರುಷರು
ನಿತ್ಯದಾಸ್ಯದೊಳಿಡುವರೆಂಬುದು ಹೇಳಿ ಸಹೃದಯರೆ

162 ಕೇಳಿದೆಲ್ಲವ ತಂದು ಕೊಡುತಿಹ
ಕೇಳಿಯೊಳು ಸುಖವೀವ ಪತಿಯನು
ಬಾಳಿಸುವ ಭರ ಸತಿಯದಾಗಿರ–
ಲಾಳಿಗಿಂ ಕಡೆ ನಾರಿಯೆಂಬರೆ ಹೇಳಿ ಸಹೃದಯರೇ

163 ತಂದೆ ಬಾಲ್ಯದಿ ಮುದ್ದಿನಿಂದಲಿ
ಮುಂದೆ ಪತಿಯನುರಾಗದಿಂದಲಿ
ಸಂದೆ ಮುಂಪ್ಪೊಳು ಭಕ್ತಿಯಿಂ ಸುತ
ನಿಂದು ಸಲಹಲು ಸ್ತ್ರೀಗೆ ಕಷ್ಟವೇ ಹೇಳಿ ಸಹೃದಯರೆ

164 ಬೆರತು ಪುರುಷರ ಗುಂಪಿನಲಿವಿಂಗೆ
ಹೊರಗೆ ತಿರುಗುವದೊಂದತಡೆದರೆ
ಕೊರತೆಯೇನೋ ಕಾಣೆ ನಾರಿಗೆ
ಪಿರಿದು ಸ್ವಾತಂತ್ರ್ಯವಿದೆ ಗೃಹದೊಳೆ ಕೇಳಿ ಸಹೃದಯರೇ

165 ಸೊಸೆಗೆ ನರಕದ ಹಿಂಸೆ ಕೊಡುತಿಹ
ಅಸುರ ವೃತ್ತಿಯರತ್ತೆಯರುಂ ಮೇಣ್
ಹಿಸುಕಿಯತ್ತೆಯ ಕಾಡುತಿಹ ಹೊಸ
ಸೊಸೆಯರಿರಲದೆ ನಾರಿಗವನತಿ ಕೇಳಿ ಸಹೃದಯರೆ

166 ಹತ್ತು ಹೆಂಗಸರಿರಲು ಮನೆಯೊಳು
ಹತ್ತಿ ಬೇಯುವುದಲ್ಲಿ ಪುರುಷರು
ಚಿತ್ತದೈಕ್ಯದೊಳಿಹರು ಹೆಂಗಸೊ-
ಳಿತ್ತಲೋ ತಾನ್ಯೆಕಮತ್ಯವು ಕಾಣೆ ಸಹೃದಯರೆ

167 ವಿಧವೆಯರು ನಿರ್ಗತಿಕರಿವರಿಗೆ
ಉದರ ಪೋಷಣೆ ಜೀವಿಕೆಗೆಮಿಗೆ
ಸದನಗಳ ಸಂಘಗಳ ಕಲ್ಪಿಸು-
ತೊದಗಿಸಿರಿ ಸುಚರಿತ್ರ ಸೌಖ್ಯವ ಕೇಳಿ ಸಹೃದಯರೆ

168 ಹೊಗೆಯು ಹೋಗದ ಮನೆಯು ಸತತವು
ಜಗಳವಾಡುವ ಪತ್ನಿ ಮಗಮೃಗ
ಹಗೆಗಳೆಡೆಯಲಿ ವಾಸವಿವುಗಳೆ
ಜಗದೊಳತಿಬೇಸರದ ಜೀವನ ಕೇಳಿ ಸಹೃದಯರೆ

169 ನಾರಿ ಜಾರಿಣಿ ಸೋರುತಿಹ ಮನೆ
ದೂರು ತರುತಿಹ ಸುತನು ಬಡತನ
ಕ್ರೂರಿ ಜನರೆಡೆ ದಾಸ್ಯ ಋಣಭರ
ಸೇರಲಿವು ಹಾನಿಕರ ಸುಖಮಯ ಕೇಳಿ ಸಹೃದಯರೆ

170 ಬಡವರನೆ ಕಾಡುವುದು ಕಷ್ಟವು
ಕೊಡರು ಕೂಡರು ಕೇಳರಿವನನು
ಕಡೆಗೆ ಕೈಹಿಡಿದಿರುವ ಮಡದಿಯು
ದಂಡುಕಿ ದುರ್ವಚನಗಳ ನುಡಿವಳು ಕೇಳಿ ಸಹೃದಯರೆ

171 ಇರುವ ಸುಗುಣಗಳನ್ನು ಮರೆಸುತ-
ಲಿರದ ದೋಷಗಳನ್ನು ಮೆರೆಯಿಸಿ
ಬರಿದೆ ಮನದೊಳಗಾಸೆ ಬೆಳೆಯಿಸಿ
ಕೊರಗಿಸುತ ಬಡತನವು ಕೊಲುವುದು ಕೇಳಿ ಸಹೃದಯರೆ

172 ಚಿಂತೆ ಚಿತೆಯಿವುಗಳಿಗೆ ಬಲುಪಿರಿ-
ದಂತರವು ಚಿತೆ ಹೆಣವಸುಡುವುದು
ಚಿಂತೆಸಂತತ ನರನ ಬದುಕಿರು-
ವಂತೆಯೇ ಕಾಣಿಸದೆ ಸುಡುವುದು ಕೇಳಿ ಸಹೃದಯರೇ

173 ಸೊಳ್ಳೆ ನೊಣಗಳು ಗೆದ್ದಲಿರುವೆಯು
ತೆಳ್ಳಗಿದ್ದರು ಚಿಗಟ ತಿಗಣೆಯು
ಕಳ್ಳರಂದದಿ ಸಿಗದೆ ಹಿಂಸಿಸಿ
ಕೊಳ್ಳೆ ಹೊಡೆವುದು ಜನರನೆಲ್ಲೆಡೆ ಕೇಳಿ ಸಹೃದಯರೇ

174 ಜಿರಲೆ ಜೇಡನು ಚೇಳು ಹಲ್ಲಿಯು
ಜರಿಯು ಮಿಡತೆಯು ಇಲಿಯು ಹೆಗ್ಗಣ
ನರರು ವಸಿಪೆಡೆಯಲ್ಲಿ ಸೇರಂತ
ಬರಿದೆ ಹಿಂಸೆಯ ಕೊಡುವುವಿವುಗಳು ಕೇಳಿ ಸಹೃದಯರೇ

175 ನಿತ್ಯ ರೋಗಿಯು ತುತ್ತ ಪರರಿಂ
ದೆತ್ತಿಮೆಲುವವ ಸುತ್ತುತಿರುವವ
ಸತ್ತರಿವ ಬದುಕಿದನು ಬದುಕಿರೆ
ಸತ್ತನೆಂದರೆ ಸುಳ್ಳದಲ್ಲವು ಕೇಳಿ ಸಹೃದಯರೆ

176 ವನಿತೆ ಹಿತಪರಳಾದ ಸುಂದರಿ
ತನಯ ಸುಗುಣಿಯು ಭೃತ್ಯದುಡಿವವ
ಧನವು ಕೀರ್ತ್ಯಾರೋಗ್ಯವಿವುಗಳೆ
ಮನ:ಜಗಿಲ್ಲಿಯೆ ಸ್ವರ್ಗಸುಖಗಳು ಕೇಳಿ ಸಹೃದಯರೆ

177 ತಂದೆತಾಯಿಗಳೊಲುಮೆ ಸುಖಮಯ
ಮಂದಿರವು ಧನಧಾನ್ಯ ಸತ್ಸುತ
ಇಂದುಮುಖಿ ಸತಿ ಹರಿಯ ವಂದನೆ
ಕುಂದದಾಜ್ಞೆಯು ಸುಕೃತಫಲವಿವು ಕೇಳಿ ಸಹೃದಯರೆ.

178 ಧನಿಕನೊಳೆ ಸುಗುಣಗಳು ಶೌರ್ಯವು
ಧನಿಕನಿಗೆ ಬಹು ಬಂಧುಮಿತ್ರರು
ಧನಿಕನಿಗೆ ಮನ್ನಣೆಯು ಸೌಖ್ಯವು
ಧನಿಕನೇ ಬಲು ಸುಕೃತಿಯಲ್ಲವೆ ಹೇಳಿ ಸಹೃದಯರೇ

179 ಸಂಪದವು ಬಂದಿರಲು ಗೆಳೆಯರ
ಗುಂಪು ಬಂದೊಡನಾಡಿ ಮೆಲುವುದು
ಸಂಪದದ ಸೊಂಪಡಗಿ ಕಷ್ಟದಿ
ಕಂಪಿಸುತ್ತಿರೆ ಸಖರು ಸುಳಿಯರು ಕೇಳಿ ಸಹೃದಯರೆ

180 ಗೆಳೆಯಂ ತೋರುವ ಗೆಳೆತನವನಾ–
ವಳೆದು ತಿಳಿವುದು ಕಷ್ಟದೆಸೆಯೊಳೆ
ಕಳಕಳಿಸೆ ಸಿರಿ ಸೌಖ್ಯವೈಭವ–
ವಿಳೆಯೊಳೆಲ್ಲರೂ ಗೆಳೆಯರಪ್ಪುದು ಕೇಳಿ ಸಹೃದಯರೇ

181 ಹಣವಗಳಿಸಲು ಲಜ್ಜೆ ವಂಚನೆ
ದಣಿವು ಪಾಪವಿವೆಲ್ಲವನು ತಾ–
ವೆಣಿಸದೆಯೆ ದುಡಿಯುವರು ಜನಗಳು
ಹಣಕೆ ಮಣಿಯುವ ಧೀರರಿರುವರೆ ಹೇಳಿ ಸಹೃದಯರೇ

182 ಹತ್ತು ಹಣವಿರೆ ನೂರರೊಳಾಸೆಯು
ಮತ್ತೆ ನೂರಿರೆ ಸಾವಿರದ ಗುರಿ
ಹತ್ತು ಸಾವಿರದಿಚ್ಛೆ ಮುಂದಕೆ
ಚಿತ್ತ ಕೋಟಿಗು ತೃಪ್ತಿ ಹೊಂದದು ಕೇಳಿ ಸಹೃದಯರೇ

183 ಸತಿಪತಿಯರಗಲಿದ್ದು ದುಡಿವುದು
ಜತನದಿಂ ಪರಸೇವೆಗೈವುದು
ಮೃತಿಯ ಲಕ್ಷಿಸದೊಡಲ ತೆರುವುದು
ಹತಕ ಜಠರವು ತುಂಬಲೋಸುಗ ಕೇಳಿ ಸಹೃದಯರೇ

184 ಗೋಳಿಡುತ ಮನೆ ಮನೆಗೆ ತಿರಿವುದು
ಧೂಳು ಕಸಗಳ ಬಳಿದು ಹೊರುವುದು
ಊಳಿಗಕೆ ಬಾಯ್ಬಿಡುತ ಮಣಿವುದು
ಹಾಳು ಹೊಟ್ಟೆಯು ತುಂಬಲೋಸುಗ ಕೇಳಿ ಸಹೃದಯರೆ

185 ಬಿಸಿಲು ಮಳೆಯೊಳು ಸುತ್ತುತಿರುವುದು
ಹುಸಿವ ಜನರಡಿ ಸೇವೆಗಿಳಿವುದು
ಮಸಣವನು ಹಗಲಿರುಳು ಕಾಯ್ವುದು
ಹಸಿದ ಹೊಟ್ಟೆಯು ತುಂಬಲೋಸುಗ ಕೇಳಿ ಸಹೃದಯರೆ

186 ಗೋಪುರದ ತುದಿಗೇರಿ ಬಳಿವುದು
ಕೂಪದೊಳು ಕಲ್ಲೊಡೆದು ತೆಗೆವುದು
ಕೋಪಿಸುವ ಜನರೊಲಿಸಲಳಿವುದು
ಪಾಪಿ ಜಠರವು ತುಂಬಲೋಸುಗ ಕೇಳಿ ಸಹೃದಯರೆ

187 ದಿಂಬೊರಗಿ ತನ್ನೊಡೆಯನುಗುಂಳುವ
ತಂಬುಲಕೆ ಕೈಯ್ನೊಡ್ಡಿ ತೆಗೆವುದು
ಕಂಬನಿಯ ಗರೆಯುತಿಹ ಮಕ್ಕಳ
ತುಂಬಲೊಲ್ಲದ ಹೊಟ್ಟೆತುಂಬಲು ಕೇಳಿ ಸಹೃದಯರೆ

188 ರೋಗವರಿಯದೆ ಸಾಲವಿಲ್ಲದೆ
ಬಾಗಿ ಬೇಡದೆ ನರನು ದೊರಕುವ
ರಾಗಿಯಂಬಲಿಯನ್ನು ಕುಡಿದರು
ಭೋಗಿ ಜನರೊಳಗವನೆ ಮೇಲ್ಕೈ ಕೇಳಿ ಸಹೃದಯರೆ

189 ಕೊಪ್ಪರಿಗೆ ಹಣವಿದ್ದು ಕಂಡವ-
ರಪ್ಪಣೆಯೊಳುಂಣುತಿರಲು ರುಚಿಸದು
ಸೊಪ್ಪು ಬೇಯಿಸಿ ಸಂಜೆಗುಂಡರು
ವೊಪ್ಪುವುದು ಸ್ವಾತಂತ್ರ್ಯವೇ ಸುಖ ಕೇಳಿ ಸಹೃದಯರೆ

190 ಯಾಚಿಸಲು ಕೈಯೊಡ್ಡುವಾಗಲೆ
ನಾಚಿಕೆಯು ಮನುಜನನು ಜರೆವುದು
ಗೋಚರಿಸದದಡಗುವುವು ಗುಣಗಳು
ನೀಚವ್ಯಕ್ತಿಗು ನೀಚಕರವಿದು ಕೇಳಿ ಸಹೃದಯರೆ

191 ಮಾನವನು ಮಾನವನು ಬಿಡಲವ-
ಮಾನವನೆ ಸುಜನರು ನುಡಿವರವ-
ಮಾನವನೆ ಲೋಕದೊಳಧಿಕತರ
ಹಾನಿಯೆನ್ನುತ ನಿಜವಿದಲ್ಲವೆ ಹೇಳಿ ಸಹೃದಯರೆ

192 ಮನದಿ ವಿಪ್ರನುತುಷ್ಟಿಯಿರದರೆ
ಜನವನತಿಸಂತುಷ್ಟನೆಂತಿರೆ
ವನಿತೆಕುಲಜೆಯು ನಾಚದಿದ್ದರೆ
ಜನಕೆ ನಾಚಲು ವೇಶ್ಯೆ ಕೆಡುವರು ಕೇಳಿ ಸಹೃದಯರೆ

193 ಮನೆಯ ಕಲಹವು ಮಂತ್ರವೌಷಧ
ಧನವು ದಾನವು ನಿಂದೆ ಗೌರವ
ವನಿತೆಯರರತಿಯಾಯುವಿವುಗಳ
ಜನರಿಗೆಲ್ಲರಿಗರುಹಬಾರದು ಕೇಳಿ ಸಹೃದಯರೆ

194 ಎನ್ನ ತನ್ನವರೊಳಗೆ ಸಾಲಗ-
ಳನ್ನು ತೆಗೆಯಲು ಕೊಡಲು ಬಾರದು
ಅನ್ಯರೊಳು ಮಾತಾಡುವಂದದೊ-
ಳೆನ್ನಲಾಗದು ನೆಂಟರದರಿಂ ಕೇಳಿ ಸಹೃದಯರೆ

195 ಹುಟ್ಟಿರುವ ಶಿಶುವೆಲ್ಲ ಬದುಕಲು
ನೆಟ್ಟ ಬೀಜಗಳೆಲ್ಲ ಫಲಿಸಲು
ಕೊಟ್ಟ ಹಣಗಳನೆಲ್ಲ ಪಡೆಯಲು
ಬೆಟ್ಟವೇ ಜಲಧಿಯೊಳು ತೇಲದೆ ಹೇಳಿ ಸಹೃದಯರೆ

196 ಸಲಿಗೆ ಹೆಚ್ಚುತ ಬರಲು ಗೌರವ
ತೊಲಗಿ ನರನೊಳು ಸಡ್ಡೆ ಕೆಡುವುದು
ಮಲಯಗಿರಿಯೊಳ್ ವಸಿಪ ಬೇಡಿತಿ
ವೊಲೆಗೆ ಗಂಧದ ಮರವನಿಡುವಳು ಕೇಳಿ ಸಹೃದಯರೆ

197 ಮನವು ಹೊಂದುವಪರೆಗು ಮಿತ್ರರಿ-
ಗನುನಯದೊಳುಪಚಾರಯುಕ್ತವು
ಮನ ಬೆರೆಯಲುಪಚಾರ ಕೇವಲ
ಜನರ ಮೆಚ್ಚಿಗೆಯಾದವಲ್ಲವೆ ಹೇಳಿ ಸಹೃದಯರೆ

198 ತನುವು ಶಾಶ್ವತವೆಂದು ಭಾವಿಸಿ
ಧನವ ವಿದ್ಯೆಯ ಗಳಿಸಬೇಕೈ
ತನಗೆ ಮರಣವು ಬಂದು ಕಾದಿದೆ-
ಯೆನುತ ಕೂಡಲೆ ಧರ್ಮಗೈವುದು ಕೇಳಿ ಸಹೃದಯರೆ

199 ಅರುಳುಮರುಳಾವರಿಸೆ ಬುದ್ಧಿಗೆ
ಕರಣಪಾಟವ ತೊಲಗೆ ಮುದುಕನು
ಕೊರಗುತೆಂತೆಸಗುವನು ಧರ್ಮವ
ಹರಯ ಸುಕೃತವ ಗಳಿಸೆ ಸುಸಮಯ ಕೇಳಿ ಸಹೃದಯರೆ

200 ಮನವ ಬಾಲ್ಯದೊಳಾಟ ಸೆಳೆವುದು
ವನಿತೆಯರು ಯೌವನದಿ ಸೆಳೆವರು
ಕೊನೆಗೆ ಮುಪ್ಪೊಳು ಚಿಂತೆ ಸೆಳೆವುದು
ದಿನವದಾವುದೊ ಸುಕೃತವೆಸಗಲು ಕಾಣೆ ಸಹೃದಯರೆ

201 ತರುಣಿಕುಚ ತಾಂಬೂಲ ಭಾವಿಯೊ-
ಳಿರುವ ಜಲವಟತರುವಿನಡಿಯಿಪ್ಪ
ಉರಿವ ಬೇಸಿಗೆಯೊಳು ಸುಶೀತಲ
ಕೊರೆವ ದಿನದೊಳು ಬೆಚ್ಚಗಿರುವುವು ಕೇಳಿ ಸಹೃದಯರೆ

202 ತನ್ನ ಹೆಂಡತಿ ಜಹವು ಪುಸ್ತಕ
ಮುನ್ನ ನಿದ್ದೆಯು ಬರಲು ಕಾರಣ
ಇನ್ನು ಪರಸತಿದ್ಯೂತಚೌರ್ಯಗ-
ಳಿನ್ನು ನಿದ್ದೆಗೆ ವಿಘ್ನವೆಂಬರು ಕೇಳಿ ಸಹೃದಯರೆ

203 ವರನ ರೂಪವ ಕನ್ನಿಕೆಯು ಮೇಣ್
ಸಿಯುನತ್ತೆಯು ಮಾವವಿದ್ಯೆಯ
ನಿರಂಕಿಪರು ಬಂಧುಗಳು ಕುಲವನು
ಗುರುತರದ ಭೋಜನವನಿತರರು ಕೇಳಿ ಸಹೃದಯರೆ

204 ಹೆಣ್ಣುಮಕ್ಕಳ ಹೆತ್ತ ತಂದೆಗೆ
ಮಣ್ಣುಪಾಲೈ ಸುಖಸಮೃದ್ಧಿಯು
ಸಣ್ಣ ಜನಗಳ ಬೇಡಿ ವರನಿಗೆ
ಕಣ್ಣುಕಣ್ಣನು ಬಿಡುತ ದಣಿವರು ಕೇಳಿ ಸಹೃದಯರೆ

205 ವರದ ವರದಕ್ಷಿಣೆಯ ಹೊಡೆತವ
ಪರಿಹರಿಸೊ ಕನ್ಯಾಪಿತೃತ್ವವೆ
ಗುರುತರದ ತಪ್ಪಿತವೆಯೆನ್ನುತ
ಮೊರೆಯನಿಡುತಿದೆ ಜನವು ಹರಿಯೊಳು ಕೇಳಿ ಸಹೃದಯರೇ

206 ಉತ್ತಮವು ತಾನಾರ್ಜಿಸಿದ ಧನ
ವಿತ್ತಮಧ್ಯಮ ತಂದೆಯಿತ್ತುದು
ಸ್ವತ್ತದಧಮವು ತಾಯಿ ಕಡೆಯದು
ಪತ್ನಿತಂದಿಹುದಧಮಕಧಮವು ಕೇಳಿ ಸಹೃದಯರೇ

207 ತಂದೆತಾಯಿಯ ಸೇವೆಗೈಯ್ಯದೆ
ಮಂದಿರದಿ ದೇವರನು ಪೂಜಿಸೆ
ಬಂದಭಾಗ್ಯವದೇನೊ ಕಾಣೆನು
ತಂದೆತಾಯಿಯೆ ಸಕಲ ದೈವತ ಕೇಳಿ ಸಹೃದಯರೇ

208 ಮಡದಿ ಕೈಹಿಡಿದೊಡನೆ ಕೆಲವರ
ನಡತೆ ತಾಯ್ತಂದೆಗಳ ವಿಷಯದಿ
ಕೆಡುವುದಿದು ಕಡು ಮೋಸವಕಟಾ
ಹಡೆದವರ ಮುಪ್ಪಿನಲಿ ಬಿಡುವುದೆ ಕೇಳಿ ಸಹೃದಯರೆ

209 ಮರಿಯ ಸಲಹುವ ಪಕ್ಷಿಪಶುವಿಗೆ
ಮರಳಿ ಪ್ರತಿಫಲದಾಸೆ ಇರುವುದೆ
ನರನದೇತಕೆ ಸಂತರು ಕೈಬಿಡೆ
ಕೊರಗುವನೊ ಮುಪ್ಪಿನೊಳು ಸುಮ್ಮನೆ ಕಾಣೆ ಸಹೃದಯರೇ

210 ಜ್ಞಾನವೇ ಮೇಲಾದುದದರಿಂ
ಜ್ಞಾನವನು ಬೋಧಿಸುವ ಗುರುವನು
ಮಾನಿಸುತಪೂಜಿಸಲು ಸುಖವಿದೆ
ಮಾನವಗೆ ಗುರುವಿಂದ ಸದ್ಗತಿ ಕೇಳಿ ಸಹೃದಯರೇ

211 ತಂದೆತಾಯಿಗಳಿತ್ತು ದೇಹವ
ಚಂದದಿಂದಲಿ ಬೆಳಸಿಬಿಡುವರು
ಮುಂದೆ ಬೋಧಿಸಿ ಜ್ಞಾನವನು ತಾ
ಮಂದಮತಿಯನು ತೊಳೆಯುವವ ಗುರು ಕೇಳಿ ಸಹೃದಯರೇ

212 ಯಾವ ವಿದ್ಯಾರ್ಥಿಯು ನಿರಂತರ
ದೇವರಲಿ ಗುರುವಿನಲಿ ಸಮತೆಯು
ಭಾವಭಕ್ತಿಯನಿಟ್ಟು ಕಲಿವನೊ
ದೇವಿ ಶಾರದೆಯೊಲಿವಳವನಿಗೆ ಕೇಳಿ ಸಹೃದಯರೆ

213 ತಾಯಿಯಂದದಿ ಸಲಹಿ ತಂದೆವೊ
ಲಾಯತದ ಹಿತವರುಹಿ ವಿದ್ಯೆಯು
ಜಾಯೆಯಂದದಿ ಸುಖಪಡಿಸಿ ಜಸ
ವೀಯುವುದು ಇದೆ ಕಲ್ಪವೃಕ್ಷವು ಕೇಳಿ ಸಹೃದಯರೇ

214 ಧೊರೆಗೆ ನೂರ್ಮಡಿ ಮೇಲು ವಿದ್ಯಾ
ಪರಿಣತರು ಮೆರೆಯುವರು ಧರೆಯೊಳು
ಧೊರೆಗೆ ಪೂಜೆಯು ತನ್ನ ದೇಶದೊ
ಳರರೆ ಬುಧರಿಗೆ ಪೂಜೆಯೆಲ್ಲಿಯು ಕೇಳಿ ಸಹೃದಯರೇ

215 ಓದು ಕಲಿಸಿದ ಗುರುವನದಿಯೊಳ
ಗಾದಡಕೆ ಒಯ್ದುಂಬಿಗನ ತನು
ವೇದನೆಯ ನೀಗಿರುವ ವೈದ್ಯನ
ನಾದರಿಸಿ ನೆನೆವವರು ವಿರಳವು ಕೇಳಿ ಸಹೃದಯರೆ

216 ಕಾಗೆ ಕಪ್ಪಾಗಿರುವತೆರದಲಿ
ಕೋಗಿಲೆಯು ಕಪ್ಪಾದೊಡೇನಿದು
ಕೂಗಿದರೆ ಕೇಳುವರು ಬೀಗುವ
ರಾಗದೈ ಗುಣವರ್ಣ ಸಾಮ್ಯವು ಕೇಳಿ ಸಹೃದಯರೆ

217 ಒಕ್ಕಲಿಗ ಬೆಳೆ ಬೆಳೆದು ತುಂಬಲು
ಚಕ್ಕುಲಿಯು ರವೆಯುಂಡೆಲಾಡುಗ
ಳೊಕ್ಕಣೆಯು ಹೊರಡುವುದು ರೈತರೊ
ಳಕ್ಕರೆಯ ತೋರಿಸುವುದುಚಿತವು ಕೇಳಿ ಸಹೃದಯರೆ

218 ಹಳ್ಳಿಜನಗಳು ದವಸ ಬೆಳೆದರೆ
ದೊಳ್ಳುಪಟ್ಟಣಿಗರಿಗೆ ಬೆಳೆವುದು
ಕಳ್ಳಬಾರದು ಮೂಢರಿವರೆಂ
ದೊಳ್ಳೆ ನಡತೆಯ ಕಲಿಸಿರಿವರಿಗು ಕೇಳಿ ಸಹೃದಯರೆ

219 ರಸವ ಬೆಳೆದರು ದುಡಿದು ರೈತರು
ಕಸವ ತಿನ್ನುತ ದೇಶಜನರಿಗೆ
ಹೊಸ ತರದ ಧಾನ್ಯಗಳನೊಪ್ಪಿಸು
ತಸುವನುಳಿಸುವರಿವರೆ ಧನ್ಯರು ಕೇಳಿ ಸಹೃದಯರೆ

220 ಗೋವು ಮನುಜರಿಗೆಲ್ಲ ತಾಯಿಯು
ನಾವದರ ಹಾಲಿಂದ ಬೆಳೆವೆವು
ಮೇವನೊಳ್ಳೆಯದನ್ನು ಹಾಕುತ
ನೋವಿಗೆಡೆಗೊಡದಂತೆ ಸಲಹಿರಿ ಕೇಳಿ ಸಹೃದಯರೆ

221 ನಾಲಿಗೆಯ ರುಚಿ ದೇಹಪುಷ್ಟಿಯು
ಹಾಲಿನಿಂದೊದಗಿರಲು ಹಸುಗಳ
ಕೋಲಿನಿಂ ಸದೆ ಬಡಿದು ದುಡಿಯಿಸಿ
ಕಾಲಿನಿಂದೊದೆಯುವರೆ ಕೊಲ್ವರೆ ಹೇಳಿ ಸಹೃದಯರೆ

222 ತುರುಂಗಳತಿ ಸುಖದಿಂದ ಬಾಳಲು
ಸಿರಿಯು ಸಂತಸ ನೆಲಸಿ ಲೋಕಕೆ
ಪಿರಿದು ಮಂಗಳವಿಹದಿ ಪರದೊಳು
ದೊರೆಯುವುದು ತತ್ವವಿದತಿಳಿಯಿರಿ ಕೇಳಿ ಸಹೃದಯರೇ

223 ಕಾಫಿಕುಡಿಯಲು ಬೇಡಿರೆಂದರೆ
ಕೋಪ ಜನರಿಗೆ ಬೇಗ ಬರುವುದು
ಶಾಪವಿದು ಕಲಿಯುಗದಿ ಪಾಪವ
ಕಾಫಿರೂಪದಿ ವಿಧಿಯು ವಿಧಿಸಿದ ಕೇಳಿ ಸಹೃದಯರೇ

224 ಹಣವ ಕಾಫಿಯು ವೆಚ್ಚಗಿರಿಸುತ
ಉಣಲು ಬಡವರು ಸಾಲ ಮಾಡುತ
ದಣಿವುತೀರುವುದೆಂದು ಕುಡಿಯುವ
ರಣಂಗರಿಗು ಕುಡಿಸುವರು ಕಾಫಿಯು ನೋಡಿ ಸಹೃದಯರೇ

225 ದೇಹಬಲ ಕುಗ್ಗಿಸುತ ಕಾಫಿಯು
ದಾಹ ಹೆಚ್ಚಿಸಿ ತನ್ನ ಮೇಲಣ
ಮೋಹ ಬೆಳೆಯಿಸಿ ನಿಯಮವಳಿಸುವು
ದೂಹಿಸಲು ಕೆಡಕಿದರೊಳಧಿಕವು ಕೇಳಿ ಸಹೃದಯರೇ

226 ಬೀಡಿ ಸಿಗರೇಟುಗಳು ನಸ್ಯವು
ನಾಡೊಳೆಲ್ಲಡೆ ಜನರ ಮನವನು
ತೀಡಿ ಚಟ ಹೆಚ್ಚಿಸುತ ಬಡತನ
ಕೇಡುಗಳ ನೀಡುವುದನರಿಯರೆ ಹೇಳಿ ಸಹೃದಯರೇ

227 ಹೆಂಡಕುಡುಕನು ವೇಳೆ ಬಂದರೆ
ಹೆಂಡತಿಯನಡವಿಟ್ಟು ಕಡೆಗದ
ಕೊಂಡುಕುಡಿಯಲುಕೂಡ ನಾಚನು
ಉಂಡುಉಡಲಿಲ್ಲದೆಯೆ ನರಳುವ ಕೇಳಿ ಸಹೃದಯರೇ

228 ಮದ್ಯಪಾನದ ಮಹಿಮೆಯದ್ಭುತ
ಸದ್ಯದಲ್ಲದು ಸುಖವ ತೋರುತ
ಬುದ್ಧಿಗೆಡಿಸುತ ಕಡೆಗೆ ಮನೆಯೊಳ
ಗಿದ್ದುದೆಲ್ಲವನಳಿಸಿಕೊಲುವುದು ಕೇಳಿ ಸಹೃದಯರೇ

229 ಮತಿಯ ಬಲವದು ದೇಹ ಬಲಕಿಂ
ತತಿಶಯಿತವಲೆ ನರನು ತನ್ನಯ
ಮತಿಬಲದಿ ಗಜಸಿಂಹ ಮೊದಲಾ–
ದಕುಲಬಲಭರಿತಗಳ ಹಿಡಿವನು ಕೇಳಿ ಸಹೃದಯರೇ

230 ಬುದ್ಧಿ ಬಲು ಚುರುಕಾಗಿ ನರನಿಗೆ
ಯುದ್ಧರೂಪದಿ ಫಲಿಸಿತಕಟಾ
ಶುದ್ಧನಾರೋ ಜಗದೊಳಾಸೆಗೆ
ಬದ್ಧನಿಂದಲೆ ಕಷ್ಟ ಜನರಿಗೆ ಕೇಳಿ ಸಹೃದಯರೇ

231 ಅತಿವದಾನ್ಯತೆ ಕರ್ಣನಳಿಸಿತು
ಅತಿ ಕುಚೇಷ್ಟೆ ಪರೀಕ್ಷಿತಿಗೆ ಖತಿ
ಸತತವತಿಕಾಮುಕತೆ ರಾವಣ–
ಹತಿಗೆ ಕಾರಣವತಿಯು ಕೊಡದು ಕೇಳಿ ಸಹೃದಯರೇ

232 ಬಡಿಯಾಸೆಗೆ ತಾನು ತಿನ್ನದೆ
ದುಡ್ಡ ದುಡ್ಡಿಗೆ ಕೂಡಿಸಿಡುತಿರೆ
ದೊಡ್ಡ ಯುದ್ಧವು ಬಂದು ಸಳಯಲು
ಮಡ್ಡಿಯಂತಿಹರಯ್ಯ ಕೆಲವರು ಕೇಳಿ ಸಹೃದಯರೇ

233 ನೆಲದಿ ಗಗನದಿ ಜಲದೊಳೋಡುವ
ರೊಲಿದ ವಿದ್ಯುದ್ಬಲದಿ ಯಂತ್ರವ
ಚಲನೆಗೊಳಿಸುತ ಕೆಲಸ ತೆಗೆವರು
ನೆಲೆಯುನರಿಯರು ಸಹನ ಬುದ್ಧಿಗೆ ಕೇಳಿ ಸಹೃದಯರೇ

234 ಪಂಚಭೂತಗಳನ್ನು ತನ್ನಯ
ಸಂಚಿಗನುಗುಣವಾಗಿ ಹಂಚುತ
ವಂಚಿಪರು ಗಡ ದೈವಶಕ್ತಿಯ
ಮಿಂಚಿದುದ ನಾನರಿಯೆ ನರನಿಗೆ ಕೇಳಿ ಸಹೃದಯರೇ

235 ಇಷ್ಟು ಘನತೆಯ ಪಡೆದರೂ ನರ
ನೆಷ್ಟುಮಾತ್ರವು ಶಕ್ತನಲ್ಲವು
ಸೃಷ್ಟಿಕರ್ತನ ಸರ್ವಶಕ್ತನ
ದೃಷ್ಟಿಸಲು ತೃಣಕಿಂತ ಕಡೆಯಿವ ಕೇಳಿ ಸಹೃದಯರೇ

236 ನೆಲವು ಕಂಪಿಸಿ ಜನರು ಸಾಯಲು
ಜಲವು ಮಳೆಯೊಳಗುಕ್ಕಿಹರಿಯಲು
ಒಲಿದ ಬಿರುಗಾಳಿಯದು ಬೀಸಲ್ಕು
ಗೆಲಿದ ನರನಿವ್ವನೇನವೆಸಗಿದ ಹೇಳಿ ಸಹೃದಯರೇ

237 ಆಸೆಬಿಟ್ಟಿರುವವನಿಗೆಲ್ಲರು
ದಾಸರಾಗುತ ಪದಕೆ ಮಣಿವರು
ಆಸೆಗಡಿಯಾಳಾದ ಮನುಜನು
ದಾಸನಾಗುವನೆಲ್ಲ ಜನರಿಗು ಕೇಳಿ ಸಹೃದಯರೇ

238 ನರನು ತನ್ನಯಂ ಮನವಜಯಿಸಿರೆ
ಹೊರಗೆ ಲೋಕವ ಜಯಿಸಿದಂತಯೆ
ಕಿರವ ಮೆಟ್ಟುತ ನಡೆವ ಮನುಜಗೆ
ಧರಣಿಗೆಲ್ಲವು ಚರ್ಮ ಹಾಸಿದೆ ಕೇಳಿ ಸಹೃದಯರೇ

239 ಪ್ರೇಮವಿಡದಿರೆ ವಸ್ತುಜಯಂದೊಳು
ಕಾಮಕೋಪವು ಜನಿಸಲಾರವು
ಭೂಮಿಯೊಳು ತೃಣಕಾಷ್ಠವಿಲ್ಲದೆಡೆ
ಧೂಮವುಗುಳುತ ಬೆಂಕಿಯುರಿವುದೆ ಹೇಳಿ ಸಹೃದಯರೇ

240 ಮಮತೆಯೆಂಬುದ ಬಿಡಲೆಬೇಕು
ಮಮತೆಯನುಬಿಡಲಾಗದಿದ್ದರೆ
ಸಮತೆಯಿಂ ಜಗದೆಲ್ಲ ವಸ್ತುವೊ
ಳಮಿತಮಮತೆಯನಿಡುವುದುಚಿತವು ಕೇಳಿ ಸಹೃದಯರೇ

241 ಹೊರಗಿನವನವನಿವನುಯನ್ನಯ
ಪರಮಬಂಧುವುಯೆಂಬ ಭೇದವ-
ನಿರಿಸಿಹರು ತಾವಲ್ಪಮತಿಗಳು
ಧರೆಯೊಳೆಲ್ಲರು ಬಂಧು ಸುಜನರೆ ಕೇಳಿ ಸಹೃದಯರೇ

242 ರಿಪುಗಳಿರುವರೆ ಶಾಂತಿಶೀಲದಿ-
ಗಪರಿಚಯುದಡೆಯುಂಟೆ ಬುಧರಿಗೆ
ಚಪಲತೆಯನುಳಿದುಣಲು ಮಿತದಿಂ-
ದುಪಟಳವು ರೋಗಗಳದಿರುವುದೆ ಹೇಳಿ ಸಹೃದಯರೇ

243 ಶತ್ರುವಿಷಋಣರೋಗವಹ್ನಿಗ-
ಳಿತ್ತಲಾದರು ಸ್ವಲ್ಪವುಳಿದರು
ಮತ್ತೆ ಬೆಳೆದಾವರಿಸುವುವು ಇವ
ಕಿತ್ತು ನಿಶ್ಶೇಷಿಸುವುದುತ್ತಮ ಕೇಳಿ ಸಹೃದಯರೇ

244 ಮರವಕಡಿಯಲು ಮರದ ಕೊಂಬೆಯು
ಕೊರೆಯೆ ವಜ್ರವ ವಜ್ರದಗ್ರವ
ಕರಿಯ ಹಿಡಿಯಲು ಕರಿಯ ಬಳಸುವ-
ರರಿಜಯಕೆ ಬೇಕರಿಯ ಕಡೆಯುವ ಕೇಳಿ ಸಹೃದಯರೇ

245 ವಾಲಿ ಬಲುಬಲಶಾಲಿಯವನನು
ಲೀಲೆಯಿಂದಲೆ ರಾಮ ಕೊಂದನು
ಸೋಲು ತನಗಿಲ್ಲೆಂದು ಯಾರಿಗು
ಬಾಲಭಾವದ ಹೆಮ್ಮೆ ಕೂಡದು ಕೇಳಿ ಸಹೃದಯರೇ

246 ಪ್ರಬಲ ಶತ್ರುವು ಬಂದು ಗದರಿಸ-
ಲಬಲನಾದವ ತಗ್ಗಬೇಕೈ
ಸೊಬಗನಳಿಸದೆ ತೃಣದ ಮರವನೆ
ರಭಸದಿಂ ಮುರಿಯುವುದು ಗಾಳಿಯು ಕೇಳಿ ಸಹೃದಯರೇ

247 ವೈರಿಜನದಾದರಕೆ ಮೆಚ್ಚುತ
ಸೇರಲವರೊಳು ಕೊಲುವರೆಮ್ಮನು
ನೀರು ಬೆಂಕಿಯು ತೆರದಿ ಸುಡುತಿರ-
ಲಾರಿಸದೆ ಬೆಂಕಿಯನೆ ಬಿವದಲಿ ಹೇಳಿ ಸಹೃದಯರೇ

248 ನೃಪತಿಗಾಜ್ಞಾಭಂಗಪರಿಭವ
ರಿಪುವನುಪಚರಿಸಲದೆ ಪರಿಭವ
ಕಪಟಿ ಕಪಟವ ತಿಳಿಸೆ ಪರಿಭವ
ಕೃಪಣ ಪರಿಭವ ದಾನಿಕೀರ್ತನೆ ಕೇಳಿ ಸಹೃದಯರೇ

249 ದೇಹದಾಸೆಯು ಸುಖದ ಲಾಲಸೆ
ಮೋಹಜಾಲಧನೇಚ್ಛೆ ಮೂಡಿರೆ
ಆಹ ನಟಿಸಿ ವಿರಕ್ತಿಯನುಮಿಗೆ
ಸಾಹಸದಿ ವಂಚಿಸುವರಿರುವರು ಕೇಳಿ ಸಹೃದಯರೇ

250 ಕಳವು ವಂಚನೆ ಜೂಜುಗಾರಿಕೆ–
ಗಳೊಳು ನಿಪುಣತೆ ಪಡೆಯಬೇಕೈ
ಖಳರ ಸೋಗನು ತಿಳಿಯೆ ಕಲಿತುದ
ಬಳಸಬಾರದು ನಾವಿದೊಂದನು ಕೇಳಿ ಸಹೃದಯರೇ

251 ಆನೆ ಕುದುರೆಯು ಛತ್ರಚಾಮರ
ಭಾನುತೇಜದ ಮಕುಟಗದ್ದಿಗೆ
ಯೇನುಮಠಪತಿಗಿವು ಪ್ರಧಾನವೆ
ಜ್ಞಾನತಪಹಿತಬೋಧೆ ಮುಖ್ಯವು ಕೇಳಿ ಸಹೃದಯರೇ

252 ಯತಿವರರು ಮಠಪತಿಗಳಾಗಿರ–
ಲತುಲ ಭೋಗದ ಸವಿಯ ಬಯಸದೆ
ಜಿತಮನದಿ ಜಪತಪವಗೈದೊಡೆ
ಪ್ರಶವಿದಸಿಧಾರೆಯದು ದುಷ್ಕರ ಕೇಳಿ ಸಹೃದಯರೇ

253 ಮಾನಸದಿ ಮಠಪತಿಗೆ ದೃಢಕರ
ಜ್ಞಾನವೈರಾಗ್ಯಗಳು ತುಂಬಿರ–
ಲಾನೆ ಕುದುರೆಗಳೇನಗೈವುವು
ಸ್ಥಾನಗೌರವಮಾತ್ರಕಿವೆಯಿವು ಕೇಳಿ ಸಹೃದಯರೇ

254 ಬೇಡವೆಂದರುಪಾಪವೆಸಗುತ
ಕೂಡಿದಾಫಲವುಣಲು ಬಯಸರು
ಬೇಡಿಕೊಂಡರು ಪುಣ್ಯವೆಸಗದೆ
ಕಾಡಿಬೇಡುವರದರ ಫಲವನು ನೋಡಿ ಸಹೃದಯರೇ

255 ಹಿಂದೆಮಾಡಿದ ಪಾಪಗಳ ಫಲ–
ವಿಂದು ರೋಗಗಳಾಗಿ ಬರುವುದು
ನಂದಿಸಲ್ಕಿದ ಹೋಮಜಪಹರಿ–
ವಂದನೌಷಧದಾನವೆಸಗಿರಿ ಕೇಳಿ ಸಹೃದಯರೇ

256 ಅಡಗಿಹುವುಪಾಪಗಳು ಮಿಗೆಮನೆ–
ಯೊಡೆಯನವು ತಾನಾರ್ಜಿಸುವ ಕೂ–
ಡಿಡುವ ಭೋಜನವಸ್ತುವೊಳು ಗಡ
ಬಿಡಿಪರಾನ್ನವನುಣುವುದದರಿಂ ಕೇಳಿ ಸಹೃದಯರೇ

257 ರವಿಯನಾರೋಗ್ಯವನು ಪಡೆಯಲು
ಪವನಸಖನನುಧನವ ಗಳಿಸಲು
ಶಿವನ ಸುಜ್ಞಾನವನು ಹೊಂದಲು
ಭವವ ನೀಗಲು ಹರಿಯ ಭಜಿಸಿರಿ ಕೇಳಿ ಸಹೃದಯರೇ

258 ಕ್ಷಣಿಕದೇಹದ ಸುಖವ ಪಡೆಯಲು
ದಣಿವರ್ಹ ಹಗಲಿರುಳು ಹಾಗೆಯೆ
ಕ್ಷಣವನೊಂದನು ಮೋಕ್ಷರಾಜ್ಯದ
ಯಣೆಯೆಣಿಯಿಲ್ಲದ ಸುಖಕೆ ಬಳಸರು ನೋಡಿ ಸಹೃದಯರೇ

259 ಖಗಮೃಗಂಗಳು ಸತತವುಣುವವು
ಸಿಗುವುದವಕಾಹಾರವೆಲ್ಲಿಯೊ
ಹಗಲಿಗಿರುಳಿಗೆವೊಮ್ಮೆ ತಿನ್ನಲು
ಹಗಲಿರುಳು ದುಡಿಯುವವನು ಮನುಜನು ಕೇಳಿ ಸಹೃದಯರೇ

260 ಎಲ್ಲವರ್ಣವು ಮಂತ್ರಕೊದಗುವುವು–
ದೆಲ್ಲಗಿಡಮೂಲಿಕೆಗಳೌಷಧ
ಎಲ್ಲಮನುಜನು ಕೆಲಸಕರ್ಹನು
ಇಲ್ಲಿಗಿದುಯೆಂಬರಿವು ದುರ್ಲಭ ಕೇಳಿ ಸಹೃದಯರೇ

261 ಒಳಿತು ತೊಡಗಲು ಕಷ್ಟ ಫಲಸುಖ
ಒಳಿತುದಲ್ಲದು ತೊಡಗಲತಿಸುಖ
ಫಲವು ದುಃಖವು ಹೀಗೆ ಲೋಕದೊ–
ಳೊಳಿತು ಕೆಟ್ಟವುಗಳ ವಿಭಾಗವು ಕೇಳಿ ಸಹೃದಯರೇ

262 ಸೋರುವಂದದಿವೊಡಕುಮಡಕೆಯು
ನೀರು ಜೀವಿತಕಾಲಸರಿವುದು
ದಾರಿ ಹಿಡಿಯಿರಿ ಮುಂದೆ ಸದ್ಗತಿ
ಸೇರಲಿದು ಮನುಜತ್ವದುರ್ಲಭ ಕೇಳಿ ಸಹೃದಯರೇ

263 ನಿಮಿಷ ನಿಮಿಷಕೆ ಜಂತು ವರ್ಗವು
ಯಮನ ಪುರವನು ಸೇರುತಿರುವುದು
ನಮಗೆ ನಿತ್ಯವು ಕಂಡುಬಂದರು
ಅಮಮಜೀವಿಕದಾಸೆ ಬಿಡದಿದೆ ನೋಡಿ ಸಹೃದಯ:

264 ಒಡಲು ಮಲಮಯವಾಗಿ ನಾರಲು
ಮಡಿಯು ನೀರೊಳುಮುಳುಗೆ ಬರುವುದೆ
ಸುಡಿಮನದ ರಿಪುಷಡ್ಗಣಂಗಳ–
ನಿಡಿಸುಮಾಪತಿಯಲ್ಲಿ ಭಕ್ತಿಯು ಕೇಳಿ ಸಹೃದಯರೇ

265 ಅಹಹ ದೇಹದ ರಚನೆ ಪರಿಕಿಸಿ
ಗ್ರಹಿಸೆ ಬೇಸರವು ಚಿತವಿದರೊಳು
ಬಹಳ ಮೋಹದಿ ಕೊಳಲುವೀಜನ
ದಹನಕಿರಗಿದ ಶಲಭವಲ್ಲವೆ ಹೇಳಿ ಸಹೃದಯರೇ

266 ಮೂಗು ಸೊಟ್ಟಗೆ ಹರಿದ ಕಿವಿ ಏಂಗೆ
ಬಾಗಿ ಜೋಲುವ ತುಟಿಯು ತಮ್ಮಯ
ಹೀಗಿರುವ ಮುಖವನ್ನು ಮುಕುರದಿ
ಬೇಗಿ ನೋಡುತ ಕೆಲರು ನಲಿವರು ಕೇಳಿ ಸಹೃದಯರೇ

267 ತೆರದಿರಲುವೊಂಭತ್ತು ಬಾಗಿಲು
ಪರಿಪರಿಯ ಕಷ್ಟಗಳು ಬಂದರು
ಅರರೆ ತನುಪಂಜರವನೆಂದಿಗು
ತೊರೆಯಲಿಚ್ಛಿಸದಸುವಿಹಂಗವು ನೋಡಿ ಸಹೃದಯರೇ

268 ತಲೆಯು ಶೂಲೆಯು ಹಲ್ಲುಬಾಧೆಯು
ಅಲುಗಲೀಸದ ಕಿವಿಯ ಯಾತನೆ
ಕೊಲುವಕಣ್ಣಿನ ಬೇನೆ ಜಠರದ
ಮುಲುಕಿಸುತ್ತಿಹ ನೋವು ಸಹ್ಯವೆ ಹೇಳಿ ಸಹೃದಯರೇ

269 ಹುಟ್ಟಿದೆಡೆಯನು ನೆಟ್ಟಿಬೀಟದ
ಕಟ್ಟಿಡದ ವಸ್ತುಗಳ ಪರಿಯಳು
ಹುಟ್ಟಿಜಿನುಗುವ ಕೊಳೆಯನಿವುಗಳ
ದಿಟ್ಟಿಸಲು ಬಯಸುವರೆ ದೇಹವ ಹೇಳಿ ಸಹೃದಯರೆ

270 ಹೇಳಲಸದಳವಾದದೋಷದಿ
ಕೀಳುತರವೀ ದೇಹವಾದರು
ಬಾಳಿಗನುಗುಣವಾಗಿ ಬೆರೆಯುವ
ತಾಳಿಹುದು ಸದ್ಗುಣವಿದೊಂದನು ಕೇಳಿ ಸಹೃದಯರೇ

271 ಗಿರಿಯೆ ದೊಡ್ಡದು ಕಡಲು ಗಿರಿಗುಂ
ಹಿರಿದು ಕಡಲಿಗು ಗಗನ ದೊಡ್ಡದು
ಹಿರಿದು ಬ್ರಹ್ಮವು ಗಗನಕಿಂತಲು
ನರನ ಬಯಕೆಗಳಿವುಗಳಿಗುಮಿಗೆ ಕೇಳಿ ಸಹೃದಯರೇ

272 ನದಿಗಳಿಂದುದಧಿಯನು ಬೆಂಕಿಯು–
ನೊದಗಿಸಿದ ಬಹುಕಾಷ್ಠದಿಂ ಯಮ–
ರದವ ಜಂತುಸಮೂಹದಿಂ ನರ–
ಹೃದಯವಿಷ್ಟದಿ ತಣಿಸಲಪ್ಪುದೆ ಹೇಳಿ ಸಹೃದಯರೇ

273 ಬೆನ್ನು ಬಗ್ಗಿತು ಹಲ್ಲು ಬಿದ್ದಿತು
ಅನ್ನ ತಿನ್ನಲು ಜರಗದೊಲ್ಲದು
ಸನ್ನೆ ತಿಳಿಯಲು ಕಣ್ಣು ಕಾಣದು
ತನ್ನನಿನ್ನೂ ಆಸೆ ಬಿಡದಿದೆ ನೋಡಿ ಸಹೃದಯರೇ

274 ಬಲವು ತಗ್ಗಿತು ಗೆಲುವು ಕುಗ್ಗಿತು
ತಲೆಯ ಕೂದಲು ನೆರೆತು ಸಡಿಲಿತು
ಎಲುಬು ಚರ್ಮವು ಮೈಯ್ಯೊಳುಳಿದಿದೆ
ಎಲಲ ನೋಡೆ ದುರಾಸೆ ಬಿಡದಿದೆ ನೋಡಿ ಸಹೃದಯರೇ

275 ಯಮನು ದಿನಗಳನೆಣಿಸುತಿರುವನು
ಕ್ರಮದಿ ಕರ್ಮದ ಫಲವು ಬರುತಿದೆ
ಶ್ರಮವನೆಣಿಸದೆ ಧನವಗಳಿಸುವ
ಭ್ರಮೆಯಿದೇಕರದಯ್ಯ ಜನರಿಗೆ ಹೇಳಿ ಸಹೃದಯರೇ

276 ಹಣವು ಮನೆಯೊಳೆ ನಿಂತು ತೊರೆವುದು
ಹೆಣವ ಮಸಣದಿ ಬಂಧು ತೊರೆವನು
ನುಣುಚಿಕೊಳ್ಳಲು ಬಿಡದೆ ಜೀವಕೆ
ಹೆಣೆದು ದುಷ್ಕೃತ ಸುಕೃತ ಸರಿವುವು ಕೇಳಿ ಸಹೃದಯರೇ

277 ರವಿಗೆ ಬೆಳಗುವ ಶಕ್ತಿ ಕೊಟ್ಟವ
ನವಿಲ ದೇಹದಿ ಚಿತ್ರ ಬರೆದವ
ಸವಿಯ ಬಗೆಬಗೆ ಹಣ್ಣೊಳಿಟವ
ಭುವನವೆಲ್ಲವ ಕಾಯುವವ ಹರಿ ಕೇಳಿ ಸಹೃದಯರೇ

278 ತಾಯಿಯುದರದಿ ಶಿಶುವ ಬೆಳೆಸುವ
ವಾಯುವೆಲ್ಲೆಡೆ ಚಲನಗೊಳಿಸುವ
ಮಾಯೆಯಲಿ ಜಗವನ್ನೆ ನಡೆಸುವ
ತೋಯಜಾಕ್ಷನು ಹರಿಯದೊಬ್ಬನೆ ಕೇಳಿ ಸಹೃದಯರೇ

279 ಜೇಡ ನೇಯುವ ಬಲೆಯು ಗೀಜಗ
ಗೂಡು ಹೆಣೆವುದ ಕಣಜ ಹುಳುವಿನ
ಜೇಡಿ ಮಣ್ಣಿನ ಮನೆಯು ನೋಡಲು
ಕ್ರೀಡೆ ಜಗದೀಶನದು ತೋರ್ಪುದು ಕೇಳಿ ಸಹೃದಯರೇ

280 ಕೋಟಿಕೋಟಿ ಮನುಷ್ಯ ಮುಖ ಪರಿ–
ಪಾಟಿಯೊಳು ವೈವಿಧ್ಯಖಗಮೃಗ
ಕೀಟ ನರದಾಂಪತ್ಯತೃಷೆಯಿವು
ನೋಟ ಹರಿಮಹಿಮಾಂಶಲೇಶದ ಕೇಳಿ ಸಹೃದಯರೆ

281 ಇಂದು ರವಿ ನಕ್ಷತ್ರ ಗಗನದ
ಸಿಂಧು ಗಿರಿವನಜೀವಕೋಟಿಯ
ಹಿಂದು ಮುಂದೀದಿನದ ಸ್ಥಿತಿಗಳು
ಬಿಂದು ಹರಿಸಂಕಲ್ಪ ಮಹಿಮೆಯು ಕೇಳಿ ಸಹೃದಯರೇ

282 ನಿಗಮವೇದ್ಯನು ಸುಗುಣಪೂರ್ಣನು
ಜಗವನೆಲ್ಲವ ಸೃಜಿಸಿ ಸಲಹುತ
ಮಗುಳೆ ಕೊಲ್ಲುವ ಲೀಲೆಯುಳ್ಳವ
ನಗಣಿತಾದ್ಭುತ ಮಹಿಮವಿಷ್ಣುವು ಕೇಳಿ ಸಹೃದಯರೇ

283 ಕಾಮಕೋಪವ ಜರೆದು ಜವದಲಿ
ನೇಮದಿಂದಲಿ ನಿಜವ ನುಡಿಯುತ
ರಾಮನಾಮವ ಜಪಿಸುವವನಿಗೆ
ಧಾಮಪರವದು ಸಿದ್ಧವಾಗಿದೆ ಕೇಳಿ ಸಹೃದಯರೇ

284 ದಿನದೊಳೊಂದು ಮುಹೂರ್ತವಾದರು
ತನುವ ಮರೆವಂದದಲಿ ನಿರ್ಮಲ
ಮನದಿ ನರಹರಿಯನ್ನು ನೆನೆಯಲು
ಜನನ ಮರಣದ ಭಯವು ಬಿಡುವುದು ಕೇಳಿ ಸಹೃದಯರೇ

285 ತತ್ವಗಳನೊಳಗುಟ್ಟುಗಳನರಿಯುವ
ಮತ್ತಿತರ ಮತಗಳನು ದೂಷಿಸಿ
ಉತ್ತಮೋತ್ತಮ ತನ್ನದೆನದಿರಿ
ತತ್ವವೆತ್ತಲು ಜ್ಞಾನಿಗಡಗಿದೆ ಕೇಳಿ ಸಹೃದಯರೇ

286 ನಾಲಿಗೆಯು ಪರವಶವವ್ಯರ್ಥದ
ಕಾಲಹರಣದ ಹರಟೆ ಹರಟುತ
ಪೋಲುಮಾಡದೆ ಜೀವಿತವ ಹರಿ-
ಲೀಲೆ ಪೊಗಳಲು ಬಯಸರೇತಕೊ ಕಾಣೆ ಸಹೃದಯರೇ

287 ಕಲಿಯುಗದಿ ಹರಿನಾಮ ಕೀರ್ತನೆ
ಬಲುಯಶಸ್ಕರವೆಂದು ನುಡಿದಿದೆ
ಅಲಸರೆನಿಸದೆ ವಾಸುದೇವನ
ಲಲಿತನಾಮಗಳನ್ನು ಪಾಡಿರಿ ಕೇಳಿ ಸಹೃದಯರೆ

288 ಗೀತೆಯಲಿ ಹರಿಕೃಷ್ಣ ಹೇಳಿದ
ಮಾತ ನಂಬಿಹರೆಲ್ಲ ಮತದೊಳು
ಈ ತೆರನ ತತ್ವವನು ತಿಳಿದಿರ-
ಲೇತಕೋ ಬೇರೊಂದು ದೇವರು ಕಾಣೆ ಸಹೃದಯರೆ

289 ಗೊಲ್ಲರವನವನಲ್ಲ ಕೃಷ್ಣನೆ
ಯಲ್ಲಭುವನಗಳೊಡೆಯ ವಿಷ್ಣುವು
ಬಲ್ಲಮುನಿಜನರಲ್ಲಿರಮಿಸುವ-
ನಲ್ಲವೆನುವವಗಿಲ್ಲವೆಲ್ಲಿಯು ಕೇಳಿ ಸಹೃದಯರೆ

290 ಕಂಹಕ ಕುತ್ಸಿತ ತರ್ಕ ಚರ್ಚೆಯೊ-
ಳಹುದೆ ಕೃಷ್ಣನ ಮಹಿಮೆ ನಿರ್ಣಯ
ಸಹಜ ಭಕ್ತಿಯೊಳವನ ಭಜಿಸಲು
ಗಹನ ತತ್ವವ ವಿಶದಗೊಳಿಸುವ ಕೇಳಿ ಸಹೃದಯರೆ

291 ಹಾವು ಹಾಸಿಗೆ ಹಕ್ಕಿ ವಾಹನ
ಭಾವಿಸುವ ಜನರೆದೆಯೆ ಸದನವು
ದೇವಕಿಯು ನಿಜಜನನಿ ಕಾವುದು
ಗೋವನೆಂತುದೊ ಹರಿಯ ಸಿರಿತನ ಕಾಣೆ ಸಹೃದಯರೇ

292 ಹರಿಯೆ ನಾರಾಯಣನೆ ರಾಮನೆ
ಸಿರಿಯೊಡೆಯ ನರಸಿಂಹ ಕೇಶವ
ಪರಮ ಪುರುಷನೆ ಪದ್ಮನಾಭನೆ
ಶರಣನೀನೆಂದೆನುತ ಭಜಿಸಿರಿ ಕೇಳಿ ಸಹೃದಯರೇ

293 ವರದ ವೇಂಕಟರಮಣ ಮುರಹರ
ಗರುಡವಾಹನ ಕೃಷ್ಣಮಾಧವ
ಸರಸಿಜಾಕ್ಷನೆ ಚಕ್ರಪಾಣಿಯೆ
ಕರುಣಿಸೆನ್ನೊಳೆನುತ್ತ ಭಜಿಸಿರಿ ಕೇಳಿ ಸಹೃದಯರೇ

294 ವಾಸುದೇವನೆ ವಿಶ್ವಜನಕನ
ಭಾಸುರಾಂಗನೆ ಭಕ್ತವತ್ಸಲ
ದಾಸನೆಂದೆಣಿಸೆನ್ನತಪ್ಪನು
ಬೇಸರಿಲ್ಲದೆ ಮನ್ನಿಸೆನ್ನಿರಿ ಕೇಳಿ ಸಹೃದಯರೇ

295 ಕ್ಷೀರಸಾಗರಶಯನ ಮಧುರಿಪು
ನಾರದಾರ್ಚಿತ ನರಕವಾರಣ
ಚಾರುಸರ್ವಾವಯವ ಸುಂದರ
ಬೇರೆಗತಿಯಿಲ್ಲೆಂದು ಮೊರೆಯಿಡಿ ಕೇಳಿ ಸಹೃದಯರೇ

296 ಆದಿಮೂಲ ದಶಾವತಾರನ
ವೇದಶೀರ್ಷಸ್ತುತಪದಾಂಬುಜ
ಪಾದಸಂಭವಸುರಸರಿದ್ವರ
ನೀ ದಯೆಯ ತೋರೆನ್ನೊಳೆನ್ನಿರಿ ಕೇಳಿ ಸಹೃದಯರೇ

297 ಶೇಷಶಯನ ಮುಕುಂದಕೌಸ್ತುಭ–
ಭೂಷಣ ಶ್ರೀವತ್ಸಲಾಂಛನ
ದೋಷದೂರ ಜನಾರ್ದನಾಚ್ಯುತ
ಪೋಷಿಸೆನ್ನುತ ಬೇಡಿಕೊಳ್ಳಿರಿ ಕೇಳಿ ಸಹೃದಯರೇ

298 ಕೇಳಿ ಕಿವಿಯಲಿ ಹರಿಯ ಕಥೆಗಳ
ಹೇಳಿ ಬಾಯಲಿ ಹರಿಯ ಹೆಸರನು
ತಾಳಿ ಮನದಲಿ ಹರಿಯ ಮಹಿಮೆಯ
ಬಾಳಿ ಹರಿಕೃಪೆಯಿಂದ ಸುಖದಲಿ ಕೇಳಿ ಸಹೃದಯರೇ

299 ಮೂರು ನಾಲ್ಕೀತೆರದಿ ಮಾತ್ರೆಯು
ಸೇರಿ ಹದಿನಾಲ್ಕಹುದು ಪಾದಕೆ
ದೂರವೇಪ್ರಾಸಾದಿ ನಿಯಮವು
ತೋರುವುದೆ ಕಠಿನಾರ್ಥವಿದರೊಳು ಹೇಳಿ ಸಹೃದಯರೇ

300 ತಾರೆಯಿದ ಕಂಠದಲಿ ಧರಿಸಿರೆ
ಭೀತಿದುರ್ನಯ ಭೂತದಿಂದಿರ-
ದೈತರುವುದಭ್ಯುದಯಖಗಪತಿ-
ಕೇತನನು ಕರುಣಿಪವ ನಿಮ್ಮನು ಕೇಳಿ ಸಹೃದಯರೇ

301 ಎನ್ನ ಸಂಸ್ಕೃತ ಕಾವ್ಯವೆಲ್ಲವು
ಮನ್ನಣೆಯ ಪಡೆಯದೆಯೆ ಮಾಸಿವೆ
ಕನ್ನಡದ ಕೃತಿಗಳಿಗೆ ಕಾಲವಿ-
ದೆನ್ನುತಿದ ರಚಿಸಿದೆನು ಪದ್ಯವ ಕೇಳಿ ಸಹೃದಯರೇ

302 ನೀತಿಭರಿತವು ಲಲಿತ ಸರಸದ-
ರೀತಿಯಿಂದೊಪ್ಪುವುದಿದಾರೆ
ಪ್ರೀತಿಸಲಿ ಕನ್ನಡಿಗರೆಲ್ಲರು
ಖ್ಯಾತಿಬಾರದೆ ಗುಣಗಳಿದ್ದರೆ ಹೇಳಿ ಸಹೃದಯರೇ

03 ಜಗ್ಗುವಂಶದ ಶಿಂಗರಾರ್ಯನು
ತಗ್ಗಿವಿನಯದಿ ನೀತಿವಚನದ
ಸುಗ್ಗಿಯಾಗಿಹ ಪದ್ಯವಿವುಗಳ
ಹಿಗ್ಗುವಂದದಿ ಜನರು ರಚಿಸಿದ ಕೇಳಿ ಸಹೃದಯರೇ

304 ಸ್ವಾನುಭವದಲಿ ನೋಡ ಕೃತಿಯಿದ
ಮಾನನೀಯವಿದೆಂಬ ನಂಬಿಕೆ
ಶ್ರೀನಿವಾಸನ ಕರುಣೆಯಿದ್ದರೆ
ಭಾನುವಂದದಿ ಬೆಳಗಲಿಲ್ಲಿಯು ಕೇಳಿ ಸಹೃದಯರೇ

ಇಂತು ನೀತಿಯ ಪ್ರಥಮ ಭಾಗವು ಸಂಪೂರ್ಣಂ

ಶ್ರೀ ಕೃ ಷ್ಣಾ ರ್ಪ ಣ ಮ ಸ್ತು

ಶ್ರೀಃ

# ಸಾರ್ವಜ್ಞ ಪದಗಳು

## ವಿಶುದ್ಧಾ[illegible] [illegible]

1 ಸಜ್ಜನರ ಸಂಗವದು ಹೆಜ್ಜೇನು ಹೊಳು ಕಡಿತ ।
ದುರ್ಜನರ ಸಖ್ಯ ತಾನುರಿವ ಬಿಸಿಲಿನೊಳು ।
ಮಜ್ಜಿಗೆಯ ಕುಡಿತ ಸಾರ್ವಜ್ಞ

2 ಸಾಲಗಳ ಮಾಡಿ ನೀಹಾಲೋಗರುಂಡುತಣಿ ।
ಸಾಲಿಗರು ಬಂದು ಸೆಳದಾಗ ಕಿಬ್ಬದಿಯ ।
ಕೀಲ ಮುರಿದಟ್ಟು ಸಾರ್ವಜ್ಞ

3 ಕೊಟ್ಟದ್ದು ಪರರಿಂಗೆ ಕಟ್ಟಿಟ್ಟದ್ದು ತನಗೆ ।
ಕೊಟ್ಟು ನೀ ಕೆಡಬೇಡಯ್ಯ ಲೋಕದೊಳು ।
ಕೊಟ್ಟವನೆ ಕೆಟ್ಟ ಸಾರ್ವಜ್ಞ

4 ಬರೆ ಕಂಡು ಕರೆದೊಳಗೆ ಬರೆಯುಳಿದು ಕಳುಹವನ ।
ಬಿರುಸುಬೈಗಳ ನುಡಿಯಲರಿಯದನ ಹೆಸರು ।
ಸ್ಮರಿಸಲೇ ಬೇಡ ಸಾರ್ವಜ್ಞ

5 ಉಂಡುಂಡು ಮಲಗುವನ ಕಂಡವರ ಕೆಣಕುವನ ।
ರಂಡೆಯೊಳು ರಮಿಸುವಾತನನು ಗೌರವದಿ ।
ಕಂಡು ಕೊಂಡಾಡು ಸಾರ್ವಜ್ಞ

6 ಹಸಿದು ಬಂದಿಹೆನೆಂದು ಹುಸಿಯಾಡಿ ಒಳಹೊಕ್ಕು ।
ಹಸನಾಗಿ ಬಿಸಿಯುಂಡ ಬಳಿಕ ಸಿಕ್ಕಿದುದ ।
ಕಸುಕೊಂಡು ತೊಲಗು ಸಾರ್ವಜ್ಞ

7 ಬಡಜನರ ಬಂದೊಡನೆ ಹೊಡೆದಟ್ಟು ಹೊರಗಡೆಗೆ ।
ಎಡಬಿಡದೆ ಹೊಟ್ಟೆ ಬಿರಿಯುಂಡ ಧನಿಕರಿಗೆ ।
ಬಡಿಸಿ ನೀನೊಲಿಸು ಸಾರ್ವಜ್ಞ

8 ಸುಂಕುದವನೊಡಗೂಡಿ ಸುಖದುಃಖವಾಡುವನ ।
ಶಂಖವಾದ್ಯವ ವನದಿ ಪೂರೈಸುವವನ ।
ಮಂಕನೆನೆ ಮಂಕ ಸಾರ್ವಜ್ಞ

9 ಕಪ್ಪಾದ ಮುಖಕಿಡಲು ಪೌಡ್ರ್ ಪೂದುಃಪೋಷ ಸಾದು ।
ಕಪ್ಪುರದ ಪುಡಿಗಲಸಿ ಬಳಿದ ಕಣ್ಣುಗಳ ।
ರಪ್ಪೆಯೋ ಚಂದ ಸಾರ್ವಜ್ಞ

10 ಗರಿಗೆದರಿ ನವಿಲಾಡಿ ಹರುಷದಿಂ ಕುಣಿಯುತಿರೆ ।
ಉರಿವ ಕೊಳ್ಳಿಯನೆಸೆದು ನಕ್ಕು ನಲಿವವನೆ ।
ಗುರುವು ರಸಿಕರಿಗೆ ಸಾರ್ವಜ್ಞ

11 ತಲೆಯ ಕೂದಲ ಕೆದರಿ ಮೊಲೆಯ ಮುಚ್ಚದೆ ತೆರೆದು।
ಹಲುವು ಸಲವುಂಡು ಬಡಿಸುವಾಕೆಯ ಪತಿಯ ।
ಗೆಲುಮುಖವ ನೋಡು ಸಾರ್ವಜ್ಞ

12 ಕಣ್ಣು ನೋವಿಗೆ ಮದ್ದು ಸುಣ್ಣ ಮರಳನು ಬೆರಸಿ ।
ನುಣ್ಣಗರೆದೊಳಗಿಕ್ಕಿ ಬಟ್ಟೆಕಟ್ಟಿರಲು ।
ತಣ್ಣಗಾಗುವುದು ಸಾರ್ವಜ್ಞ

13 ಮೀನುವಾಸನೆಯೊಡಲು ಹೇನು ಹುಣ್ಣಿನ ತಲೆಯು ।
ಶ್ವಾನ ಬಗಳುವ ತೆರದಿ ನುಡಿವ ಸತಿಯುಳ್ಳ ।
ಮಾನವನೆ ಧನ್ಯ ಸಾರ್ವಜ್ಞ

14 ಊದಿರುವ ಮುಖ ಚಂದ ಕೂದಲಿನ ನೆರೆ ಚಂದ ।
ಸೋದರರ ಹೊಡೆದಾಟ ಚಂದ ಮನೆಯೊಳಗೆ ।
ಮೂದೇವಿ ಚಂದ ಸಾರ್ವಜ್ಞ

15 ಊರ ಹೊರಗಣ ಮನೆಯು ವಾರನಾರಿಯರೊಲುಮೆ ।
ಚೋರಜನರೊಡನಾಟ ಇವಕಿಂತಲಿನ್ನು ।
ಬೇರೆ ಸುಖವುಂಟೆ ಸಾರ್ವಜ್ಞ

16 ಒಡಹುಟ್ಟಿದವರನು ಬಡಿದಟ್ಟಿ ಮನೆಯಿಂದ ।
ಮಡದಿ ಕಡೆಯವ ಕರೆತಂದು ಅವರೊಡನೆ ।
ನಡೆಸು ಸಂಸಾರ ಸಾರ್ವಜ್ಞ

17 ಅಂಟುರೋಗವು ಸೊಗಸು ಸೊಂಟಗಜ್ಜಿಯು ಸೊಗಸು ।
ಕುಂಟು ಕುದುರೆಯು ಸೊಗಸು ಹಡೆದವರ ಹೊಡೆವ ।
ತುಂಟುಮಗ ಸೊಗಸು ಸಾರ್ವಜ್ಞ

18 ಹೆಜ್ಜೇನು ಹುಳು ಕಡಿಯೆ ಕಜ್ಜಾಯ ಮದ್ದಂತೆ ।
ಗುಜ್ಜಾರಿಯೊಡನೆ ನಡೆದ ಪಯಣದ ವೇಗ ।
ಲಜ್ಜಾ ಜನಕವೆ ಸಾರ್ವಜ್ಞ

19 ಚಂಡಾಲ ಕುಡಿಯುತಿರೆ ಹೆಂಡವನು ನುಡಿಯುವರೆ ।
ಕಂಡಾರು ಜನರೆಂಬ ಮರೆಗುಡುಕ ಗುರುವು ।
ಕೊಂಡಾಟಕರ್ಹ ಸಾರ್ವಜ್ಞ

20 ತಿರುಕರಿಗೆ ತೆರಿಗೆಯನು ಸರಕಾರ ಹಾಕಿಸಲು ।
ಬರಡು ಹಸುವೊಳು ಹಾಲ ಕರೆಯಲೆತ್ನಿಸಲು ।
ಬರಬಹುದು ಲಾಭ ಸಾರ್ವಜ್ಞ

21 ತಡೆದರೂ ಮಡದಿತಾ ಹಡೆದವರ ಮನೆಗಡರಿ ।
ಪಡೆಯಲಪಮಾನವನು ಬಿಡಬಾರದವಳ ।
ಮೃಡನಿದಕೆ ಸಾಕ್ಷಿ ಸಾರ್ವಜ್ಞ

22 ಹೆತ್ತತಾಯ್ಮನೆಯೆಂದು ಬಿತ್ತರಿಸಿ ಸತಿ ತೆರಳ–
ಲತ್ತಲೇ ನೀನೆಲಸು ಜಲಧಿಶಯನಿದಕೆ ।
ಉತ್ತಮದ ಸಾಕ್ಷಿ ಸಾರ್ವಜ್ಞ

23 ತಂದೆಯನು ಕೊಲ್ಲಿಸಲು ನಿಂದನವ ಪ್ರಹ್ಲಾದ ।
ಬಂದುದೇನಪಕೀರ್ತಿಯುವಗೆ ಪ್ರತಿಭಟಿಸಿ ।
ತಂದೆಯನೆ ಕೊಲ್ಲು ಸಾರ್ವಜ್ಞ

24 ನಂಬಿಕೆಯ ಮಾತಾಡಿ ಇಂಬನಿತ್ತುಪಚರಿಸಿ ।
ತುಂಬಿಟ್ಟ ಹಣವನಪಹರಿಸಿ ಹಣದವನ ।
ರಂಭೆಯಡೆಗಟ್ಟು ಸಾರ್ವಜ್ಞ

25 ಬಿಟ್ಟಿಯೂಟವು ಸಿಗಲು ಹೊಟ್ಟೆತುಂಬಿದೆಯೆಂದು ।
ಬಿಟ್ಟುಬಿಡಬೇಡ ಗಜವದನನೆಷ್ಟುಂಡು ।
ಕೆಟ್ಟನೇನವನು ಸಾರ್ವಜ್ಞ

26 ಗೆಲುವುಸುಖಿಗಳ ಕೊಡುವ ಬಲುಬೆಲೆಯ ಮದ್ಯವನು ।
ತಲೆತಿರುಗಿ ಬಿದ್ದರೂ ಕುಡಿಯಬಹುದಿದಕೆ ।
ಬಲರಾಮ ಸಾಕ್ಷಿ ಸಾರ್ವಜ್ಞ

27 ಸಾಕಿ ನಾಯ್ಗಳ ತಿಂಡಿಹಾಕಿ ವೆಚ್ಚವಮಾಡು ।
ಏಕೆ ಬಡವರಿಗೆ ಕೊಟ್ಟು ಪ್ರೊ ಗೆಸಗುವೆಯೊ ॥
ಜೋಕೆ ಎಚ್ಚರಿಕೆ ಸಾರ್ವಜ್ಞ

28 ನಾಯಿಗಳ ಸಾಕಿದರೆ ಕಾಯುವುವು ಮನೆಗಳನು ।
ಸಾಯಲೊಲ್ಲದ ಕುರುಡ ಕುಂಟರಿಗೆ ಕೊಡಲು ।
ನ್ಯಾಯವೇನಿಹುದು ಸಾರ್ವಜ್ಞ

29 ದಾನಮಾಡೆನ್ನುವುದು ಮಾನಹೀನರ ಮಾತು ।
ದಾನಿಕರ್ಣನ ಗತಿಯ ನೆನೆದು ಬಡವರೊಳು ।
ಮೌನವನು ಧರಿಸು ಸಾರ್ವಜ್ಞ

30 ಹತ್ತಿಬಂದರು ಹೊಡೆದು ಕಿತ್ತುಕೊಂಡರು ಧನವ ।
ತೆತ್ತರೂ ದಂಡಕ್ಕೆ ಸತ್ಪಾತ್ರಗಳಿಗೆ ।
ಎತ್ತಿಕೊಡಬೇಡ ಸಾರ್ವಜ್ಞ

ವಿರುದ್ಧಾರ್ಥ ಕಥನಂ ಸಂಪೂರ್ಣಂ

## ಯಥಾರ್ಥಾರ್ಥ ಕಥನ

1 ಅರಸಿನರಮನೆ ಸೊಗಸು ಸರಸ ಕವಿತೆಯ ಸೊಗಸು ।
ಬೆರೆಸಿಕೊಡೆ ಬೆಣ್ಣೆ ಸಕ್ಕರೆ ಸೊಗಸು ಇವಕು ।
ಹರಿಸೇವೆ ಸೊಗಸು ಸಾರ್ವಜ್ಞ

2 ದಾಸರರುಹಿದ ಪದವ ಕೂಸುಗಳ ನಗಮೊಗವ ।
ಮೋಸವರಿಯದವರ ಸಖ್ಯದ ಸವಿಯುಣಲು ।
ಬೇಸರವೆ ಜನಕೆ ಸಾರ್ವಜ್ಞ

3 ಮಂಡದಿ ಇಲ್ಲದ ಮನೆಯು ಒಡೆದ ಗಡಿಗೆಗೆ ಸಮವು ।
ಹೊಡೆದಾಡುತ್ತಿದ್ದರು ನಡೆತೆಯೊಳಿರುವ ಕೈ ।
ಹಿಡಿದವಳೆ ಲೇಸು ಸಾರ್ವಜ್ಞ

4 ಮುತ್ತಿಡುವ ತುತ್ತಿಡುವ ಚಿತ್ತಸುಖ ಬಿತ್ತರಿಪ ।
ಹೆತ್ತುವಂಶವನು ಬೆಳೆಯಿಸುವ ಸುಮುಖಿಯಹ ।
ಪತ್ನಿಯೇ ಲೇಸು ಸಾರ್ವಜ್ಞ

5 ತುಟಿಯ ಮೀರಿದ ಹಲ್ಲು ದಿಟವ ಮೆಟ್ಟುವ ಸಟೆಯು ।
ಹಟಮಾರಿ ಹೆಣ್ಣು ಇವು ಮೂರನೆದಿರಿಸುವ ।
ಭಟರುಂಟೆ ಹೇಳು ಸಾರ್ವಜ್ಞ

6 ವೃದ್ಧ ಯುವತಿಯ ಮದುವೆ ಗೃಧ್ರ ಶುಕಗಳ ಬೇಟೆ ।
ನಿರ್ಧನನ ಧನಯುತನ ಸಖ್ಯ ಇವು ಮೂರು ।
ಗರ್ದಭದ ಗಾನ ಸಾರ್ವಜ್ಞ

7 ಹೆಂಡರಿಬ್ಬರ ನಡುವೆ ಗಂಡನಿರಲದೆ ಗಂಡ ।
ಗುಂಡಿಗೆಗೆ ಗುಂಡು ಸೂಜಿಗಳ ತಾ ಚುಚಿ-
ಕೊಂಡಂತೆ ಅಕ್ಕು ಸಾರ್ವಜ್ಞ

8 ರೂಪಕ್ಕೆ ಮರುಳಾಗಿ ತಾಪಕೊಳಗಾಗದಿರು ।
ಪಾಪಿ ಚಿನ್ನದ ಜಿಂಕೆ ಧರಿಣಿಜೆಯ ನೊಲಿಸಿ ।
ಆಪದೊದಗಿಸಿತು ಸಾರ್ವಜ್ಞ

9 ದಶರಥನು ಕೈಕೇಯಿ ವಶವಾದ್ದು ರೂಪಿಂದ ।
ನಶಿಸಿ ಹೋಗುವ ಕೆಲವು ದಿನವಿರುವ ರೂಪ ।
ಪಿಶುನ ಕಾಣಯ್ಯ ಸಾರ್ವಜ್ಞ

10 ಗೆಲ್ಲುವಾತನು ಜಗವನಲ್ಲಿಯೇ ಮರುಳಾಗಿ ।
ಹಲ್ಲುಕಿರಿಯುತ ಸೋತು ನಿಲ್ವುದೇತಕ್ಕೆ ।
ಬಲ್ಲನೀಪೇಳು ಸಾರ್ವಜ್ಞ

11 ಹೆತ್ತ ತಾಯ್ತಂದೆಯೊಳೆ ಭಕ್ತಿಯನ್ನಿಡದಿರಲು ।
ದತ್ತಸುತ ಪಿತೃಸೇವೆಗೈಯ್ಯಲದು ಮೇಕೆ–
ಕತ್ತು ಮೊಲೆ ಹಾಲು ಸಾರ್ವಜ್ಞ

12 ಕುಂಬಳದ ಕಾಯ್ಗಣ್ಣೆ ಕಂಬಳಿಗೆ ನೀರೊಗೆತ ।
ಜಂಬ ವಿದ್ಯಾರ್ಥಿಗಿವು ನಾಶಕವು ಇವನು ।
ನಂಬದವರಾರು ಸಾರ್ವಜ್ಞ

13 ವಿನಯವಿಲ್ಲದ ವಿದ್ಯೆ ತನಯರಿಲ್ಲದ ಮನೆಯು
ತನಗಲ್ಲದುಪದೇಶ ಬೆಳಗಲಿವು ಮೂರು ।
ವನದ ಚಂದ್ರಿಕೆಯು ಸಾರ್ವಜ್ಞ

14 ಕೂತುಣಲು ಕುಡುಕೆ ಹಣ ಯಾತಕೂ ಸಾಲದದು ।
ನೀತಿಯೊಳು ಹಣಗಳಿಸಿ ನೀಕೊಟ್ಟು ತಿನ್ನು ।
ಖ್ಯಾತಿ ಸುಖವಿಹುದು ಸಾರ್ವಜ್ಞ

15 ಬೆಕ್ಕಿಗಿಕ್ಕಿದ ಹಣ್ಣ ನೆಕ್ಕಿಯೂ ನೋಡದದು ।
ರೊಕ್ಕವಿರೆ ಜಿಪುಣಂಗೆ ಲೆಕ್ಕಕ್ಕೆ ಮಾತ್ರ ।
ಪುಕ್ಕಟೆಯೆ ಭೋಗ ಸಾರ್ವಜ್ಞ

16 ವೈದ್ಯರಿಗೆ ವ್ಯಾಜ್ಯಕ್ಕೆ ವಾದ್ಯ ನರ್ತನಸುಖಕೆ ।
ಆದ್ಯಾಂಶವೆನೆ ತೆರುತ ಧನಿಕ ಬಡವನಿಗೆ ।
ಸಾಧ್ಯವಿಲ್ಲೆನುವ ಸಾರ್ವಜ್ಞ

17 ಬಡತನಲಿದ್ದವನು ಪಡೆಯೆ ಸಿರಿಯನು ಸುಖವು ।
ಬಿಡದೆ ಸಿರಿಯೊಳು ಬದುಕಿ ಬಡವನಾಗಲದು ।
ಸಿಡಿಲು ಬಡಿದಂತೆ ಸರ್ವಜ್ಞ

18 ಸಿರಿಯಿರಲು ಬಂದುಣುವ ಪರಮಮಿತ್ರರು ಬಹಳ ।
ಸಿರಿತೊಲಗೆ ಸಖರಿರರು ಬಡತನವೆ ಮೈತ್ರಿ–
ಯೊರೆಗಲ್ಲು ಕಾಣೋ ಸರ್ವಜ್ಞ

19 ಒಂದಿರುಳು ತಿಂಗಳೊಳು ಚಂದ್ರನಿಗೆ ಪರಿಪೂರ್ತಿ ।
ಒಂದು ಕ್ಷಣ ಸುಮಗಂಧ ಇದನೋಡೆ ಸಿರಿಯು
ನಿಂದಿರಳು ನೆಲಸಿ ಸರ್ವಜ್ಞ

20 ನೀರು ಸಾಗರ ಸೇರಲೇರಿಳಿತವೇನಿಹುದು ।
ಕೋರುತಿಹ ಬಡಜನರ ಸಾರೆ ಸಿರಿಗೊಳಿತು ।
ತೋರದವಳಿಗಿದು ಸರ್ವಜ್ಞ

21 ಜೂಜಾಟವೆಂಬುದರ ಗೋಜಿಗೇ ಹೋಗದಿರು
ರಾಜಾಧಿರಾಜ ನಳಧರ್ಮಜರ ತೊಡಕು
ಜೂಜಾಟದಿಂದ ಸರ್ವಜ್ಞ

22 ಪಾಚಿ ತುಂಬಿದ ಕೊಳದಿಚಾಚಿ ಕೈಯ್ಯನು ಕಲಕಿ
ಬಾಚಿದೆಡೆ ಮತ್ತೆ ಮುಸುಕುವುದು ಕೊಡವಿದರು
ನೀಚಜನ ಬಿಡದು ಸರ್ವಜ್ಞ

23 ನೊಣ ನರನದೇಹದೊಳು ತಿಣುಕಾಡಿ ಗಾಯಹುಡೆ
ಅಣುಮಾತ್ರವಿರಲೆರುಗುವುದು ಖಲರು ದೋಷ
ವೆಣಿಸಲ್ಕೆ ಮಾತ್ರ ಸರ್ವಜ್ಞ

24 ಎತ್ತು ಗಾಣದ ಸುತ್ತ ಸುತ್ತೆ ಪಯಣದ ದೂರ
ಗೊತ್ತಹುದೆ ಖಲರಿಗೆಸಗಿದ ಸೇವೆಯುವರ
ಚಿತ್ತವನು ಹೊಗದು ಸರ್ವಜ್ಞ

25 ಬಾಳೆತೆಂಗಿಗೆ ಕವಲು ಚೇಳು ಹಾವಿಗೆ ದಯೆಯು
ಸೂಳೆಗೂಸರಳತೆಯು ಜನಿಸಲಾಗಸದಿ
ಕಾಳೆರಚಿ ಬೆಳೆಯೊ ಸರ್ವಜ್ಞ

26 ಸಾಗರದಿ ಸಿಹಿನೀರು ರೋಗಿಯೊಳು ಗೆಲುವೊಗವು
ಜಾಗರಣೆ ಬಿಡಸಲ್ಲಿ ಜನಿಸುವುದು ರವಿಯು
ನೀಗಲೌಷ್ಟವನು ಸಾರ್ವಜ್ಞ

27 ಚಿತ್ರವನು ಬರೆವವಗೆ ಪತ್ರಲೇಖನಿ ವರ್ಣ
ವೆತ್ತಿಕೊಟ್ಟೀರ್ವರೂ ಚಿತ್ರಿಸಿದೆವೆನುವ
ಉತ್ತಮರು ಉಂಟು ಸಾರ್ವಜ್ಞ

28 ಗೆದ್ದಲಿನ ಗೂಡಿನೊಳಗಿದ್ದವನೆ ವಾಲ್ಮೀಕಿ
ಸಿದ್ಧನವ ರಾಮನಾಮದೊಳು ಗೆದ್ದಲಿಗೆ
ಗುದ್ದಲಿಯ ಪೂಜೆ ಸಾರ್ವಜ್ಞ

29 ಮಾಡುವರಿದ್ದಲ್ಲಿ ನೋಡೆನ್ನ ಹಿರಿಮೆಯನು
ಬಾಡುವೆನು ಬೆಳದಿಂಗಳಿಗೆ ಶಿರದೊಳೆನಗೆ
ಕೋಡು ಬೆಳೆಯುವುದು ಸಾರ್ವಜ್ಞ

30 ಹುಲ್ಲಿನೆಳೆಗಳ ಹಗ್ಗ ನಿಲ್ಲಿಸಲು ಮದಗಜವ
ಬಲ್ಲುದಲ್ಪದ ವಸ್ತು ಕಲೆತೊಟ್ಟುಗೂಂಡೆ
ಎಲ್ಲವೂ ಸಾಧ್ಯ ಸಾರ್ವಜ್ಞ

31 ಸೇರೆ ಗಾಳಿಯ ರಭಸ ನೀರೊಳಲೆ ಹೊಡೆದಾಟ
ಬೇರೆಯರೊಳಹೋಗಲು ದಾರಿ ಜಗಳಕ್ಕೆ
ಕೋರದಿರು ಜನಕೆ ಸಾರ್ವಜ್ಞ

32 ನಮ್ಮ ನಮ್ಮೊಳಜಗಳ ಒಮ್ಮೆಲೇ ಭಾರತದ
ನೆಮ್ಮದಿಯ ಕೆಡಿಸಿ ಪರಿರಿಗುಣಲಾಯ್ತು ದಾಹ
ಒಮ್ಮತವದೆಂದೋ ಸಾರ್ವಜ್ಞ

33 ಹಿಡಿದ ಕಾರ್ಯಗಳೆಲ್ಲ ತೊಡಕಿರದೆ ಕೈಗೂಡ
ಮಡದಿ ಸಿರಿ ದೃಢಕಾಯವಿರಲು ದೇವರೊಳು
ದೃಢಭಕ್ತಿಯಿಹುದೆ ಸಾರ್ವಜ್ಞ

34 ನೆಟ್ಟ ಬೀಜಗಳೆಲ್ಲ ಹುಟ್ಟಿ ಬೆಳೆಯುತ ಫಲಿಸಿ
ಹುಟ್ಟಿರುವ ಶಿಶುವೆಲ್ಲ ಬದುಕೆ ಬ್ರಹ್ಮನೊಳು
ದಿಟ್ಟತನವೇನು ಸಾರ್ವಜ್ಞ

35 ನಾಳೆಯೆನ್ನುವ ಕೆಲಸ ಹಾಳೆಂದು ನೀ ತಿಳಿಯೊ
ವೇಳೆ ಮೀರಿದಮೇಲೆ ತವಕಿಸಲು ನಿನ್ನ
ಬೇಳೆ ಬೇಯುವುದೇ ಸಾರ್ವಜ

36 ಕಾಲವಿದು ಯಂತ್ರಮಯ ಲೀಲೆಯಂ ವೈದ್ಯುತದ
ಮೇಲುಶಕ್ತಿಯೊಳಖಿಲವನು ಸಾಧಿಸಿ ಮಿಗೆ
ಓಲಾಡುತಿಹರು ಸಾರ್ವಜ್ಞ

37 ಆಟಮೆಂಬುವ ಬಾಂಬಿನೇಟ ತಡೆಯಲಿಕಹುದೆ
ಆಟದೊಳೆ ಜಗವ ಸುಡುವುದಿದೆ ವಿಜ್ಞಾನ-
ದಾಟ ಕಾಣಯ್ಯ ಸಾರ್ವಜ್ಞ

38 ಕಂಡದ್ದ ಹೇಳಿದರೆ ಕೆಂಡದಂತಹ ಕೋಪ
ರಂಡೆಯನು ರಂಡೆಯೆಂದುಸುರಿ ಬದುಕಿರುವ
ಗಂಡಸೂ ಉಂಟೆ ಸಾರ್ವಜ್ಞ

39 ಚಲನಚಿತ್ರಗಳಲ್ಲಿ ಲಲನೆಯರ ನಲಿದಾಟ
ಸಲೆಮೀರಿ ಯುವಜನರ ದಾರ್ಢ್ಯಕ್ಕೆ
ತಲೆನೋವು ಕಾಣೊ ಸಾರ್ವಜ್ಞ

40 ಕಾಗೆ ಹಂಸವ ಹಳಿಯೆ ಗೂಗೆ ಗರುಡನ ತೆಗಳೆ
ಕೋಗಿಲೆಯು ಕೃಕವಾಕು ಜರೆಯೆ ಜಗದೊಳಗೆ
ಹೋಗುವುದೆ ಕೀರ್ತಿ ಸಾರ್ವಜ್ಞ

41 ಗೀತೆಯೇ ಪರತತ್ವ ಸೂತ ಪಾರ್ಥನ ಕೃಷ್ಣ
ನಾತನೇ ಪರಬ್ರಹ್ಮವಿದಕೆಲ್ಲ ಮತದ
ಪ್ರೀತಿಯೇ ಸಾಕ್ಷಿ ಸಾರ್ವಜ್ಞ

42 ನೂರಾರು ಭಾಷೆಯೊಳಗಾರಾರೊ ಗೀತೆಯಹು
ಸಾರಾನುಭವದಿ ಬರೆದು ಮೆಚ್ಚಿರಲಿದನು
ಹೋರಾಟವೇಕೆ ಸಾರ್ವಜ್ಞ

43 ಕೋಗಿಲೆಯ ಮರಿಯನ್ನು ಕಾಗೆಯೇ ಸಲಹಿದರು
ಕೋಗಿಲೆಯ ಕೂಗು ಕಾಗೆದನಿಯಂತಿರದೆ
ರಾಗವಾಗಿಹುದು ಸಾರ್ವಜ್ಞ

44 ವೇಗವಿಲ್ಲದ ಕುದುರೆ ತೂಗಡಿಪ ವಿದ್ಯಾರ್ಥಿ
ಭೋಗಕಿಲ್ಲದ ಭಾಗ್ಯವಿವನು ಮತಿಯುತರು
ಬೇಗ ತೊರೆಯುವರು ಸಾರ್ವಜ್ಞ

45 ವಿದ್ಯೆಬುದ್ಧಿಗಳಿರದೆ ಹೊದ್ದು ಪೀತಾಂಬರವ
ಮಧ್ಯೆಬುಧಸಭೆಯಲ್ಲಿ ಕುಳಿತಿರುವ ನರನು
ಸದ್ದಿಲ್ಲದಿರಲಿ ಸಾರ್ವಜ್ಞ

46 ಹೂವಿಂದ ಹೂಗಳಿಗೆ ಧಾವಿಸುತ ಜೇನುಹುಳು
ತಾವು ದುಡಿದೆಸಗಿದಾರ್ಜನೆನಪಹರಿಪ
ನಾವು ನೀಚರಲ ಸಾರ್ವಜ್ಞ

47 ಕೊಳೆತ ಮಾಂಸವು ಸಿಗಲು ಬಳಸಿ ರಣಹದ್ದುಗಳು
ಕುಳಿತು ಹರುಷದಲಿ ತಿನ್ನುವುವು ಕೊಳಕರಿಗೆ
ಒಳಿತು ಹೊಲಸುಗಳೆ ಸಾರ್ವಜ್ಞ

48 ಆಟಕ್ಕೆ ಚದುರಂಗ ಊಟಕ್ಕೆ ಹಾಲನ್ನ
ನೋಟಕ್ಕೆ ನಾಟಕಗಳಿವುಗಳಿಗೆ ಜಗದಿ
ಸಾಟಿಯಿನ್ನಿಲ್ಲ ಸಾರ್ವಜ್ಞ

49 ನೀರು ಮೀನಿಗೆ ಬದುಕು ಜಾರೆ ವಿಟರಿಗೆ ಬದುಕು
ದೂರುವುದೆ ಸುಜನರನು ಪಿಶುನರಿಗೆ ಬದುಕು
ಯಾರರಿಯರಿದನು ಸಾರ್ವಜ್ಞ

50 ಹರೆಯದಲಿ ಪರಿಪರಿಯ ತೆರದಲ್ಲಿ ಮೆರೆಯುತ್ತ
ಗುರುಹಿರಿಯರನು ಜರೆದು ತನಗೆ ಜರೆ ಬರಲು
ಕೊರಗೆ ಫಲವೇನು ಸಾರ್ವಜ್ಞ

51 ದೇವರಿರದೆಡೆಯಿಲ್ಲ ನೀವು ನಂಬುವುದಿಲ್ಲ
ಭಾವಿಸುವ ಭಕುತರವನನ್ನು ಕಾಣುವರು
ನಾವು ನಂಬಿಹೆವು ಸಾರ್ವಜ್ಞ

52 ವಿಶ್ವದೊಡೆಯನು ಹರಿಯು ವಿಶ್ವಾಸವಿದರೊಳಿಡಿ
ನಶ್ವರವು ಜಗದಾಟಮಾಧವನ ನೆನೆಯೆ
ಶಾಶ್ವತದ ಸುಖವು ಸಾರ್ವಜ್ಞ

53 ಮಾತ್ಸರ್ಯವನುಬಿಟ್ಟು ಪ್ರೋತ್ಸಾಹವನು ಕೊಟ್ಟು
ವಾತ್ಸಲ್ಯನಿಧಿ ಮಾಧವನಪದವ ಭಜಿಸೆ
ತಾತ್ಸಾರವೇಕೆ ಸಾರ್ವಜ್ಞ

54 ಹೊಸಸೇಬುದಾಳಿಂಬೆ ರಸಬಾಳೆಹಣ್ಣುಗಳ
ಮುಸುಡಿಗಿಡೆ ಬೆಕ್ಕಿಗನುವೆ ಮಂಕಸುಕವಿತೆ–
ರಸವನುಣ್ಣುವನೆ ಸಾರ್ವಜ್ಞ

55 ಕೋಣನೆಡೆ ವಿಧವಿಧದಿ ವೀಣೆಯನು ನುಡಿಸಿದರೆ
ಕಾಣದದು ಸವಿಯು ಕಾವ್ಯರಸಫರಿಯದಿಹ
ಜಾಣರೂ ಉಂಟು ಸಾರ್ವಜ್ಞ

56 ತಮ್ಮ ಕವಿತೆಗೆ ತಾವೆ ಹೆಮ್ಮೆಪಡದವರಾರು
ಒಮ್ಮತದಿರಸಿಕಜನ ಸಮ್ಮತಿಯು ಮುಖ್ಯ
ಸಂಮ್ಮನಿರು ಬರೆದು ಸಾರ್ವಜ್ಞ

57 ಬರಹಗಾರರ ಬರಹ ಹೊರಬಿದ್ದು ಕೆಲದಿನವು
ಚರಿಸಿಯೆಲ್ಲೆಡೆ ಬಳಿಕ ಹೆಸರಿಲ್ಲದಿಹುದು
ಸ್ಥಿರಕೃತಿಯು ಮುಖ್ಯ ಸಾರ್ವಜ್ಞ

58 ಕನ್ನಡದ ಉನ್ನತಿಗೆ ತನ್ನೊಡಲ ಸವೆಸುತಿಹ
ಸನ್ನುತರು ಹಲವರಿರಲೆನ್ನ ಕೃತಿಗಳಿಗೆ
ಸೊನ್ನೆ ಬಿದ್ದಿಹುದು ಸಾರ್ವಜ್ಞ

59 ಓಡಿ ಮನೆಮನೆಗಳಿಗೆ ನೋಡಿರೀಕೃತಿಯೆಂದು
ಬೇಡಿಕೊಂಡೊಡನೆ ಕೋಡಗದ ಮುಖಮಾಡಿ
ಹೇಡಿಮಾಡಿಹರು ಸಾರ್ವಜ್ಞ

60 ಸ್ಪರ್ಧೆಯೊಳಗಿಡಲಿದಕೆ ಮರ್ದನವೆ ಲಭಿಸಿತಿದು
ನಿರ್ದುಷ್ಟವೆಂಬ ಹೆಮ್ಮೆ ತೊಲಗಿತೆನಗಿದೆ
ನಿರ್ಧರವು ಕಡೆಗೆ ಸಾರ್ವಜ್ಞ

61 ಸಭೆಗಳಲಿ ಓದಿ ನಾನಭಿಮಾನಪಡಲೆಳಸೆ
ಅಭಯೋಕ್ತಿಯೊಳೆ ತಣಿದೆ ಬಡವನಿಗೆ ಕೀರ್ತಿ
ಲಭಿಸುವುದು ಕಷ್ಟ ಸಾರ್ವಜ್ಞ

62 ಪ್ರತಿಭೆಯುದ್ರೇಕದಲಿ ಮತಿವಂತರನು ಸೆಳೆವ
ಅತಿಚಮತ್ಕೃತಿ ಕೃತಿಯು ತೆಗಳೆ ಬರೆಯುತಿಹ
ಹತಭಾಗ್ಯರುಂಟು ಸಾರ್ವಜ್ಞ

63 ವರಕಾವ್ಯಗಳ ರಚಿಸಿ ಹೊರಗೆ ಬೆಳಕಿಗೆ ಬರದೆ
ಕೊರಗಿಯುಂರೆ ನೊಂದ ಕವಿಯು ಮರಣದ ಬಳಿಕ
ಸ್ಮರಿಸಿ ಹೊಗಳುವರು ಸಾರ್ವಜ್ಞ

64 ಅಚ್ಚುಹಾಕಿಸಲೆನಗೆ ವೆಚ್ಚಕೆ ಹಣವಿಲ್ಲ
ಮೆಚ್ಚಿಕೊಡುವವರು ದೊರೆತಿಲ್ಲ ಕಷ್ಟಗಳ-
ನಚ್ಯುತನೆ ಬಲ್ಲ ಸಾರ್ವಜ್ಞ

65 ಪರನಿಂದೆಯೆಂದೆನ್ನ ಪರುಷವಾಕ್ಯಕೆ ಮುನಿದು
ದುರುಳನಿವನೆನ್ನದಿರಿ ದುರ್ವಿಧಿಯ ಬಲಕೆ
ಕೊರಗುಂಕೊರಲಿದೆನು ಸಾರ್ವಜ್ಞ

66 ಪದದಗೌರವಭಾವ ಮೃದುತೆ ಪರಿಪುಷ್ಟಾರ್ಥ
ಹದಗೆಡದೆ ಜೋಡಿಸಿದೆ ಸರ್ವಜ್ಞಪದದ
ಹೃದಯವಿದು ತಿಳಿಯೊ ಸಾರ್ವಜ್ಞ

ಯಥಾರ್ಥಾರ್ಥ ಕಥನಂ ಸಂಪೂರ್ಣಂ

## ಪರಿಹಾಸ ಕಥನಂ

67 ದೋಸೆ ಬಿಸಿಯಿದ್ದು ಕಾಸಿಗೆರಡದು ಬಿದ್ದು ಕಾಸಿದಾ
ಹೊಸತುಪ್ಪವಿಡುವ ಹೋಟಲಿರೆ
ಮೀಸೆಯನು ತಿರುಹು ಸರ್ವಜ್ಞ

68 ಕಾಫಿಗೆಮ್ಮೆಯ ಹಾಲು ಸೋಪು ಪೌಡರು ಮುಖಕೆ
ಕೌಪೀನಕತ್ರಿಗಿವು ಚಂದವಿವ ಬಿಡಲು
ಪಾಪಿ ತಾನಕ್ಕು ಸರ್ವಜ್ಞ

69 ಪಾಯಸವ ಮಾಡಿಡಲು ನಾಯಿನೆಕ್ಕಿರಲದನು
ಜೋಯಿಸರ ಕೇಳಿ ಕುಡಿಯುವರೆ ಕುಡಿದವಗೆ
ಆಯಾಸವುಂಟೆ ಸರ್ವಜ್ಞ

70 ಅವರಿಲ್ಲದೂಟವೆಂದರೆ ಕಡಲೆಯ ಹುಸುಲಿ
ರವೆಯ ಪಾಯಸದಿ ಜೀವಿಸುವ ಹದಿಬದೆಯ
ನವಸತಿಯರುಂಟು ಸರ್ವಜ್ಞ

71 ಕೆಲಸಸಾಗದವೇಳೆ ಚಲಿಸದೊಂದೆಡೆಕುಳಿತು
ಒಲಿಸಿಮಾತಿನೊಳೆಲ್ಲಜನರ ವಶಗೊಳಿಸು
ಫಲಿಸುವುದು ಕಾರ್ಯ ಸರ್ವಜ್ಞ

72 ಮೂಗಿಗೇರಿಸೆ ನಸ್ಯ ಹೋಗಿ ಶಿಖರವ ಮುಟ್ಟಿ
ನೀಗಿಜಡತೆಯ ಸೌಖ್ಯಸಾಗರದಿ ನೆನೆಸೆ
ಯೋಗಿಗಿದು ಸಿಗದು ಸರ್ವಜ್ಞ

73 ಹಬ್ಬಿ ನಾಗರಿಕತೆಯು ಅಬ್ಬರಿಸೆ ಯುವಕರೊಳು
ಒಬ್ಬನವವೇಷ ರಸದುಬ್ಬರವಿದೆಂದು
ಹುಬ್ಬು ಬೋಳಿಸಿದ ಸರ್ವಜ್ಞ

74 ಕೊಯ್ಲು ವರ್ಷಕೆ ನಾಲ್ಕು ಐಯ್ದಾರುಯಂಟಿರಲಿ
ಬಯ್ಲಾದ ಕಡೆಯಲ್ಲಿ ದಿನಕೆರಡು ವೇಳೆ
ಕೊಯ್ಲು ನಡೆಯುವುದು ಸಾರ್ವಜ್ಞ

75 ಕಡೆಬಾಯದಡದಲ್ಲಿ ಬಿಡಿಸಿಮೀಸೆಯ ಮೂಗಿ-
ನಡಿಯಲ್ಲಿ ಬೋಳಿಸಲು ಸೊಗಸು ಒಕ್ಕಡೆಯೆ-
ಬಿಡಲು ಬಲು ಸೊಗಸು ಸಾರ್ವಜ್ಞ

76 ಮುಂಗುರುಳು ಮೊಲೆಗಟ್ಟು ಸಿಂಗರದ ತರುಣನೊಳು
ಅಂಗನೆಯ ಭ್ರಮೆಯಿಂದ ತಳಮಳಿಸುವವನೆ
ಇಂಗುಂಡ ಮಂಗ ಸಾರ್ವಜ್ಞ

77 ನಿದ್ದೆಯೊಳು ಮೈಮರೆತ ಮುದ್ದು ಯುವತಿಯ ಮುಖದಿ
ತಿದ್ದೆ ಮೀಸೆಯನೋರ್ವನೋಡಿ ನಗುವವರ
ಗದ್ದಲವೆ ಚಂದ ಸಾರ್ವಜ್ಞ

78 ನಿಲುವುಗನ್ನಡಿಯಲ್ಲಿ ಚಲುವು ನೋಡುತ ನಿಂತ
ಲಲನೆಗರಿಯದೆ ಹೋಗಿ ತಲೆಗಿಡೆ ರುಮಾಲ
ಬೊಲು ಸೊಗಸು ನೋಡೆ ಸಾರ್ವಜ್ಞ

79 ತನಗೆ ತೋರದೆ ಹಣವನಿನಿಯಳಿಟ್ಟಿರುವುದನು
ಕೊನೆಗೆ ಪತಿಯಪಹರಿಸೆ ತಿಳಿದದ ಮರುಗುವ
ವನಿತೆಯೇ ಚಂದ ಸಾರ್ವಜ್ಞ

80 ಜಿರಲೆ ಜೇಡನ ಕಂಡು ಬರಿದೆ ಹೆದರುವ ಸತಿಯು
ಕರದಿ ಕಪ್ಪೆಯ ಮರಿಯ ಮರೆಸಿರಿಸಲವಳ
ಪರದಾಟ ಚಂದ ಸಾರ್ವಜ್ಞ

ಇಂತು ಪರಿಹಾಸ ಕಥನ ಸಂಪೂರ್ಣಂ

# ಶ್ರೀ ಚೆಲ್ವನಾರಾಯಣ ಶತಕಂ

1 ವಿಬುಧಾರಾಧಿತಪಾದಪಂಕಜಯುಗಂ ವಿಶ್ವವ್ಯವಸ್ಥಾಪಕಂ
ಶಬರೀಭೀಷ್ಮ ಕುಚೇಲ ಮುಖ್ಯ ನಿಖಿಲಸ್ತ್ರೀಯಾಭಿ ಸಂರಕ್ಷಕಂ
ಸೊಬಗಿಂದೊಪ್ಪುವ ದಿವ್ಯಮೂರ್ತಿಯನಿಶಂ ಶ್ರೀಯಾದವಾದ್ರೀಶ್ವರಂ
ಅಬುಜಾಕ್ಷಂ ದಯೆಗೈಯ್ಗೆ ಸರ್ವಜನರೊಳ್ ಶ್ರೀಯದುವಾದ್ರೀಶ್ವರಂ

2 ಮುಡಿದಿರ್ಪಂ ಕವಿಯೊರ್ವನೀ ಯದುಗಿರಿ ಶ್ರೀ ಚೆಲ್ವನಾರಾಯಣಂ
ಕಡೆಯಲ್ಲಂಕಿತಮಾಗಿ ತೋರ್ಪ ಶತಕಂ ಸ್ವಾರಸ್ಯಮಾಗಿರ್ಪವೋಲ್
ನುಡಿವೆಂ ನಾನಿದನಂ ಯಥಾಮತಿಯೆನಲ್ ಗಂಗೋದಕಂ ಪಾವನಂ
ಮೃಡಧಾರ್ಯಂ ಶಿರದೊಳ್ ಪರರ್ ಧರಿಸರೇಂ ಶ್ರೀ ಚೆಲ್ವನಾರಾಯಣ

3 ಪೊಗಳಲ್ ನಾಣ್ಚುವರಾತ್ಮ ಸದ್ಗುಣಗಳಂ ಪಾಪಕ್ಕೆ ತಾವಂಜುವರ್
ತೆಗಳಲ್ಕನ್ಯರನಾಶಿಸರ್ ಸಕಲರಂ ತನ್ನಂತೆಯೇ ಭಾವಿಪರ್
ಜಗಳಕ್ಕೊಪ್ಪರು ಮೌನದಿಂ ಪರಹಿತಕ್ಕಾತ್ಮಾರ್ಪಣಂ ಗೈಯ್ಯುವರ್
ಹಗೆಗಂ ಕೇಡನಪೇಕ್ಷಿಸರ್ ಸುಗುಣಿಗಳ್ ಶ್ರೀ ಚೆಲ್ವನಾರಾಯಣ

4 ಜಲದಂವರ್ಷಿಸಿರಿತ್ತವಾಗಿರೆ ಪೆಸರ್ಗನ್ವರ್ಥತಾ ವ್ಯರ್ಥಮೇಂ
ಪಲರುಂ ರತ್ನವ ಕೀಳಲುರ್ವಿಗಿರದೇಂ ಆ ರತ್ನಗರ್ಭಾಖ್ಯೆಯು
ನಲವಿಂ ದೀನರಿಗೀಯೆ ಸರ್ವಧನಮಂ ಭೂಪಂಗೆ ದಾರಿದ್ರ್ಯಮೇಂ
ನೆಲೆನಿಲ್ಗುಂ ಸುಮಹಾತ್ಮರೊಳ್ ಮಹಿಮೆ ತಾಂ ಶ್ರೀ ಚೆಲ್ವನಾರಾಯಣ

5 ಸಮಯಂ ಬಂದಿರಲಾತ್ಮವಿಸ್ತರಣದಿಂದೌನ್ನತ್ಯಮಂ ಪೊಂದುತಂ
ಕ್ರಮದಿಂ ತನ್ನುಪಕಾರಮಂ ಸಲಿಸುತಂ ಕಾರ್ಯಾಂತದೊಳ್ ನೈಚ್ಯದಿಂ-
ದಮಿತಂ ಸಂಕುಚಿತಾತ್ಮಮಪ್ಪಕೊಡೆಯುಂ ಪ್ರಾಜ್ಞೋಕ್ತಿಯುಂ ಲೋಕದೋಳ್
ಸಮಮೆಂದಾಂ ನುಡಿವೇಂ ವಲಂ ನಿರುಕಿಸಲ್ ಶ್ರೀ ಚಲ್ವನಾರಾಯಣ

6 ದಯೆಯುಂ ತೋರಿಸಲೆಲ್ಲ ಭೂತಗಳೊಳಂ ಸರ್ವೋತ್ತಮಂ ಧರ್ಮಮೈ
ಭಯಂದಿಂ ನೊಂದಿಹ ಜಂತುವಂ ಸಲಹೆ ತಾಂ ಪುಣ್ಯಂ ಕ್ಷುಧಾಬಾಧೆಯಿಂ
ಕ್ಷಯಮಂ ಪೊಂದುವ ಚೇತನಕ್ಕುಣಲಿಡಲ್ ದಾನಂ ಮಹತ್ವಾದುದೈ
ನಿಯತಂ ಸತ್ಯಮೆ ಸುವ್ರತಂ ಪರಿಕಿಸಲ್ ಶ್ರೀ ಚಲ್ವನಾರಾಯಣ

7 ಬರೆಯಲ್ಕೋದಲು ಮಾತ್ರ ಬಂದಿರಲವಂ ವಿದ್ವಾಂಸನಂ ತಪ್ಪನೈ
ಧರೆಯೊಳ್ ಸುತ್ತಿ ಮಹಾತ್ಮರೋಳ್ ವಿನಯದಿಂ ಮಾತಾಡುತಂ ಕೇಳುತಂ
ಅರಿಯಲ್ ಸ್ವಾನುಭವಂಗಳಿಂ ಕಲೆಗಳಿಂ ಮಾಳ್ಪಾತರಿಂ ಖ್ಯಾತರಿಂ
ಪರಿದ ಜ್ಞಾನತಮಂ ಮನೀಷಿಯೆನಿಪಂ ಶ್ರೀ ಚಲ್ವನಾರಾಯಣ

8 ಅರಿವಂ ಸದ್ಗುರುವೋಳ್ ವಿಧೇಯತೆಯುತಾಂ ತೋರು ಸಂಪಾದಿಸಲ್
ಪರಿಪೂರ್ಣ ಪ್ರತಿಭಾಯುತಂ ಮೆರೆವನೈ ಸತ್ಕೀರ್ತಿಯುಂ ಪೊಂದುತಂ
ತೊರೆದೀರೀತಿಯನೋದಿ ತಾನೆ ಕಲಿಯಲ್ ಮಾತೃಸ್ತನಕ್ಷೀರದಿಂ
ಭರಣಂಪೊಂದದ ಬಾಲನಂತೆ ನಶಿಪಂ ಶ್ರೀ ಚಲ್ವನಾರಾಯಣ

9 ಎಡರೊಂದೊಂದಡಿಗುಂ ತೊಡರ್ಚೆ ಕೆಡಿಸಲ್ ಧೈರ್ಯಸ್ಥಿರಸ್ವಾಂತದಿಂ
ಪಿಡಿದಿರ್ಪೋತ್ತಮ ಕಾರ್ಯಸಿದ್ಧಿಗನಿಶಂ ಸತ್ಪೂರುಷರ್ ಯತ್ನಿಪರ್
ಒಡಲಂ ಕಷ್ಟದ ಕಾರ್ಯಕೊಡ್ಡಲು ಕೆಲರ್ ತಾವಂಜುವರ್ ವಿಘ್ನಮಂ
ತಡೆಯಲ್ಕಾರದ ಹೇಡಿಗಳ್ ಸುಖಿಪರೇಂ ಶ್ರೀ ಚೆಲ್ವನಾರಾಯಣ

10 ಕಿಡಿಗಳ್ ತಾವ್ ಕೆಲವಿರ್ದು ಸಾಲದೆ ಸುಡಲ್ ಕಾಡಂ ಮಹಾದುರ್ಗಮಂ
ಕೊಡಪಾಲಂ ಕೆಡಿಸಲ್ಕೆ ಬಿಂದು ಪುಳಿ ತಾಂ ಸಾಕಾಗದೇಂ ಲೋಕದೋಳ್
ಹುಡುಗಾಟಕ್ಕಣುಯತ್ನದಿಂ ಮುರಿವರೈ ನೀಚರ್ ಮಹಾಕಾರ್ಯಮಂ
ಕೆಡಿಸಲ್ ಕಷ್ಟಮೆ ಕಷ್ಟ ನಿರ್ಮಿಸಲದುಂ ಶ್ರೀ ಚೆಲ್ವನಾರಾಯಣ

11 ಅಳುವಾತಂಗೆಡದೊಳ್ ಸಮೀಪದೊಳಿರಲ್ ನಾವಾಶಿಸಲ್ಬಾರದೈ
ಹೊಲಿವಾತಂಗಿರಬಾರದಯ್ಯ ಬಲದೋಳ್ ಕೂಡಿರ್ದು ಯಾವಾಗಲುಂ
ನಲಿವಾತಂಗಿರಬಾರದೈ ಸನಿಹದೋಳ್ ದಿಕ್ಕೆಂಟರಲ್ಲುಂ ನರಂ
ಖಲನಾದೃಷ್ಟಿಗು ದೂರದಲ್ಲಿರೆ ಸುಖಂ ಶ್ರೀ ಚಲ್ವನಾರಾಯಣ

12 ಕುಟಿಲಾತ್ಮಂ ಕಪಟಸ್ವಭಾವವನುತಾಂ ಬಚ್ಚಿಟ್ಟುಕೊಂಡಾವಗಂ
ನಟಿಸುತ್ತಂ ಮಿಗೆ ಸತ್ಯಸಂಧತೆಯ ಮೇಣ್ ಕಾಲೋಚಿತೋಪಾಯದಿಂ
ಪಟುವಾಕ್ಯಂಗಳನಾಡಿ ನಿಸ್ಪೃಹತೆಯಂ ತೋರುತ್ತ ಲಾಭಾಂಶಗಳ್
ಘಟಿಸಲ್ ವಂಚಿಸಿ ಸೂರೆಗೊಳ್ವರಕಟಾ ಶ್ರೀ ಚೆಲ್ವನಾರಾಯಣ

13 ಪುಲಿಯೊಳ್ ಪನ್ನಗದೊಳ್ ಜನರ್ ನುಡಿಯುವಾ ಕ್ರೌರ್ಯಂ ನಿರಾಧಾರವೈ
ಮೆಲುವಾಹಾರಕೆ ಮೇಣ್ ಸ್ವರಕ್ಷಣೆಗೆ ತಾವ್ ಕೊಲ್ಲುತ್ತಿರಲ್ ಪ್ರಾಣಿಯಂ
ಖಲ ಕೊಲ್ವಂ ಮನದೀರ್ಷ್ಯೆಯಿಂ ಸುಜನರಂ ನಿಷ್ಕಾರಣಂ ಕ್ರೌರ್ಯದೊಳ್
ಪುಲಿಸರ್ಪಂಗಳು ಸಾಟಿಯೇಂ ಖಲರಿಗೆ ಶ್ರೀ ಚೆಲ್ವನಾರಾಯಣ

14 ಪುಸಿಯಲ್ಪಾತಕಮನ್ಯರಂಗನೆಯರಂ ತಾನಾಶಿಸಲ್ ಪಾತಕಂ
ಪಸಿವಿಂ ಬಂಧುವನಟ್ಟಿ ಮೆಲ್ವ ಧನಿಕಂಗಕ್ಕುಂ ಮಹಾಪಾತಕಂ
ವ್ಯಸನಕ್ಕನ್ಯರನೊಡ್ಡೆ ಪಾತಕಮೆನುತ್ತು ದೋಷಿಸುತ್ತೆಲ್ಲ ತಾ-
ನೆಸಗಲ್ ಪಾತಕಮಾತಗೆಂತುದಹುದೋ ಶ್ರೀ ಚೆಲ್ವನಾರಾಯಣ

15 ಗಡುಸಾದುಕ್ತಿಯ ಕೇಳಿ ಕೋಪಿಸರು ಮೇಣ್ ಮಾತಾಡರೈ ಬೈದರುಂ
ಕೆಡುಕಂ ಮಾಡಲು ಮುನ್ನಿಪರ್ ಸುಜನರೌದ್ಧತ್ಯದಿಂ ಬಾಧಿಸಲ್
ಕೆಡುವರ್ ದುಷ್ಟರು ತಾವೆ ಸಜ್ಜನ ಮನಶ್ಶಾಂತಿಪ್ರರೂಢಾಗ್ನಿಯಿಂ
ಸಿಡಿಲುಂ ಶೀತಲ ಮೇಘಾದಿಂದುದಿಸದೇಂ ಶ್ರೀ ಚೆಲ್ವನಾರಾಯಣ

16 ವಿಷದುಗ್ಧಾಂಬುಧಿಯಲ್ಲಿ ಪುಟ್ಟಿರಲದಂ ಮಾನಿಪ್ಪರಾರಿರ್ಪರೈ
ಬಿಸಜಂ ತಾಂ ಕೆಸರಲ್ಲಿ ಪುಟ್ಟಿರಲದೇ ಪೂಜಾರ್ಹಮಾಗಿರ್ಪುದು
ಉಸಿರುತ್ತಾತ್ಮಕುಲಪ್ರಕರ್ಷಮಹಿತಂ ಗೈವರ್ ಮಹಾನೀಚರೈ
ಹಸನೆಂದೆಂಬುದು ಸದ್ಗುಣಂ ಕುಲದೊಳೇಂ ಶ್ರೀ ಚೆಲ್ವನಾರಾಯಣ

17 ವರುಷಕ್ಕೊಂದೆನೆ ಸೂಲುಪಂದಿಮರಿಯಂ ನಾಲ್ಕಾರು ಹತ್ತಾದೊಡಂ
ತೆರನಿಲ್ಲೆನ್ನುವ ರೀತಿ ಹೆತ್ತು ಧರೆಯಂ ತುಂಬಲ್ ಫಲಂ ಕಾಣೆನೈ
ಕರಿ ಪುಟ್ಟಲ್ ಬಹುವತ್ಸರಂಗಳಹುದೈ ರಾಜಾರ್ಹಮಂತಾದೊಡಂ
ಹೊರೆಯೈ ಸಂತತಿ ಪೆರ್ಚೆ ಕೀರ್ತಿರಹಿತಂ ಶ್ರೀ ಚೆಲ್ವನಾರಾಯಣ

18 ನಯಮಂ ಯುಕ್ತಿಯಿದೆಂದು ಶಾಂತಿಗುಣಮಂ ದೌರ್ಬಲ್ಯಮೆಂದೆನ್ನುತಂ
ದಯೆಯನ್ನಂಜಿಕೆಯೆಂದು ಮೌನಗುಣಮಂ ಮಂಕೆಂದು ಸಂಕೋಚಮಂ
ರಯೆದಿಂಹೇಡಿತನಂಗಳೆಂದು ಜರೆವಾ ನೀಚರ್ಕಳಂ ಮೆಚ್ಚಿಸಲ್
ಪ್ರಿಯಮಾದುನ್ನತ ಸದ್ಗುಣಂಗಳಿಹುವೇಂ ಶ್ರೀ ಚೆಲ್ವನಾರಾಯಣ

19 ಕೆಸರಲ್ಲೆಮ್ಮೆಯು ಪಂದಿಯುಂ ಹರುಷದಿಂದೊದ್ದಾಡುತಾನಂದಿಕುಂ
ಕಸದೊಳ್ಬೂದಿಯು ಕತ್ತೆನಾಯಿ ಪೊರಳಲ್ ಪ್ರೇಮಾಸ್ಪದಸ್ಥಾನಮೈ
ಮಸಣಂ ವಾಸಕೆ ತಾಣಮೆಂದೆರಗುವರ್ ದುರ್ದೇವತೋಪಾಸಕರ್
ಅಸುಗಿಂಪೈ ಕೊಳಕರ್ಗೆ ತಾಂ ಕೊಳೆಯಿರಲ್ ಶ್ರೀ ಚಲ್ವನಾರಾಯಣ

20 ಬುಡಮಂ ತಾಂ ಕಡಿಯುತ್ತೆ ಕೊಂಬೆಯೆಡೆಯೊಳ್ ನಿಂತಿರ್ದ ವೃಕ್ಷಾಗ್ರದಿಂ
ಜಡಬೀಳಲ್ ಪಿಡಿದಿರ್ಪ ಕೈಗೊಡಲಿಯುಂ ಬೈಯ್ವಂತೆ ಚಿಕ್ಕಂದಿನಿಂ
ಕಡುದುಷ್ಕೃತ್ಯವಗೈದು ಕೆಟ್ಟಬಳಿಕಂ ತಾಯ್ತಂದೆಯೊಳ್ ದೋಷಮಂ
ನುಡಿವಂ ನೀಚನಿದಾವಧರ್ಮಮಕಟಾ ಶ್ರೀ ಚಲ್ವನಾರಾಯಣ

21 ಪಟುಕಾರ್ಯಂಗೆ ಜಡಂ ಮಹಾತ್ಮನಿಗೆ ಮೇಣ್ ಪಾಪಿಷ್ಠನುಂ ಶಾಂತಿಯಿಂ-
ದುಟಜಾವಾಸಿಗೆ ಘಾತುಕಂ ಶುಚಿತಮಂಗತ್ಯಂತ ದುರ್ಗಂಧಿಯುಂ
ಕುಟಿಲಂ ತಾನೃಜುಬುದ್ಧಿಗುಂ ಘಟಿಸಿರಲ್ ಸಖ್ಯಕ್ಕೆ ನಿರ್ಬಂಧದಿಂ
ಕಟತಾನಾಗುತ ಸದ್ವಿನಾಶಮಹುದೈ ಶ್ರೀ ಚಲ್ವನಾರಾಯಣ

22 ಜಯಮಂ ಸೋಲುಮಧರ್ಮಧರ್ಮಮಮೆನಲ್ಕನ್ಯಾಯಗಳ್ ನ್ಯಾಯಮಂ
ಭಯತಾಂ ಧೈರ್ಯವ ಮೋಸಮಾರ್ಜವ ಗುಣೌನ್ನತ್ಯಂಗಳಂ ಬಾಧಿಸಲ್
ನಯನಾಶಕ್ಕವಿವೇಕನಿಲ್ಲಲು ಬಲೀಸತ್ಯಂ ಕೆಡಲ್ ಮಿಥ್ಯೆಯಿಂ
ಕ್ಷಯಮಂದೇ ಜಗಕೆಲ್ಲಮಪ್ಪುದು ದಿಟಂ ಶ್ರೀ ಚಲ್ವನಾರಾಯಣ

23 ಕುಸುಮಂ ಕೋಮಲಮಾಗಿಯುಂ ಪರಿಮಳಂ ಬೀರುತ್ತಲುಂ ತಾನಿರಲ್
ಹಿಸುಕುತ್ತೆಲ್ಲ ಸುಗಂಧಮಂ ಪಡೆವೆನೆಂದಾರಾದರುಂ ಮರ್ದಿಸಲ್
ಕಸ ತಾನಾಗದೆ ಬೆಣ್ಣೆಯುಂಡೆಯೊಡೆಯಲ್ ಕಲ್ಲುಂ ತರಲ್ ಪೋಪರೇ
ನಸುರಾತ್ಮರ್ಗಿರದೈ ಮೃದುತ್ವದರಿವು ಶ್ರೀ ಚಲ್ವನಾರಾಯಣ

24 ಚಳಿಯಂ ನೀಗಲು ಕೆಂಡಕಂಬಳಿಗಳಂ ರೋಗಕ್ಷಯಕ್ಕೌಷಧಂ
ಮಳೆಯಂ ಮೇಣ್ ಬಿಸಿಲುಂ ನಿವಾರಿಸೆ ಕೊಡೆ ಕ್ಷುಚ್ಛಾಂತಿಗುಂ ಭೋಜನಂ
ಕೊಳೆಯಂ ನೀಗಲು ನೀರು ಮಿಂತು ವಿವಿಧೋಪಾಯಂಗಳುಂಟೆಲ್ಲಕುಂ
ಖಳನಂತಿದ್ದುವುದೆಂತು ಬಲ್ಲವರದಾರ್ ಶ್ರೀ ಚಲ್ವನಾರಾಯಣ

25 ಗುಣದೋಷಂಗಳನೇಕಮಾಗಿ ಜನರೊಳ್ ಸಾಮಾನ್ಯಮಾಗಿರ್ದೊಡುಂ
ಗುಣಮಾತ್ರಂ ತನಗಿಷ್ಟರೊಳ್ ಗಣಿಸುತಂ ದೋಷಗಳಂ ಮುಚ್ಚುತಂ
ಅಣುವಾದನ್ಯರ ದೋಷಮಂ ಪ್ರಬಲಮೆಂದುತ್ಪ್ರೇಕ್ಷೆಯಿಂದಾಡುವರ್
ವ್ರಣಮೈಸ್ಸೀಯರಿಗುಂಪರರ್ಗಮಿದುವೇ ಶ್ರೀ ಚಲ್ವನಾರಾಯಣ

26 ಗುಣಪೂಗಿದ್ದರಂ ಪೊಂದುವಸ್ತುವೊಳದೇಮತ್ತೊಂದರೋಳ್ ದೋಷಮ್ಮೈ
ಫಣಿವೇಣ್ಯಂಗನೆಯುಂಗವಾರ್ದವಗುಣಂ ಶ್ಲಾಘಾರ್ಹಮಂತಾದೊಡಂ
ಪ್ರಣಯಕ್ರೀಡೆಯೊಳಾವ್ಯುದುತ್ವಕುಚದಲ್ಲಿರ್ದಲ್ಲಿನಿಂದಾಸ್ಪದಂ
ಹೊಣೆಯೇನೆಲ್ಲದರೊಳಾಗುಣಂ ಸಮನಿರಲ್ ಶ್ರೀ ಚಲ್ವನಾರಾಯಣ

27 ಜನತಾನೇಕೆಡಲನ್ಯರೊಳ್ ವಿಧಿಯೊಳಂ ದೋಷಂಗಳಂ ಪೇಳ್ವರೈ
ತನಗಾದಭ್ಯುದಯಕ್ಕೆ ತನ್ನ ಮತಿಯುಂ ಕೊಂಡಾಡಿಕೊಳ್ವಂ ಸದಾ
ಅನುತಾಪಕ್ಕಿದು ಕಾರಣಂ ಗಡವಿಪತ್ಸಾಖ್ಯಾದಿಯೋಳ್ ಸಾಮ್ಯದಿಂ
ಮನದೊಳ್ ಕುಗ್ಗದೆ ಹಿಗ್ಗದಂತಿರೆ ಸುಖಂ ಶ್ರೀ ಚಲ್ವನಾರಾಯಣ

28 ವನದೋಳ್ ಕೋಗಿಲೆ ಚೂತವೃಕ್ಷದೆಡೆಯಲ್ಲಿಂಪಾಗಿ ಪಾಡುತ್ತಿರಲ್
ತನಗಾಮಂಜುಳನಾದಮಿಲ್ಲವೆನುತಂ ಕಾಕಾಳಿ ಬಂದೋಡಿಸಲ್
ಮನಕಾನಂದಮನಿತ್ತು ಕೋಗಿಲೆಮಗುಳ್ಕತ್ತಲ್ಲಿಯುಂಪಾಡದೇಂ
ಕೊನೆಗಾಕಾಗೆಗೆ ಲಭ್ಯಮೇಂ ಮೃದುರವಂ ಶ್ರೀ ಚಲ್ವನಾರಾಯಣ

29 ಹದನಾಗಿದ್ದರು ಬೂದಿತಿಪ್ಪೆಯೊಳದಂ ಬಿಟ್ಟೋಡಿಬಂದಾವಗಂ
ಮೆದೆಯುಂಪುಲ್ಲಿನದೇರಿ ನಾಯಿ ಶಯನಾನಂದಕ್ಕಿದೇತಾಣಮೆಂ–
ದಿದಿರೋಳ್ ಪುಲ್ಲನು ಮೇಯೆ ಗೋವುಬರೆತಾನೆದ್ದುದು ಗುರ್ರೆಂದರಲಾ
ಉದರಂ ತುಂಬಿತೆಗೋಗೆ ನಿದ್ರಿಸಿತೆತಾಂ ಶ್ರೀ ಚಲ್ವನಾರಾಯಣ

30 ಗಗನಂ ನಿಲ್ಲಲು ಕಂಬಮೇಕೆ ರವಿಗುಂ ಶಾಖಕ್ಕೆ ಬೇಕೆ ಶಿಖೀ
ಸೊಗಸಂ ತೋರುವ ಪಂಚವರ್ಣಶುಕಕುಂ ವರ್ಣಗಳಿಂ ಲೇಪಮೇ
ಉಗುರಂ ಪೈರನು ಕೊಯ್ವ ಕೂರ ಕುಡಿವಾಳ್ಗೊತ್ತಾಸೆಯೆಂದೋವರೇಂ
ನಗೆಮಂಕಣವಿಬುಧರ್ಗೆ ಬುದ್ಧಿಕಲಿಸಲ್ ಶ್ರೀ ಚೆಲ್ವನಾರಾಯಣ

31 ಉದರಂ ತುಂಬಿಸೆ ದೇಹದೋಳ್ ಸಕಲಮಾದಂಗಗಳಂ ಯತ್ನಿಸಲ್
ಬದಿಗೊತ್ತಿರ್ಪುದುತಿಂಡಿ ಕುಕ್ಷಿಯದುತಾನೇನೊಂದನುಂಗೈಯ್ಯದೆಂ–
ದದನಂ ನಿಂದಿಪರುಂಟೆ ಸಜ್ಜನರವೊಲೇಕಾಂತದಲ್ಲಿವೊಡಲ್
ಮುದದಿಂ ಸ್ವಾಶ್ರಿತಪೋಷಣೈಕನಿರತಂ ಶ್ರೀ ಚಲ್ವನಾರಾಯಣ

32 ನಿಯುತಾಹಾರಶುಚಿತ್ವಗಳ್ ತೊಲಗಿರಲ್ ವೈದ್ಯಾಲಯಂ ನಿರ್ಮಿಸಲ್
ಕ್ರಿಯೆಯೊಳ್ ಪಾಪಭಯಂ ಜನರ್ಗಿರದಿರಲ್ ನ್ಯಾಯಸ್ಥಲಂ ಪೇರ್ಚಿಸಲ್
ವ್ಯಯಮಾಗುತ್ತಧನಂ ಜನರ್ಗೆ ಸುಖಕಿಂ ತಾವಾಗಲುಂ ಕಷ್ಟಮೈ
ಸ್ವಯಮಿಂದಲ್ಲಿಸುನೀತಿಯೆಲ್ಲೆಡೆ ಸುಖಂ ಶ್ರೀ ಚಲ್ವನಾರಾಯಣ

33 ಕರವಾಳಂಬಹುತೀಕ್ಷ್ಣ ಮಂಜುವವನಂ ಸಾರ್ದೇಂ ಫಲಂ ಯುದ್ಧದೋಳ್
ಕುರುಡಂಗಂಗಂದದ ಚಂದ್ರಬಿಂಬಮುದಿಸಲ್ ಸಂತೋಷಮೆಂತಪ್ಪುದೋ
ಸರಸಕಿಲ್ಲದ ಸುಂದರಾಂಗಿ ಸತಿಯಿಂ ತದ್ವಲ್ಲಭಂಗೇಂ ಸುಖಂ
ಸಿರಿಯಿಂದೇಮುಪಯೋಗ ಲೋಭಿಗಹುದ್ಕೆ ಶ್ರೀ ಚಲ್ವನಾರಾಯಣ

34 ಉಣಲುಂ ಬಲ್ಲನುಡಲ್ಕೆ ಬಲ್ಲ ಕೊಡಲುಂ ಬಲ್ಲಂ ಸುಪಾತ್ರಂಗಳೊಳ್
ಹಣಮಂ ಕೂಡಿಡಲುಂ ಯಥೋಚಿತಮೆನಲ್ ಬಲ್ಲಂ ವಿವೇಕಾನ್ವಿತಂ
ಮಣ ತೂಗುತ್ತಿಹ ಚಿನ್ನಮಿರ್ದು ಮಣದಾ ನಿರ್ಭಾಗ್ಯಸಾಯುತ್ತಿರಲ್
ಹೆಣತಾನಾಗೊಡಗೊಯ್ವನೇನು ಹಣಮಂ ಶ್ರೀ ಚಲ್ವನಾರಾಯಣ

35 ಕೆರೆನಿಲ್ಲಲ್ಕಣೆಕಟ್ಟೆ ಕಟ್ಟಿರುವರ್ಕೆ ನೀರಾಸೆಮೀರಿರ್ದು ತಾ—
ನಿರಿಸಲ್ಕೊಪ್ಪದಿರಲ್ಕೆ ಕೋಡಿಯುಕರಂ ಪೂರ್ಣೋದಕಂ ಬಾಧಕಂ
ಅರಿತೀರೀತಿಯು ವಿತ್ತಲಾಭಮಧಿಕಂ ಪೊಂದುತ್ತನಾವೆಂದಿಗುಂ
ಕರವೆತ್ತೀಯಲೆಬೇಕು ಪಾತ್ರವರಿತು ಶ್ರೀ ಚಲ್ವನಾರಾಯಣ

36 ಕಡಲಾಕರ್ಷಿಸಿನೀರನುಪ್ಪನೆಸಗುತ್ತಾವಗಲುಂ ಕೂಡಿಡಲ್
ಬಿಡದಾನೀರನೆಪೀರ್ದುಮೇಘರವಿಯಲ್ಲಿಪೌರ್ಣಷ್ಟ್ಯದಿಂ ತಾಳುತಂ
ಕುಡುಗುಂ ಭೂಮಿಯೊಳೆಲ್ಲ ಭಾಗ ಕುಮುದಂ ಸ್ವಾದೂದಕಂ ಗೈದುತಾಂ
ಕೊಡುಗೈಗಳ್ ಸೆಳೆವರ್ ಧನಂ ಕೃಪಣರಿಂ ಶ್ರೀ ಚಲ್ವನಾರಾಯಣ

37 ಧನಧಾನ್ಯಾದಿಗಳಿರ್ದು ಸಂತತರು ಚಾಕ್ರಾಂತಂಗಂದೇಂ ಸೌಖ್ಯಮೈ
ಮನೆಯಿಂದೇಂ ಸತಿಪುತ್ರರಿಲ್ಲದೆ ಸದಾ ದೇಶಾಟನಂ ಗೈವಗೆ
ತನಗೋದಲ್ ಬರದಿರ್ದು ಪುಸ್ತಕಚಯಂ ಶ್ಲಾಘಾರ್ಹಮಿರ್ದೇಂಫಲಂ
ಅನುಭಾವ್ಯೇತರ ವಸ್ತುವೆಲ್ಲ ಹೊರೆಯೈ ಶ್ರೀ ಚಲ್ವನಾರಾಯಣ

38 ಉಪಯೋಗಕ್ಕಿರೆ ಕಾಲದೇಶಕ್ಕುಚಿತಂ ಸ್ವಲ್ಪಂ ಪದಾರ್ಥಂ ವರಂ
ತಪನೀಯೋಷ್ಟಕಮಾದೊಡಂ ಕಾಲಕ್ಕನೌಚಿತ್ಯದಿಂ
ಉಪವಾಸಶ್ರಮದಿಂ ಬಳಲ್ದ ಮನುಜಂಗತ್ಯಂತ ಮರ್ಯಾದೆಯಿಂ
ದುಪಚಾರಂಗಳೆ ಗಂಧ ಪೂಸಧಗಳಿಂ ಶ್ರೀ ಚಲ್ವನಾರಾಯಣ

39 ಬರಿಗೈಯ್ಯೋಳ್ಮಳಮಿಕ್ಕಲೇಂ ಫಲಮುಡಲ್ ವಸ್ತ್ರಂಗಳಂ ಕೊಟ್ಟಿತೇ
ನೊರೆಯರ್ ತಿಂಡಿಗಳಂದಮಂ ಕಿವಿಯೋಳೇಕ್ಷುಚ್ಛಾಂತಿಯುಂಟಾಯಿತೇ
ಸಿರಿವಂತರ್ ಕೊಡದೊಂದನಂ ಬಡವರಂ ಸಾಂತ್ವೋಕ್ತಿಯಿಂದಾವಗುಂ
ಹೊರೆಮಾತಾಡಿ ವಿಸರ್ಜಿಸಲ್ ದೊರೆತುದೇಂ ಶ್ರೀ ಚಲ್ವನಾರಾಯಣ

40 ನಗರಂಗಳ್ ವಿಪಿನಂಗಳಿಂ ತೃಣಗಳಂ ಕಾಷ್ಠಂಗಳಂ ಮೂಲವಮಂ
ಮೃಗಮಂ ಗಂಧಮಮನ್ಯವಸ್ತುಚಯಮಂ ಪೊಂದುತ್ತಿರಲ್ಕಾನನಂ
ಹಗುರಾದೊಂದುಪಕಾರಮಂ ನಗರದಿಂ ಪೊಂದಿರ್ಪುದೇಂ ಶ್ರೀಯುತರ್
ಜಗದೊಳ್ದೀನರಸಾಹ್ಯದಿಂ ಮೆರೆವರ್ಕೆ ಶ್ರೀಚಲ್ವನಾರಾಯಣ

41 ಬಲಮಂ ತಗ್ಗಿಸಿ ಸೂಕ್ಷ್ಮಬುದ್ಧಿಯುಳಿಸಿ ಕ್ಲೇಶಂಗಳಂ ಪೆರ್ಚಿಸಿ
ಪ್ರಲಯಂ ಸೌಖ್ಯಕೆ ಕಲ್ಪಿಸಿ ಸ್ವಜನರಿಂ ನಿಂದೋಕ್ತಿಯಂ ನಿರ್ಮಿಸಿ
ಕುಲದಿಂದೋಡಿ ಮೂಕನಾಗಿಸಿ ನರಂಭೂಭಾರಮಾಗಿರ್ಪವೋಲ್
ಗೆಲುವಿಂಗೈಯ್ಯಲುಶಕ್ತಮೈಬಡತನಂ ಶ್ರೀಚಲ್ವನಾರಾಯಣ

42 ಮೊದಲೇ ಕೋತಿಯು ಹೆಂಡಮಂ ಹುಳಿತುದಂತಾನೀಂಟಿರಲ್ಬಾಲದಾ
ತುದಿಯಂತಾಗಿಸೆ ಚೇಳು ಮೇಣ್ ಹಿಡಿದಿರಲ್ ದುಷ್ಟಗ್ರಹಂ ಮತ್ತದಂ
ಒದಗಿರ್ಪಾದುರವಸ್ಥೆಯಂ ವಿವರಿಸಲ್ಕೆಂತಪ್ಪುದೈದುಃಖಿತಂ–
ಗೊದಗಲ್ ದುಃಖವು ಮತ್ತೆ ಹುಚ್ಚನಹನೈ ಶ್ರೀಚಲ್ವನಾರಾಯಣ

43 ದ್ರವರೂಪಂಸಲಿಲ ಸ್ವಭಾವಜಗುಣಂ ತಾಂ ಶೈತ್ಯದಾಧಿಕ್ಯದಿಂ
ಸ್ರವಿಸಲ್ಕಾರದೆ ಕಲ್ಲಿನಂದದಿ ಮಹಾಕಾಠಿನ್ಯಮಾಂತಿರ್ಪುದು
ಕವಿಯಲ್ಕಷ್ಟಗಳೆಲ್ಲ ಭಾಗದೊಳು ತಾಂ ಶಾಂತಿಸ್ವಭಾವಂದೃಢಂ
ಜವದಿಂಜಾರಿನರಂ ಕಠೋರನೆನಿಪಂ ಶ್ರೀಚಲ್ವನಾರಾಯಣ

44 ಪರಿಚರ್ಯಾನಿಪುಣರ್ ನಿರೀಕ್ಷಿಸುತಿಹರ್ತಾವ್ ಸೇವೆಯಿಂ ತೋಷಿಸಲ್
ಸ್ಮರಣಾನುಕ್ಷಣಮಿಷ್ಟವಾದವುಗಳಂ ಭೋಗಕ್ಕೆ ತಂದೀಯುವರ್
ಕರೆವರ್ಗೌರವದಿಂದ ಸತ್ಕರಿಸುವರ್ ಶ್ರೀಮಂತರಂ ಸರ್ವರುಂ
ಸಿರಿವಂತರ್ ಧರೆಯೊಳ್ ಸದಾಸುಖಿಗಳೈ ಶ್ರೀಚಲ್ವನಾರಾಯಣ

45 ಜನರಿಂ ಮನ್ನಣೆ ಲೋಕಸೇವೆಯನಿಶಂವೈದುಷ್ಯಮುಂ ಶಾಂತಿಯುಂ
ಮನೆಮಾಕರ್ಷಕಗಾನವಿದ್ಯೆ ಕವಿತಾ ಸಾಮರ್ಥ್ಯಮುಂ ರೂಪಮುಂ
ಧನಧಾನ್ಯಾದಿಸಮೃದ್ಧಿದಾರ್ಢ್ಯತನುವೊಳ್ ಶ್ರೀನಾಥನೊಳ್ ಭಕ್ತಿಯುಂ
ವನಿತಾರತ್ನಗಳೊಲ್ಮೆಯೆಂಬಿವೆಸುಖಂ ಶ್ರೀಚಲ್ವನಾರಾಯಣ

46 ಸತತಂ ನಲ್ನುಡಿ ಕಾರ್ಯನಿರ್ವಹಣದೊಳ್ ಸಾಮರ್ಥ್ಯ ಮುಂತಾಳ್ಮೆಯುಂ
ಪತಿಸೇವಾರತಿಸುಂದರಾಕೃತಿಯು ಮೇಣ್ ಸೌಶೀಲ್ಯಮುಂಧರ್ಮಮುಂ
ಸತಿಯರ್ಗೀಸುಗುಣಂಗಳಿರ್ದು ಸುಖದಿಂ ಸಂಸಾರಮಂ ಗೈಯ್ವವಂ
ಕ್ಷಿತಿಯೊಳ್ ಧನ್ಯತಮಂ ರಸಜ್ಞತೆಯಿರಲ್ ಶ್ರೀಚಲ್ವನಾರಾಯಣ

47 ಫಲಪುಷ್ಪಂಗಳು ತುಂಬಿರಲ್ ತರುಲತಾವೃಂದಕ್ಕಲಂಕಾರಮೈ
ಕಲಹಂಸಂ ಕಮಲಾಕರಕ್ಕೆ ತಿಲಕಂ ವಸ್ತ್ರಕ್ಕಲಂಕಾರಮೈ
ನಲಿನಾಕ್ಷಸ್ಮರಣಂ ಮನಕ್ಕೆ ವಿನಯಂ ವಿದ್ಯಕ್ಕಲಂಕಾರಮೈ
ಲಲನಾಲಂಕರಣಂ ಸುಶೀಲಮೆ ವಲಂ ಶ್ರೀಚಲ್ವನಾರಾಯಣ

48 ಭವದೊಳ್ಭಾವಿಸಲೀವಿಚಿತ್ರವಿವಿಧವ್ಯಾಪಾರಗಳ್ ವೇಗದಿಂ
ದೆವೆಯಿಕ್ಕಲ್ಕವಕಾಶಮಿಲ್ಲದೆ ಸದಾನಿರ್ವರ್ತಿಪಾಪೇಕ್ಷೆಯಿಂ
ಸವಿಮರ್ಶಂ ಸೃಜಿಸಿರ್ಪನಂಗನೆಯರಂ ಮೇಣ್ಸ್ವರ್ಣಮಂ ನಾಲ್ಮೊಗಂ
ಭುವನಕ್ರೀಡೆಗಳಿಲ್ಲವೀ ಯುರಡರಿಂ ಶ್ರೀಚಲ್ವನಾರಾಯಣ

49 ಪುರುಹೂತಂ ಗಿರಲಿಲ್ಲವೇಂ ಶಚಿಯುಮೇಣ್ ದಿವ್ಯಾಪ್ಸರಸ್ತ್ರೀಯರುಂ
ದುರಿತಂ ಲೆಕ್ಕಿಸದೇಕೆ ಗೌತಮಸತೀ ಸಂಪರ್ಕದಿಂ ನೊಂದನೈ
ವರನಾರೀ ಗಣಮಿರ್ದು ರಾವಣನದೇಕಾ ಸೀತೆಯಿಂ ಬೆಂದನೈ
ಸ್ಮರನಾಳಾದವ ಪಾಪಗೈದುಕೆಡುವಂ ಶ್ರೀಚಲ್ವನಾರಾಯಣ

50 ಮಕರಾಂಕಂ ಗಡಬೆಸ್ತನೈಹರಡಿದೀ ಸಂಸಾರಪಾಥೋಧಿಯೊಳ್
ಸುಕುಮಾರಾಂಗಿಯರೆಂಬ ರಮ್ಯಬಡಿಶಂ ಸಂಚಾರಿಸಲ್ ವೇಗದಿಂ
ನಿಕಟಕ್ಕೈದೆಪುಮಾನ್ಗಳೆಂಬ ಝಷಗಳ್ ಕಾಂತಾಧರಂ ಪೀರಲುಂ
ಸುಖಮೇಂ ರಾಗಮಹಾಗ್ನಿಯೊಳ್ ದಹಿಸುವಂ ಶ್ರೀಚಲ್ವನಾರಾಯಣ

51 ಉದರಂ ಮಂದಿರಮುಚ್ಚಕಾವ್ಯರಚನಂ ವಾರಾಂಗನಾಪೇಕ್ಷೆಯುಂ
ಮದನಾಕಾಂಕ್ಷೆಯ ವಿದ್ಯೆಸತ್ಕಲೆಗಳಂ ಸಂಪೂರ್ತಿಯುಂ ಪೊಂದಿಸಲ್
ವಿದಿತಾತ್ಮರ್ ಜಗದಲ್ಲದಾರಿರುವರೈ ನಾನಾಕ್ರಿಯಾವರ್ತನಂ
ಕುದರಲ್ಮಾನವರಲ್ಲಿ ಕಾರಣಮಿವು ಶ್ರೀಚಲ್ವನಾರಾಯಣ

52 ಕಿವುಡಂಗೇತಕೆ ಗಾನಗೋಷ್ಠಿ ಸತತಂ ಜೀರ್ಣಾಂಗಗಳ್ ಕಂಪಿಪಾ
ಸ್ಥವಿರಂಗೇತಕೆ ಲಬ್ಧಯೌವನದಶಾಮುಗ್ಧಾಂಗಿ ಶೃಂಗಾರಗಳ್
ಶವಕೇತಕ್ಕೆ ಮನೋಹರಾಭರಣಗಳ್ ಸಿಟ್ಟೇಕೆ ನಿಶ್ಶಕ್ತಗುಂ
ಸವಿಮಾತೇತಕೆ ನಿರ್ಘೃಣ ಪ್ರಕೃತಿಗೆ ಶ್ರೀಚಲ್ವನಾರಾಯಣ

53 ಪ್ರಮದಂ ಚಿಂತೆಗಳಿಂ ಜೆಸಂಕಳುವಿನಿಂ ಮಾನಂಧನಂ ಮದ್ಯದಿಂ
ಶಮಕಾಂದರ್ಮ್ಯಸನಂಗಳಿಂದ ದಯೆಯುಂ ಮಾಂಸಾಶನಾಭ್ಯಾಸದಿಂ
ಶ್ರಮದಿಂಮೂರ್ದವ ತೌಭ್ಯದಿಂದ ಸುಖಮುಂ ಸತ್ಯಂ ವಿಶೇಷಾಶೆಯಿಂ
ಹಿಮದಿಂದಂ ಕಮಲಂಗಳಂತೆ ಕೆಡುಗುಂ ಶ್ರೀಚಲ್ವನಾರಾಯಣ

54 ದಯೇದಾಕ್ಷಣ್ಯಗಳಿಲ್ಲದರ್ಥ ಮೆಳೆವಾಜ್ಯೋತಿಷ್ಕನುಂ ವೈದ್ಯನುಂ
ಭಯದಿಂದೋಡುವ ಯೋಧನುಂ ಪಿತೃಮನಃಕ್ಲೇಶಾಸ್ಪದಂ ಪುತ್ರನುಂ
ಸ್ವಯವೋದಿಲ್ಲದ ಬೋಧಕಂ ಪ್ರಿಯಸಖಂ ಸ್ವಾರ್ಥೈಕಲಕ್ಷ್ಯಂಸದಾ
ನಿಯತಂ ತಾವಿವರಿಲ್ಲದಿರ್ಪುದೆ ಸುಖಂ ಶ್ರೀಚೆಲ್ವನಾರಾಯಣ

55 ಬೆಳೆಯುತ್ತುತ್ಸವದೋಳ್ ವಿಪತ್ತಿನಲಿ ತಾಂದೂರಕ್ಕೆ ಸಾರುತ್ತಲುಂ
ತರಿಸುತ್ತುಂಡು ಪೊಗಳ್ದು ತನ್ನೊಳಿಹುದಂ ಬಚ್ಚಿಟ್ಟುಕೊಳ್ಳುತ್ತಲುಂ
ಮುರಿಯುತ್ತನ್ಯರ ಮೈತ್ರಿಯಂ ಪಿಶುನನಾಗಿರ್ಪಾತತಾಂ ಮಿತ್ರನೇ
ನರಿಗುಂ ನೀಚತರಸ್ವಭಾವದವನು ಶ್ರೀಚೆಲ್ವನಾರಾಯಣ

56 ಕರೆದಾಗಲ್ಲದೆ ಪೋಗನುತ್ಸವಮಿರಲ್ ಕಷ್ಟಕ್ಕೆ ತಾಂ ನಿಲ್ಲುವಂ
ಕರೆದಿತ್ತಲ್ಲದೆ ತಿನ್ನನೇಳ್ಗೆಗೆ ತರಲ್ಕೊತ್ತಾಸೆಯಂ ಗೈಯ್ಯುವಂ
ಪರಮಪ್ರೇಮದೊಳೇಕಭಾವದೊಳಿಹಂ ಸನ್ಮಿತ್ರ ತಾನೆಂದಿಗುಂ
ಮರೆಯಲ್ಕಪ್ಪುದೆ ಮಿತ್ರನೀತೆರನಿರಲ್ ಶ್ರೀ ಚೆಲ್ವನಾರಾಯಣ

57 ಮನೆಯಲ್ಲಿರ್ಪುದ ಕದ್ದು ಮಾರಿ ಪರರೋಳ್ ಸಾಲಂಗಳಂ ಮಾಡುತಂ
ಮನಬಂದಂತಲೆಯುತ್ತ ವಿದ್ಯೆಕಲಿಯಲ್ಕಾಲಸ್ಯಮಂತೋರುತಂ
ಜನನಿಂದಾಸ್ಪದನಾಗಿ ದುಷ್ಟರೊಳ್ ತಾಂ ಸೇರುತ್ತ ಸುಳ್ಳಾಡುವಾ-
ತನಯಂ ಶತ್ರುವು ತಾಯಿತಂದೆಗಳಿಗೆ ಶ್ರೀ ಚೆಲ್ವನಾರಾಯಣ

58 ವಿನಯೋಪೇತನು ವಿದ್ಯೆಯೋಳ್ ನಿರತನುಂ ತನ್ನೆಲ್ಲ ಕಾರ್ಯಂಗಳಂ
ಜನವೊಪ್ಪುತ್ತಿರುವಂತೆ ಮಾಳ್ಪ ಚತುರಂ ಮಾತಾಪಿತೃ ಪ್ರೇಮಿಯುಂ
ಕನಸಲ್ಲಾದರು ಸುಳ್ಳನಾಡದೆ ಸದಾ ಸತ್ಸಂಗದಿಂ ಬಾಳ್ವವಂ
ತನಯಂ ಪೆತ್ತವರಾರ್ಜಿಸಿಟ್ಟ ಸುಕೃತಂ ಶ್ರೀ ಚೆಲ್ವನಾರಾಯಣ

59 ಹೊಗೆತಾಂ ಪುಟ್ಟಿದುದಗ್ನಿಯಿಂದ ದಹಿಸಲ್ ಸಾಮರ್ಥ್ಯಮ ವಹ್ನಿಯಿಂ
ಹೊಗೆ ಸಂಪಾದಿಸಿತೇನು ಬೀಜಫಲದಲ್ಲುತ್ಪನ್ನಮಾಗಿರ್ದುಮೇಣ್
ಹುಗಿದಿರ್ದುಂ ಫಲದಲ್ಲೆ ಕಿಂಚಿದದರಿಂ ಮಾಧುರ್ಯಮಂ ಪೊಂದಿತೇಂ
ಜಗದೋಳ್ ಪಂಡಿತಪುತ್ರ ಶುಂಠನೆನಿಪಂ ಶ್ರೀ ಚೆಲ್ವನಾರಾಯಣ

60 ಮಹಿಯೊಂದಾದರು ಬೀಜಭೇದಗಳಿರಲ್ ಸಸ್ಯಪ್ರಭೇದಂಗಳುಂ
ಸಿಹಿಯುಂ ಸಪ್ಪೆಯುಕಾರವಿಂತುಫಲದೋಳ್ ಭಿನ್ನಂ ರಸಂ ಗಂಧಮುಂ
ಸಹಜಂ ತಾನಿದು ಬೀಜವೊಂದರದಿರಲ್ ಕ್ಷೇತ್ರೈಕ್ಯಮಿರ್ದುಂ ಜನಂ
ಬಹುಭಿನ್ನಂ ನಿಜಕರ್ಮದಿಂದ ಗುಣದೋಳ್ ಶ್ರೀ ಚೆಲ್ವನಾರಾಯಣ

61 ನಿಜಕರ್ಮಂವಿಧಿ ದೈವಫಾಲ ಲಿಖಿತಾದ್ಯದೃಷ್ಟಾದ್ಯನೇಕಾಖ್ಯೆಯಿಂ
ಸೃಜಿಸುತ್ತಂ ಸುಖದುಃಖ ರೂಪಫಲಮಂ ಕಾಲೋಚಿತಂ ಲೋಕದೋಳ್
ಗಜಕೀಟಾದಿ ಸಮಸ್ತಜೀವಿ ಜನನಕ್ಕಾಧಾರಮಾಗಿರ್ಪುದೈ
ತ್ಯಜಿಸಲ್ಕುಂಟೆ ನರಂ ಸ್ವಕರ್ಮಫಲಮಂ ಶ್ರೀ ಚೆಲ್ವನಾರಾಯಣ

62 ಇಲಿಯೊಂದೆಲ್ಲಿಯು ತಿಂಡಿ ಸಿಕ್ಕದೆ ಬಳಲ್ದೋಡಾಡಿ ಹಾವಾಡಿಗಂ
ಬಲಮಾದೊಂದು ಭುಜಂಗಮಂ ಪುಟಿಕೆಯೊಳ್ ಕೂಡಿರ್ದುದಂ ಕಾಣದೆ
ಮೆಲಲಿಲ್ಲಿರ್ಪುದು ತಿಂಡಿಯೆಂದು ಕಡಿಯಲ್ ನಿರ್ಬಂಧಮಂ ನೀಗುತಂ
ಬಲಿತಾನಾಯ್ತುಹಿಗಿಂತು ದೈವಗತಿಯ್ತು ಶ್ರೀ ಚೆಲ್ವನಾರಾಯಣ

63 ಕೊಲಬೇಕೆನ್ನುತ ಬೇಡನೀಕ್ಷಿಸುತತಾಂ ವೃಕ್ಷಾಗ್ರದೋಳ್ ಪಕ್ಷಿಯಂ
ತಲೆಯನ್ನೆತ್ತುತ ಬಿಲ್ಲಿನಲ್ಲಿ ಸರಳಂಪೂಡುತ್ತ ಲಕ್ಷ್ಯಕ್ಕಿದಿರ್
ಕೆಲವುಂ ಹೆಜ್ಜೆಯಂ ಹಿಂದೆಹಿಂದೆ ಸರಿಯಲ್ ಸರ್ಪಕ್ಕಸುಂತೆತ್ತನೈ
ಫಲಮೇನನ್ಯವಧಕ್ಕೆ ಸಾಯುತಿರೆ ತಾಂ ಶ್ರೀ ಚೆಲ್ವನಾರಾಯಣ

64 ಅತಿಯಾದಾಸೆಯೊಳಾವಗುಂ ನಿಜತನು ಕ್ಲೇಶಂಗಳಂ ನೋಡದೆ
ಕ್ಷಿತಿಯೊಳ್ ಸುತ್ತುತ ಕಂಡಕಂಡ ಜನರಂ ಬೇಡಲ್ ವೃಥಾಲಾಘವಂ
ಕ್ಷತಿಯೊಂದಿಲ್ಲದೆ ದೈವಶಾಸಸದವೊಲ್ ಸಂಪ್ರಾಪ್ತಮಾಗಲ್ ಧನಂ
ಚತುರಂ ತೃಪ್ತಿಯನಾಂತು ಬಾಳ್ವುದುಚಿತಂ ಶ್ರೀ ಚೆಲ್ವನಾರಾಯಣ

೬5 ಕರದಿಂ ಮುಟ್ಟಿದುದೆಲ್ಲಮಂ ಕನಕಮಂ ಗೈಯಲ್ ವರಂ ದೇವರಿಂ
ನರನೋರ್ವಂ ಪಡೆಯಲ್ ನಿಜಾಂಗಮಖಿಲಂ ಕೇಶಂ ಧೃತಂ ವಸ್ತ್ರಮುಂ
ಕರಸಂಪರ್ಕದಿ ಚಿನ್ನಮಾಗೆ ಹಸಿವಿಂ ಸರ್ವಾಂಗದೊಳ್ ಭಾರದಿಂ
ನೆರೆನೊಂದಂ ಮಿತಿಮೀರಲಾಸೆ ಸುಖಮೇಂ ಶ್ರೀ ಚೆಲ್ವನಾರಾಯಣ

66 ಗಿರಿಯೇ ದೊಡ್ಡದು ದೊಡ್ಡದಯ್ಯ ಗಿರಿಗುಂ ಪಾಥೋಧಿ ಪಾಥೋಧಿಗುಂ
ಪಿರಿದಾಗಿರ್ಪುದು ವೀಕ್ಷಿಸಲ್ಕೆ ಗಗನಸ್ಥಾನಂ ನಭಸ್ಥಾನಕುಂ
ಪಿರಿದೈ ಬ್ರಹ್ಮವಿದಕ್ಕೆ ದೊಡ್ಡದಿರದೆಂದೆಂಬರ್ ವೃಥಾ ಪಂಡಿತರ್
ನರನಾಕಾಂಕ್ಷೆಗಳೆಲ್ಲಕಿಂತ ಪಿರಿದೈ ಶ್ರೀ ಚೆಲ್ವನಾರಾಯಣ

67 ಮನೆಯೊಳ್ ಹಿತ್ತಲಿನಲ್ಲಿ ಪುಟ್ಟಿರೆ ಗಿಡಂ ರೋಗಕ್ಕೆ ಮದ್ದಲ್ಲವೈ
ಮನಕಾನಂದಮನೀಯದಾತ್ಮಸತಿಯೊಳ್ ಸೌಂಧರ್ಯಮೊಂದೇ ವಿಧಂ
ಅನಿಶಂ ಧೂಪದ ಗಂಧದಲ್ಲಿರುವವಂಗಾ ಗಂಧಮೇ ತೋರದೈ
ಜನಕೆಲ್ಲಂ ಪೊಸತಾಗುತಿರ್ದೊಡೆ ರಂಚಿ ಶ್ರೀ ಚೆಲ್ವನಾರಾಯಣ

68 ನಡೆಯಲ್ ನಾಲ್ಕಡಿಗಳ್ ಬಳಲ್ದು ತೊಡೆಗಳ್ ಬೀಳ್ಗುಂ ಜಲಂ ಭಾವಿಯೊಳ್
ಕೊಡದೊಳ್ಸೇದಲು ತೋಳು ನೋಯ್ದುದು ಮಹಾಕಾವ್ಯಂಗಳಂ ಶಾಂತಿಯಿಂ
ಪಿಡಿದೋದಲ್ ತಲೆ ನೋಯ್ವುದಿಂತು ಸಕಲಂ ಸಂಕೋಚಮುಂ ಪೊಂದಿರಲ್
ಕೆಡದೇಂ ಸರ್ವದರೊಳ್ ಮಹತ್ವದ ಗುಣಂ ಶ್ರೀ ಚೆಲ್ವನಾರಾಯಣ

69 ಒಡಲಂ ಮುಚ್ಚದೆ ಪೂರ್ಣಮಾಗಿ ಸತಿಯರ್ ಗಂಡಂತೆ ವಸ್ತ್ರಂಗಳ–
ನ್ನುಡುವರ್ ಗಂಡಸು ಹೆಂಗಸಂತೆ ಮುಖಮಂ ಬೋಳ್ಗೈದಂ ಕೇಶಂಗಳಂ
ಬಿಡುವರ್ ಬೈತಲೆಬಾಚಿ ನಾಣ್ಚುವರಿವರ್ ಸ್ತ್ರೀಯರ್ ಬರಲ್ ಧಾರ್ಷ್ಟ್ಯದಿಂ
ನುಡಿದೇಂ ನಾಗರಿಕತ್ವಮಿಂತು ಫಲಿಸಲ್ ಶ್ರೀ ಚೆಲ್ವನಾರಾಯಣ

70 ವಸನಂ ನೇಯಲು ಯಂತ್ರ ಕಲ್ಲನೊಡೆಯಲ್ ಯಂತ್ರಂ ಮರಂ ಕುಯ್ಯಲು
ಕಸವನೆತ್ತಲು ಯಂತ್ರ ಭೂಮಿಗಿಳಿಯಲ್ ಮಾತಾಡಲುಂ, ಪಾಡಲುಂ
ಹೊಸಯಂತ್ರಂ ನಭಕೇರೆಯಂತ್ರಗಳಿರಲ್ ಯಂತ್ರಂಗಳಿಂದೆಲ್ಲಮುಂ
ವಶಮೈ ವೈದ್ಯುತಶಕ್ತಿ ತತ್ವಮರಿಯಲ್ ಶ್ರೀ ಚೆಲ್ವನಾರಾಯಣ

71 ಜಲಮುಂ ತಾಂ ಕ್ರಯಮಿತ್ತುಕೊಳ್ವುದು ಜನಂ ವಸ್ತ್ರಂಗಳಂ ಧಾನ್ಯಮಂ
ಬೆಲೆಯನ್ನೇರಿಸಿ ಮಾರೆ ಬಚ್ಚಿಡುವರೈ ಕೊಳ್ವರ್ ಮತದ್ವೇಷದಿಂ
ಖಲರ ನ್ಯಾಯದೊಳನ್ಯರಂ ಬದಲೆನಲ್ ನಾಣ್ಯಕ್ಕೆ ತಾಂ ಕಾಗದಂ
ತಲೆನೋವ್ಮೈ ಧನಿಕರ್ಗೆ ಕಾಲಗತಿಹಾ ಶ್ರೀ ಚೆಲ್ವನಾರಾಯಣ

72 ಒಳೆಗಾರಮ್ಮಹರೇಹರೇ–ಕರೆವರಾರ್–ನಾಭಿಕ್ಷುಕಂ–ಬಂದುದೇಂ
ಚಳಿಯಿಂ ನೊಂದೆನುತಿಂದು ಮೂರುದಿನಮಾಯ್ತೇನಾದರುಂ ನೀಡಿರೈ–
ಅಳುವೀಮಕ್ಕಳ ನೋಡು–ಕಂಡೆನಳಲೇ–ಕುಂಡಿಲ್ಲ ನೀಭಿಕ್ಷೆಯೊಳ್
ಗಳಿಸಿರ್ದಂ ಕೊಡೆಸಲ್ ತರಳ್ದ ಜವದಿಂ ಶ್ರೀ ಚೆಲ್ವನಾರಾಯಣ

73 ಶಿಶುಗಳ್ಗೂಡಿಸುತಿರ್ಪುದೇಂ–ಪೊಸವಿಧಂ ನಾಂ ಗಂಜಿಯುಂ ಗೈದಿಹೇ
ಉಸಿರಲ್ ನಾನಿದಗೈವೆ-ಕಾಗದಗಳಿಂ ಮಾಡಿರ್ಪನೀಗಂಜಿಯಂ
ಅಶನಕ್ಕಾಗುವ ಧಾನ್ಯಮೆಲ್ಲ ಭಯದಿಂ ಪಾತಾಳಮುಂ ಪೊಕ್ಕಿರಲ್
ಪಸಿವಿಂಗಲ್ ಬಳಸುತ್ತಲಿರ್ಪನಿದನೇ ಶ್ರೀ ಚೆಲ್ವನಾರಾಯಣ

74 ತೆರಳಲ್ಕಾರ್ಯಕೆ ವೇಳೆಯಾಯ್ತು ಬಡಿಸು–ಸ್ವಲ್ಪಾವಕಾಶಂ ಕೊಡಿ–
ತ್ವರೆಮಾಡೆಮ್ಮಧಿಕಾರಿ ಬೈವ–ನಡಲಾಂಕಾಳಕ್ಕಿಯಂ ಕಾಣೆನೈ–
ನೆರೆಯೊಳ್ ಸಾಲವ ಕೇಳು–ಕೇಳಲರೇರೆ ಬಂದಿದ್ದರೆನ್ನಲ್ಲಿನೆಲ್
ಭರದಿಂ ಕಾರ್ಯಕೆ ಪೋದನಾತ ಹಸಿವಿಂ ಶ್ರೀ ಚೆಲ್ವನಾರಾಯಣ

75 ಕಲೆವಿಜ್ಞಾನಗಳೆಷ್ಟು ಪೆರ್ಚುತಿರಲೇಂದೇಶಕ್ಷಯೋತ್ಪಾದಕಂ
ನೆಲಸಲ್ ವಂಚನೆಯುಂ ದುರಾಸೆಯು ಮತದ್ವೇಷಂಗಳುಂ ಸರ್ವರೋಳ್
ಖಿಲಮಾಯ್ತೈ ಸುಖಮಾನವಂ ಪಶುವಿಗುಂ ಕೀಳಾದನೀಕ್ಷೋಭೆಗಳ್
ತೊಲಗಲೆ ಮುಖ್ಯವು ಶಾಂತಿಸತ್ಯದಯೆಗಳ್ ಶ್ರೀ ಚಲ್ವನಾರಾಯಣ

76 ನರನಂತಿರ್ಪುದು ವಾನರಂ ಕರಗಳಿಂ ತನ್ನಾಲಯಂ ನಿರ್ಮಿಪಾ
ಪರಿಯಂ ಕಾಣದೆ ವಾತವೃಷ್ಟಿಭಯದಿಂ ತಾಂ ಕಂಪಿಸುತ್ತಿರ್ಪುದು
ಮರದೋಳ್ ಪಕ್ಷಿಯು ಗೂಡಕಟ್ಟಿ ಸುಖದಿಂದಿರ್ಕುಂ ಗತಪ್ರಜ್ಞರೋಳ್
ನೆರೆಸೌಕರ್ಯದ ವಸ್ತುವಿರ್ದು ಫಲವೇಂ ಶ್ರೀ ಚಲ್ವನಾರಾಯಣ

77 ಗರಿಯಂ ಬಿಚ್ಚುತ ಕತ್ತಕೊಂಕಿಸಿ ನವಿಲ್ ನೃತ್ಯಂಗಳಂ ಗೈಯ್ಯಲುಂ
ಉರಗಂ ಮೆಲ್ಲನೆ ಬಿಚ್ಚಿ ತನ್ನ ಹೆಡೆಯಂ ತೂಗಾಡಲಂ ಹರ್ಷದಿಂ
ಕೊರಳನ್ನುಬ್ಬಿಸಿ ಪಾರಿವಾಳ ನಲಿಯಲ್ಕಾರಿರ್ಪರೈ ಶಿಕ್ಷಕರ್
ವರಮೈ ಸತ್ಕಲೆಗೆ ಸ್ವಭಾವಜಗುಣಂ ಶ್ರೀ ಚಲ್ವನಾರಾಯಣ

78 ನೆಲದೋಳ್ ಕುಪ್ಪುವ ಕಪ್ಪೆ ನೋಡಿ ಖಗಮುಂ ತಾನಾಶಿಸಲ್ಪಾರಲುಂ
ಜಲದಲ್ಲೀಜುವ ಮೀನನೋಡಿ ತೊಡಗಲ್ ಮೀಯಲ್ಕೆ ತಾಂ ಮೂಪಕಃ
ಛಲದಿಂ ಸತ್ಕವಿಕಾವ್ಯದಂತೆ ರಚಿಸಲ್ ತಾವೆತ್ನಿಸಲ್ ಗಾಂಪರುಂ
ಫಲವೇಂತೋಪರಿಣಾಮದೋಳ್ ನುಡಿವುದೇಂ ಶ್ರೀ ಚಲ್ವನಾರಾಯಣ

79 ಮೊಸರಂ ಪಾಲನು ತಂದು ವಿಕ್ರಯಿಸುವರ್ ತಾವೇ ಗೃಹದ್ವಾರದೋಳ್
ಪೆಸರಂ ಪೇಳಸಹ್ಯಮಾದ ಸುರೆ ತಾಂ ಗ್ರಾಮಾಂತ್ಯದಲ್ಲಿರ್ದೊಡಂ
ಉಸರನ್ನೆತ್ತದೆ ಪೋಗಿ ಕೊಳ್ವರಹಹಾ ಸದ್ವಸ್ತುವೊಳ್ ಗೌರವಂ
ನಶಿಸಿರ್ಕುಂ ಮಿಗೆ ನೀಚವಸ್ತು ಬಲದಿಂ ಶ್ರೀ ಚಲ್ವನಾರಾಯಣ

80 ಬೆರೆಯಲ್ ನಾರು ಸುಮಂಗಳೊಂದಿಗೆ ಶಿರೋಧಾರ್ಯಾರ್ಹಮಾಯ್ತೆನ್ನುವರ್
ತೊರೆಯಲ್ ನಾರಿನ ಸಂಗಮಂ ಸುಮಗಳೇ ತಾವ್ ಮಾಲೆಯಂತಪ್ಪುವೈ
ಅರಿತಿರ್ದುಂ ಜನ ಪೇಳ್ವುದೇನಿದ ಜಸಂ ಕೀಳಾದವರ್ಗೆಂದಿಗುಂ
ಸ್ಮರಣಕ್ಕುಂ ಬಹುದೂರಮಲ್ತೆ ಜಗದೊಳ್ ಶ್ರೀ ಚಲ್ವನಾರಾಯಣ

81 ಮಧುರಾಲಾಪ ಶುಕಕ್ಕೆ ಪಂಜರದೊಳೇ ನಿರ್ಬಂಧಮಂ ಕೊಟ್ಟಿತೈ
ನಿಧನಕ್ಕಾದುದು ತಾನೆ ಕತ್ತುರಿಮೃಗಕ್ಕಾನಾಭಿ ಗಂಧಸ್ಥಲಂ
ವಧಿಸಲ್ಕಾದುದು ಕೋಶತಂತು ಪುಳುವಂ ಸದ್ವಸ್ತುನಿರ್ಮಾತೃಗಳ್
ವಿಧಿಸಂಕಲ್ಪದಿ ದುಃಖಿಗಳ್ ಪರಿಕಿಸಲ್ ಶ್ರೀ ಚಲ್ವನಾರಾಯಣ

82 ತಿಳಿದಿರ್ಪಂಗೆ ವಿಮತ್ಸರಂಗೆ ಕರುಣಾ ಪೂರ್ಣಂಗೆ ಸತ್ಯಾತ್ಮಕಂ
ಗಳಿಸಲ್ಕನ್ಯ ಗುಣಂಗಳೊಪ್ಪದ ಸುಹೃದ್ವರ್ಯಂಗೆ ರಾಸಿಕ್ಯದಿಂ
ಬೆಳಗುತ್ತಿರ್ಪ ಮನೀಷಿಗನ್ಯ ಕೃತಿಯೊಳ್ ತೋರ್ಕುಂಯಥಾವಸ್ಥಿತಂ
ಕೊಳೆತಾತ್ಮಂಗದು ದೋಷಪೂರ್ಣಮೆನಿಕುಂ ಶ್ರೀಚಲ್ವನಾರಾಯಣ

83 ಧನಿಕರ್ ಸ್ವರ್ಣಗಳಂತೆ ಸತ್ಕವಿಗಳೇ ರತ್ನಂಗಳಂತಿರ್ಪರೈ
ಕನಕಂ ರತ್ನಕೆ ತನ್ನೊಳಾಶ್ರಯ ಬಲಂ ಕೊಟ್ಟಲ್ಲದೀರತ್ನಗಳ್
ಘನ ಭೂಷಾಕೃತಿಯಿಂ ನರರ್ಗೆ ಧರಿಸಲ್ಕರ್ಹಂಗಳೆಂತಪ್ಪುವೈ
ಧನಿಕಾಲಂಬಮಿರಲ್ ಬುಧರ್ ಬೆಳಗುವರ್ ಶ್ರೀ ಚಲ್ವನಾರಾಯಣ

84 ಹಯಗೇಹಂ ದಹಿಸಲ್ಪಡುತ್ತಿರಲದಂ ಭೂಪಾಳಿ ರಾಗಾಳಿಯಿಂ
ಭಯದಿಂ ಬಿನ್ನಪಗೈಯೆ ಸೇವಕ ನೃಪಂಗಾಲಾಪನಂ ಗೈದವೋಲ್
ಬಯಸಲ್ ಕಾಲವಿಳಂಬಮುಂ ಕೆಡುವುದೈ ಕಾರ್ಯಂ ಸುಧೀಶಾಲಿಗುಂ
ಕ್ರಿಯೆಯೊಳ್ ಕಾಲವ ಮೀರದಾತ ಸುಖಿಪಂ ಶ್ರೀ ಚಲ್ವನಾರಾಯಣ

85 ಸ್ಥಿರಮಾಗಿರ್ಪೆವು ನಾವು ಬಾರದು ಜರಾಮೃತ್ಯು ಪ್ರಘಾತಂಗಳೆಂ-
ಬರಿದಿಂ ಸಾಧಿಸಬೇಕು ವಿದ್ಯೆಯನು ಮೇಣ್ ವಿತ್ತಂಗಳಂ ಧೀಯುತರ್
ಕರಮಿಂ ಮೃತ್ಯುವು ನಮ್ಮನೊಯ್ಯಲೆಳೆದಂ ನಾಮೀಕ್ಷಣಂ ಸಾಯ್ವೆವೆಂ-
ಬರಿಮಿಂ ಕೂಡಲೆ ಧರ್ಮಗೈವುದುಚಿತಂ ಶ್ರೀ ಚಲ್ವನಾರಾಯಣ

86 ಮನಮುಂ ಬಾಲ್ಯದೊಳಾಟಗಳ್ ಸೆಳೆವುವೈ ತಾರುಣ್ಯದೊಳ್ ನಾರಿಯರ್
ಘನ ಲಾವಣ್ಯ ಮಹತ್ವದಿಂ ಸೆಳೆವರೈ ವೃದ್ಧತ್ವದೊಳ್ ಚಿಂತೆಗಳ್
ಅನಿಶಂ ತಾವ್ ಸೆಳೆಯಲ್ ನರಂ ಸುಗತಿಯಂ ಸಂಪಾದಿಸಲ್ ಕಾಲಮಂ
ಕೊನೆಗುಂ ಕಾಣುವನೇಂ ನಿರೀಕ್ಷಿಸುತಿರಲ್ ಶ್ರೀ ಚಲ್ವನಾರಾಯಣ

87 ಮಳೆಗಾಲಕ್ಕಿರಲೆಂದು ತಾಂ ದುಡಿಯುವಂ ಮತ್ತೆಂಟು ಮಾಸಂಗಳೊಳ್
ಕಳೆಯಲ್ ರಾತ್ರಿಯ ಸೌಖ್ಯಮಾಗಿ ಹಗಲೊಳ್ ಸಂಪಾದಿಸಲ್ ಯತ್ನಿಪಂ
ಸುಳಿವಾಯುಪ್ಪೊಳುಣಲ್ಕೆ ಯೌವನದೊಳೇ ತಾನಾರ್ಜಿಸಲ್ ನಿಲ್ಲುವಂ
ಗಳಿಸಲ್ ಮೋಕ್ಷವ ನಾವಗುಂ ಶ್ರಮಿಪುದೈ ಶ್ರೀ ಚಲ್ವನಾರಾಯಣ

88 ಬೆಳಗಾಗಲ್ ತಿರುಪಕ್ಕೆಪೋಪಬಡವಂ ಪೊಂದಲ್ಯಥೇಷ್ಟಂಧನಂ
ಚಳಿಯಿಂದಂ ಜಡಮಾದದೇಶದಿ ಬಿಡಲ್ಕಿಗ್ಮಾಂಶಂ ತನ್ನಂಶುವಂ
ಮಳೆಯಾಗಲ್ ಸಮಯಕ್ಕೆ ಲೋಕಸುಖಿ ಪಂತಾವಾಗಲುಂ ಯೋಗಿಗಳ್
ಕಳೆವರ್ ಧ್ಯಾನಸಮಾಧಿಯಿಂದ ಮುದಮಂ ಶ್ರೀ ಚಲ್ವನಾರಾಯಣ

89 ಪರಿಪಕ್ವಾತ್ಮರು ನೋಡುತಿರ್ಪರು ಜಗತ್ಸಂಸಾರದೀ ನಾಟ್ಯದೊಳ್
ಧರಿಸುತ್ತಿರ್ಪುದ ಬಾಲ್ಯ ಯೌವನದ ಶಾವಾರ್ಧಕ್ಯವೇಷಂಗಳಂ
ಉರುದಾರಿದ್ರ್ಯವಿ ಪತ್ಸುಖಾದ್ಯಭಿನಂಮತೀರಲ್ಕೆಸಾಯುತ್ತತಾಂ
ಮರೆಯಾಗುತ್ತಿರೆಲೋಕ ಶೋಕವಿದಕೇಂ ಶ್ರೀ ಚಲ್ವನಾರಾಯಣ

90 ಮನಮೇ ಸಾರಥಿಯಾಗಿರಲ್ ಕುದುರೆಗಳ್ ಪಂಚೇಂದ್ರಿಯಂಗಳ್ ರಥಂ
ತನುವೈ ನಮ್ಮದು ಹಾದಿ ಸಂಸ್ಕೃತಿಪಥಂ ಪ್ರಾಪ್ಯಸ್ಥಲಂ ಮೋಕ್ಷಮೈ
ಅನುವಾದಾತ್ಮನು ಯಾತ್ರಿಕಂ ಹಯಗಳಂ ಸನ್ಮಾರ್ಗದೊಳ್ ಚಾಲಿಸಲ್
ಅನುಕೂಲಂ ವಿಪರೀತಮಾಗೆ ಕೆಡುಗುಂ ಶ್ರೀ ಚಲ್ವನಾರಾಯಣ

91 ಪಣಮಂ ಪೊಂದಿರೆ ಕಳ್ಳರಿಂದ ಭಯಮೈ ರೂಪಕ್ಕೆ ಮುಪ್ಪಿಂಭಯಂ
ಗುಣಮಂ ಪೊಂದಿರೆ ನೀಚರಿಂದ ಭಯಮೈ ಬಾಳ್ಗಂ ಭಯಂ ಮೃ-
ತ್ಯುವಿಂ ಅಣಿಯಾಗಿರ್ಪ ಸುಖಕ್ಕೆ ರೋಗ ಭಯಮೈ ಸರ್ವಂಭಯಕ್ಕಾಕರಂ
ಎಣಿಸಲ್ಕಿಲ್ಲದರೊಳ್ ವಿರಾಗಮಭಯಂ ಶ್ರೀ ಚಲ್ವನಾರಾಯಣ

92 ಮೃತಿಗೀಡಾದ ನರಂಗೆ ಪೊನ್ನು ವಸನಂ ಧಾನ್ಯಂಧನಂ ಸ್ವಾರ್ಜಿತಂ
ಕ್ಷಿತಿಯೆಷ್ಟಿರ್ದೊಡಮೇಂ ಫಲಂ ಜೊತೆಯೊಳೇಕೊಂಡೊಯ್ಯಲುಂ ಸಾಧ್ಯಮೆ
ವ್ರತದಾನಾದಿಸುಕರ್ಮಮುಂ ದುರಿತಮುಂ ಕೂಡಿರ್ದು ಜೀವಾತ್ಮನಂ
ಸತತಂ ತತ್ಫಲ ಭೋಗಿಯಾಗಿಸುವುದೈ ಶ್ರೀ ಚಲ್ವನಾರಾಯಣ

93 ನರಜನ್ಮಕ್ಕೆ ವಿಶೇಷಮಾಗಿರುವುದೇ ಜ್ಞಾನಂ ವಿವೇಕೋಜ್ವಲಂ
ಪರಮಶ್ರೇಯವನಾರ್ಜಿಸಲ್ಕಿರಲದಂ ದುಷ್ಕೃತ್ಯಕ್ಕೆ ಪ್ರೇರಿಸಲ್
ಕರದೊಳ್ ಶತ್ರುವ ಕೊಲ್ವ ಶಸ್ತ್ರಮಿರೆ ತಾಂ ವ್ಯತ್ಯಾಸದಿಂ ಸ್ವಾಂಗಮಂ
ತರಿದಂತಪ್ಪುದು ತಪ್ಪದೈ ದುಗಡಗಳ್ ಶ್ರೀ ಚಲ್ವನಾರಾಯಣ

94 ಬಹುಧಾ ಪೇಳಿ ಹಿತೋಕ್ತಿಯಿಂ ಫಲಮದೇಂ ದೋಷಂ ಮನುಷ್ಯರ್ಗೆ ತಾಂ
ಸಹಜಂ ದುಸ್ತ್ಯಜಮಿಂತಿರಲ್ ಮನದೊಳೇ ಶ್ರೀನಾಥನಂ ಭಕ್ತಿಯಿಂ
ಬಹಿರಾಡಂಬರ ಮಿಲ್ಲದಂದೆ ಭಜಿಸಲ್ ನಮ್ಮೆಲ್ಲ ಪಾದಂಗಳಂ
ದಹಿಸುತ್ತಾತನೆ ರಕ್ಷಿಪಂ ವಲಮಿದು ಶ್ರೀ ಚಲ್ವನಾರಾಯಣ

95 ನಿಜಗಾರ್ಹಸ್ಥ್ಯದ ಧರ್ಮದಿಂ ಮನೆಯೊಳೇ ಶಾಂತಿಸ್ವಭಾವಾನ್ವಿತಂ
ಭಜಿಸಲ್ ಶ್ರೀಹರಿಯಂ ಸತೀಸುತರಿರಲ್ ಮೋಕ್ಷಕೆಡರ್ ಕಾಣೆನೈ
ತ್ಯಜಿಸಲ್ಕಾಗದೆ ಕಾಮ ಮೋಹ ತೃಷೆಯಂ ಸನ್ಯಾಸಿವೇಷಾನ್ವಿತಂ
ವಿಜನಾರಣ್ಯದಿ ವಾಸಿಸಲ್ ದೊರೆವುದೇಂ ಶ್ರೀ ಚಲ್ವನಾರಾಯಣ

96 ಬಲದಿಂ ಭೀಮನು ಶಾಂತಿಯಿಂ ಯಮಭವಂ ಕರ್ಣಂ ಮಹಾತ್ಯಾಗದಿಂ
ನಲಿನಾಕ್ಷಂ ಶ್ರಿತರಕ್ಷಣಕ್ರಿಯೆಗಳಿಂ ಭೀಷ್ಮಂ ಪ್ರತಿಜ್ಞೋಕ್ತಿಯಿಂ
ಚಲುವಿಂ ದ್ರೌಪದಿ ಭಕ್ತಿಯಿಂದ ವಿದುರಂ ದುರ್ಯೋಧನಂ ಮಾನದಿಂ
ಗೆಲುವಿಂದರ್ಜುನ ಭಾರಥಪ್ರಥಿತರ್ಕೈ ಶ್ರೀ ಚಲ್ವನಾರಾಯಣ

97 ನೊರೆವಾಲ್ಗಿಂಗಿನ ಸಂಗಮೋ ಪುಣುಗಿನಲ್ಲೀರುಳ್ಳಿಗುಂ ತಾಣಮೋ
ವರವೀಣಾಮೃದುಗಾನದೊಂದಿಗೆ ಮಹಾಭೇರೀಸ್ವನಂ ವಾದ್ಯಮೋ
ಗರುಡಂ ಪಾರಲು ಕೋಳಿ ತಾನು ಜೊತೆಯೋ ಶ್ರೀನಾಥ ಭಕ್ತಾಳಿಗುಂ
ಸರಿಯೋ ವಿದ್ಯೆಯ ಗರ್ವದುದ್ಧತ ಬುಧರ್ ಶ್ರೀ ಚಲ್ವನಾರಾಯಣ

98 ಭಗವದ್ಗೀತೆಯು ಮಾನ್ಯಮೆಂಬ ಮತಿ ತಾನಿದ್ದಲ್ಲಿ ಶಾಸ್ತ್ರಗಳುಂ
ನಿಗಮಂಗಳ್ ದಿಟಮೆಂಬ ನಂಬಿಕೆಯಿರಲ್ ಮಾತ್ಸರ್ಯಮಂ ಬಿಟ್ಟಿರಲ್
ಜಗದೀಶಂ ಖಗವಾಹನಂ ಪರತರಂ ನಾರಾಯಣಂ ಸತ್ಯಮೈ
ಬಗೆಯೊಳ್ ಭಾವಿಸುತಾತನಂ ಭಜಿಪುದೈ ಶ್ರೀ ಚಲ್ವನಾರಾಯಣ

99 ಹರಿ ಮೀನಾದನು ಕೂರ್ಮಮಾದ ಕಿಟಿಯಾಗಿರ್ದಂ ನೃಸಿಂಹಾಕೃತಿಂ
ಧರಿಸಿರ್ದಂ ಗಡ ವಾಮನಾಕೃತಿಯೊಳೇ ತ್ರೈವಿಕ್ರಮಾಕಾರಮಂ
ಪೊರೆದಂ ಮೇಣ್ ಪರಶುಂ ಧನುಸ್ಸುಮುಸಲಂ ಪೊದಿರ್ದ ರಾಮರ್ಕಳಾ-
ಗಿರುತಂ ಕೃಷ್ಣನುಮಾದ ಕಲ್ಕಿಯುಹನ್ನೈ ಶ್ರೀ ಚಲ್ವನಾರಾಯಣ

100 ಕರುಣಾವಾಸ ಮುಕುಂದ ಕೈಟಭರಿಪೋ ಶ್ರೀವತ್ಸ ವಕ್ಷಸ್ಥಲ
ದ್ವಿರದಾಪದ್ವಿನಿವಾರಕಾಚ್ಯುತ ಹರೇಪೀತಾಂಬರ ಶ್ರೀಧರ
ಚರಣಾಕ್ರಾಂತ ಸಮಸ್ತಲೋಕ ಭಗವನ್ ವೈಕುಂಠ ರಾಮಾಕೃತೇ
ಪರರಿನ್ನಾರನು ಕಾಣೆ ಪಾಲಿಪುದು ನೀಂ ಶ್ರೀ ಚಲ್ವನಾರಾಯಣ

101 ಮೃಡಭಕ್ತಂಗೆ ಮೃಕಂಡು ಸೂನುವಿಗೆ ನೀಂ ಸಂವರ್ತ ಸೃಷ್ಟ್ಯಾದಿಗಳ್
ದೃಢಮಾಗೊಪ್ಪುವ ರೀತಿ ತೋರಿಸಲವಂ ಮಾಹಾತ್ಮ್ಯಮಂ ನಿನ್ನದಂ
ಹಿಡಿಸಲ್ಕಾರದ ಭಕ್ತಿಯಿಂದನುಭವಂಗೊಂಡಾತ ಕೊಂಡಾಡಿದಂ
ಕೊಡನಿನ್ನಂಘ್ರಿಯೊಳಂತು ಭಕ್ತಿಯೆನಗುಂ ಶ್ರೀ ಚಲ್ವನಾರಾಯಣ

102 ಯತಿಭಂಗಕ್ಕತಿಯಾಗಿ ಕನ್ನಡ ಮಹಾಕಾವ್ಯಂಗಳೊಳ್ ವೃತ್ತದಿಂ
ಕೃತಿಯಂ ನಿರ್ಮಿಪ ಕಾಲದಲ್ಲಿ ತಡೆಗಳ್ ಪ್ರಾಚೀನರಿಂದಿಲ್ಲವೈ
ಕೃತಿಯಂ ಗೈದಿಹೆ ಶಾಶ್ವತಂ ಯತಿಗೆ ನಾನೀಯುತ್ತ ಮರ್ಯಾದೆಯಂ
ಚತುರತ್ವಾತಿಶಯಂ ಬುಧರ್ಗರುಹಿದೆಂ ಶ್ರೀ ಚಲ್ವನಾರಾಯಣ

103 ಪದಗಳ್ ಪೊಂದಿಹುವಿಲ್ಲಿ ಚೀನವಸನಂ ನೆಯ್ದಂತೆ ಲಾಲಿತ್ಯದಿಂ
ಹೃದಯಾನಂದ ಕರಾರ್ಥಮುಳ್ಳ ವಿಷಯುಂ ರಾರಾಜಕುಂ ಕೋಮಲಂ
ಕದಿಯಲ್ ಕಾರಣಮಿಲ್ಲ ಮನ್ಯ ಕೃತಿಯೊಳ್ ಪ್ರಜ್ಞಾಬಲಂ ತುಂಬಿರಲ್
ಬುಧರೆಂ ಪೇಳ್ವರೊ ನೋಳ್ಪನೀಕೃತಿಗೆ ನಾಂ ಶ್ರೀ ಚೆಲ್ವನಾರಾಯಣ

104 ರಚಿಸಲ್ಕೀ ಕೃತಿಯಂ ಶ್ರಮಂ ಪಡೆದ ನಾನಂತಾವೊಡಂ ಗ್ರಂಥಮಂ
ಪ್ರಚುರ ಶ್ರೀಯುತಮಾಗಿ ನಿರ್ಮಿಸಿಹೆನೆಂದುಬ್ಬಲ್ಕೆ ನಾಂ ಗಾಂಪನೇ
ವಚನಂ ಬುದ್ಧಿಮನಂ ಪ್ರವರ್ತಿಸುವುದು ಶ್ರೀ ವಾಸುದೇವೇಚ್ಛೆಯಿಂ-
ದುಚಿತಂ ಶ್ರೀಹರಿಗರ್ಪಿಸಲ್ ಸಕಲಮಂ ಶ್ರೀ ಚೆಲ್ವನಾರಾಯಣ

105 ಜನಮೆಲ್ಲಂ ಸುಖಮಾಂತು ಬಾಳ್ಗೆ ಸತತಂ ಸೌಜನ್ಯದಿಂಶಾಂತಿಯಿಂ
ವನಮಾಲಾ ಧರನೊಲ್ಮೆ ತೋರ್ಕೆ ಜಗದೊಳ್ ಧರ್ಮಂ ಸ್ಥಿರಂಗೈಯ್ಯಲುಂ
ತಿನಿಸಿಂ ಮತ್ಸರದುಗ್ರನಿಂದೆಗರೆವಾ ನೀಚರ್ಕಳಂ ಮೆಚ್ಚಿಸ-
ಲ್ಕನುತಾನಾಗದೆ ಬಾಳ್ಗೆ ಸತ್ಕೃತಿಗಳುಂ ಶ್ರೀ ಚೆಲ್ವನಾರಾಯಣ

ಶ್ರೀ ಚೆಲ್ವನಾರಾಯಣ ಶತಕಂ ಸಂಪೂರ್ಣಂ

ಶ್ರೀ ಕೃಷ್ಣಾರ್ಪಣಮಸ್ತು

# ಅರ್ಚೆಯು ಅಚ್ಯುತ

1 ಆಶ್ಚರ್ಯರೂಪದಿ ಮುಚ್ಚಿ ಮಹಿಮೆಯ
ನಿಶ್ಚಲತೆಯಿಂದಿರುವೆಯಾದರಂ
ನೆಚ್ಚಲಾರೆನು ಕೃಷ್ಣ ನಿನ್ನನು
ಬೆಚ್ಚಿಬೆದರುವೆ ನಿನ್ನ ಲೀಲಾಚರಿತಗಳ ನೆನೆದು

2 ವೇದಶಿಖರಕೆ ನಿಲುಕದವನೀಂ
ಯಾದವರ ವಂಶದಲಿ ಜನಿಸಲು
ಖೇದವನುಭವಿಸಿರುವೆ ಹೀಗಿರೆ
ಮೋದವೇ ನಿನಗಿದರೊಳರ್ಚಾಕೃತಿಯೊಳೇನು ಸುಖ

3 ನಿನಗೆ ನಾನೇನೇನನೆಂತುಟೊ
ಮನಕೆಬಂದಂತೆಸಗಿದರು ನೀಂ
ಕನಿಕರದಿಕೈಕೊಂಡು ತಣಿವುದು
ಸನಕವಿನುತನೆ ಸಾಹಸವಬಿಡು ಸಾರಿಪೇಳುವೆನು

4 ಚಂಡಿತನವನು ಬಿಡಲುಶೌರಿಯೆ
ದಂಡಿಸಲು ಮುದ್ದಿಸಲು ತಿಳಿಯೆನು
ಬೆಂಡುಮನವಿದು ಭಕ್ತಿರಹಿತವು
ಚಂಡಿಸಲು ಸುಖವಿಲ್ಲವೆನ್ನೊಳು ಬರಿದೆ ಬಳಲದಿರು

5 ಸೆರೆಮನೆಯೊಳವತರಿಸಿದುದ ನೀಂ
ಮರೆಯಲಾಗದೆನುತ್ತ ನಿನ್ನನು
ಕಿರಿಯಮನೆಯೊಳು ಕೂಡಿಮುಚ್ಚುವೆ
ತರವು ನಿನಗಿದೆ ನಮ್ಮನಾಶ್ರಯಿಸಿರುವ ತಪ್ಪಿತಕೆ

6 ಸೂರ್ಯನುದಯಿಸಿ ವೇಳೆಮೀರಿದೆ
ಶೂರ್ಯಗೀತಗಳೊಂದುಮಿಲ್ಲದೆ
ಆರ್ಯನೆಚ್ಚರಿಸಲ್ಕೆ ಪೂರ್ವಾ-
ಚಾರ್ಯರೆಸಗಿದ ಪದ್ಯಪಠಿಸುವೆಯೇಳುನಸುನಗುತಾ

7 ಕ್ಷೀರದಧಿಯಭಿಷೇಕವೆಸಗುವೆ
ಹೀರದಿರುಂಬಾಯೆಡೆಗೆ ಬಂದುದ
ಬೇರೆ ಕುಡಿಯಲು ಕೊಡುವೆ ನಿನ್ನಯ
ಚೋರತನವನು ಪಾಲುಮೊಸರೊಳಂ ನಾನು ಕಂಡಿಹೆನು

8 ಪೀತವಸನವ ಧರಿಸವವ ನೀಂ
ಸೀತೆಗರಸಾಗಿರುತ ಚೀರವ
ಕೌತುಕದಿ ಧರಿಸಿರುವೆಯದರಿಂ
ಪ್ರೀತಿಯಿಂದುಡು ನಾನು ನಿನಗರ್ಪಿಸುವ ವಸ್ತ್ರವನೆ

9 ಮೃತ್ತಿಕೆಯ ತಿಲಕವಿದಧರಿಸೆಲೊ
ಕಸ್ತುರಿಯನಿಡಲಿಲ್ಲವೆನದಿರು
ಕೌಸ್ತುಭದ ಭೂಷಣನೆ ನಿನಗಿಡ-
ಲುತ್ತಮದ ಬೇರೊಂದು ಭೂಷಣತರಲುನೆನಗಹುದೆ

10 ಚಂದನವ ತಂದೊಪ್ಪಿಸಿಹೆನಿದು
ಚಂದವಿಲ್ಲೆಂದೆನುತ ಬಿಸುಟರೆ
ಕಂದನಾನೇಂಗೈವೆ ಕುಬ್ಜೆಯು
ಸುಂದರಿಯಂ ಮಂದಿರವಿದಲ್ಲವು ಹಠವಹಿಡಿಯದಿರು

11 ಮಾಲೆಕಂಸನಭೃತ್ಯ ನಿತ್ತುದೆ
ಸಾಲದೇನನ್ನೇಕೆ ಕಾಡುವೆ
ನೀಲಕಾಯಕೆ ಮಾಲೆಯ್ಯೋತಕೆ
ಶೀಲವರತರಿಗಿತರಭೂಷಣಭರದ ತೊಡಕೇಕೆ

12 ಕೋಪಕಾಲುಷ್ಯಗಳು ಕಲೆತಿಹ
ದೀಪಧೂಪಗಳರ್ಪಿಸಿರುವೆನು
ಕೋಪಿಸದೆ ಕೈಕೊಂಡು ತಣಿವುದಂ
ಪಾಪಿಯಾದೆನ್ನೆಡೆಯೊಳಿರುತಿಹ ನಿನಗೆ ಸಂಖಿವುಂಟೆ

13 ಚತುರನೆಲ್ಲರಮನದೊಳಿರುತಿಹೆ
ಕಿಶವಕುಟಿಲರ ವಂಚಿಸುವನೀಂ
ಸ್ತುತಿಗೆ ಮರುಳಾಗುವೆಯೊ ಶೌರಿಯೆ
ವ್ರತವೊ ನಿನ್ನದಿದೇನು ಜಾಣ್ಮೆಯೊ ಕೃಷ್ಣ ನಾನರಿಯೆ

14 ಸತತವೂ ಶ್ರುತಿನಿಕರ ಪೊಗಳುತ
ಸ್ಥಿತಿಯನಿನ್ನದನರಿಯಲೆಳಸಿರೆ
ಮತಿಗೆ ನೀನವುಗಳನುತಾರದೆ
ಸ್ತುತಿಸೆಭಕ್ತರು ದಾಸನಂದದೊಳವರ ಸೇವಿಸುವೆ

15 ಇಡಲು ನೈವೇದ್ಯಗಳ ಮುಂದೆಡೆ
ಸಡಗರದಿ ಭುಜಿಸದೆಯೆ ನೋಡುತ
ಪಡೆವುದೈ ತೃಪ್ತಿಯನು ಭುಜಿಸಲು
ತೊಡಗೆ ಕಣ್ಣಿಗೆ ಕೂಡ ತೋರೆವು ನಿನಗೆ ತಿಂಡಿಗಳ

16 ನಿತ್ಯ ತೃಪ್ತನು ಪೂರ್ಣಕಾಮನು
ಭಕ್ತರಿತ್ತುದನೊಂದನೂ ಬಿಡೆ
ಸತ್ಯಸಂಧನಿಗೇಕೆ ಕುಟಿಲತೆ
ಪತ್ನಿಯರು ಯೋಗೇಶಗಮಿತರೆ ನಿನ್ನ ನಂಬುವನ

17 ಎನ್ನಧೀನದೊಳಿರುವೆಯೆಂದರಿಂ
ನಿನ್ನದೊಂದುಂ ನಡೆಯದಾಟವು
ಮನ್ನಿಸೆನು ತಪ್ಪುಗಳನೆಂದಿಗು
ಚನ್ನಿಗನೆ ಚಪಲತೆಯ ಬಿಡು ಬಿಡು ಚೇಷ್ಟೆ ಚತುರತೆಯ

18 ವೇದವಂದಿತ ಮಾಧವನೆ ನೀಂ
ಪಾದ ಬೆಳೆಸಿದುದಾದುದಾಯಿತು
ಮೇದಿನಿಯನಿತರರಿಗೆ ಕೊಡಿಸಲು
ಕಾದಿ ವಂಚಿಸಬಹುದೆ ಭಕ್ತರ ಮೋಸ ತರವಲ್ಲ

19 ತಿಂಡಿ ಮಾಡಿಡಲಂಜುವೆನು ನಾಂ
ಬಂಡಿ ಮನೆಯೆಡೆ ಬಿಡಲು ಬೆದರುವೆ
ದುಂಡು ಮರಗಳ ಬೆಳೆಸಲಳುಕುವೆ
ಕಂಡು ನಿನ್ನುದ್ದಂಡತನತವನು ಬಹಳ ನೊಂದಿಹೆನು

20 ವಸನಗಳನಪಹರಿಸಿ ಸತಿಯರ
ಒಸವಳಿಸಿ ನಸುನಗುವ ಚೇಷ್ಟೆಯ
ನೆಸಗದಿರು ನೀನೆಮ್ಮೊಳಿರುತಿರೆ
ಜಸವ ಕೆಡಿಸುವ ಕೆಲಸಕೆರಗಲು ನಾವು ಸೈರಿಸೆವು

21 ಉರಗಮೆಟ್ಟಲು ಸುರರ ಕೆಣಕಲು
ಗಿರಿಯನೆತ್ತಲು ಕರಿಯಕೊಲ್ಲಲು
ತರುಣಿಯರೊಳತಿ ಸರಸವಾಡಲು
ತೆರಳುವೆಯ ನಾನಿರೆಸಿದೆಡೆಯಿರು ಜೊಕೆಯಚ್ಚರಿಕೆ

22 ಸರ್ಪಶಯನನಿಗೊಪ್ಪುವಂತಹ
ದಪ್ಪ ಸುಪ್ಪತ್ತಿಗೆಯ ಹಾಸದೆ
ತಪ್ಪಿರುವುದುಪಚಾರವೇನಿದು
ಒಪ್ಪಿರುವೆ ಹಿಂದೊಮ್ಮೆ ಮಲಗಲು ನೀನೆ ವಟದಳವ

23 ಹಿಂದೆ ನಿನ್ನನು ಮನುಜನೆನ್ನುತ
ಮಂದಮತಿಗಳು ಜರೆದರೆಲ ನೀ
ನಿಂದು ಭಕ್ತರ ಬಯಕೆ ಸಲಿಸದೆ
ನಂದಿಸದೆ ದುಷ್ಟರನು ಬಿಟ್ಟರೆ ಬೊಂಬೆಯೆನುವರು

24 ಬೊಂಬೆಯೆಂಬುನ್ನವರನ್ನು ಮೆಚ್ಚಿಸಿ
ನಂಬಿಸಲು ನೀನೆಳಸುವೆಯ ನೆರೆ–
ನಂಬಿದರನೊಮ್ಮೊಮ್ಮೆ ಮಾಯೆಯ
ದೊಂಬಿಯಲಿ ತುಳಿದವರ ದೃಢತರಭಕ್ತಿಪರಿಕಿಸುವೆ

25 ಎಲ್ಲ ವಸ್ತುವೊಳಿರುತಿರಲು ನೀ–
ನಿಲ್ಲದಿಹುದೊಂದು ವಿಗ್ರಹ–
ದಲ್ಲಿ ಭಾವಿಸಿ ನಿನ್ನ ಪೂಜಿಸ–
ಲಲ್ಲಿ ಸಾಕ್ಷಾತ್ಕರಿಸಿ ಭಕ್ತರು ನಲಿವುದಚ್ಚರಿಯೆ

26 ಶಿಲೆಯ ಲೋಹದ ಬೊಂಬೆ ದೇವರೆ
ಕೆಲಸವಿಲ್ಲೆಂದೆಂಬ ನಿಪುಣರು
ಎಲುಬು ಮಾಂಸದ ಮುದ್ದೆಯೊಡಲೊಳು
ಲಲನೆ ಸುಂದರಿಯೆಂದು ರಮಿಸಿರೆ ಪ್ರೇಮಕೆಣೆಯುಂಟೆ

27 ಅಚಲ ಭಕ್ತಿಯೊಳಿನ್ನಮೂರ್ತಿಯ
ರಚಿಸಿ ಪೂಜಿಸಲೊಲಿವೆನೆಂಬುವು
ದುಚಿತ ನಿನ್ನಯ ವಚನ ಸಂಶಯ–
ನಿಚಯಕೊಳಗಾದವನಿಗೆಂದಿಗು ಕಾರ್ಯ ಸಿದ್ಧಿಸದು

28 ಕನಕದಾಸರು ತ್ಯಾಗರಾಜರು
ವಿನುತವರಗುಣರಾಪುರಂದರ
ರನಿಬರರರ್ಚಾಕೃತಿಯ ಮಹಿಮೆಯಂ
ಮನವರಿದು ಪಾಡಿಹರು ಕುಣಿದಾಡಿಹರು ನಿನ್ನೊಡನೆ

29 ಕೈಯ್ಯ ಜೋಡಿಸಿ ಚಾಚಿ ನೆಲದೊಳು
ಮಯ್ಯ ನಿನ್ನಯ ಪದಕೆ ನಮಿಸುವೆ
ನಯ್ಯ ಬೇರೊಂದರಿಯನಾಂದ–
ದಮ್ಮಯ್ಯ ಪಾಪಿಯ ಮೊರೆಯ ಲಾಲಿಸಿ ಸಲಹೋ ನರಹರಿಯೆ

30 ಮಂಗಳಾತ್ಮನೆ ನಿನಗೆ ನಿತ್ಯವು
ಮಂಗಳವು ತಾನಾಗಲೆನ್ನುತ
ಮಂಗಳಾರತಿಯನ್ನು ಬೆಳಗುವೆ
ಮಂಗಳವ ಜಗಕೆಲ್ಲ ಕರುಣಿಸು ದೇವಕೀತನಯ

(ಅರ್ಚೆಯ ಅಚ್ಯುತಂ ಸಂಪೂರ್ಣಂ)

ಇಲ್ಲಿಗೆ ನೀತಿಸಾರಾವಳೀ ಗ್ರಂಥವು ಸಂಪೂರ್ಣವಾದುದು

॥ ಶ್ರೀ ಕೃಷ್ಣಾರ್ಪಣಮಸ್ತು ॥

# ಶೋಧನ ಪತ್ರಿಕೆ

ವಿಜ್ಞಾಪನೆಯಲ್ಲಿ :

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| 2 | 3 | ಏರ್ಪಡಿಸಲ್ಪಟ್ಟಿದೆ | ಮಾರ್ಪಡಿಸಲ್ಪಟ್ಟಿದೆ |
| 2 | 7 | ಒಳಬೇದ | ಒಳಭೇದ |
| 3 | 4 | ಪ್ರಸಂಗಭಂಗ | ಪ್ರಾಸಯತಿಭಂಗ |

ಮೊದಲ ಮಾತಿನಲ್ಲಿ :

| | | | |
|---|---|---|---|
| 1 | 6 | ಬುನಾದಿ | ಅನಾದಿ |
| 1 | 9 | ತಾತಂದಿರ | ಪಿತೃವ್ಯರ |

ಪದ್ಯಗಳಲ್ಲಿ :

| ಪುಟ ಸಂಖ್ಯೆ | ಪದ್ಯ ಸಂಖ್ಯೆ | ಅಶುದ್ಧ | ಶುದ್ಧ |
|---|---|---|---|
| 3 | 18 | ಸಂಮನೆಯು | ಸುಮ್ಮನೆಯು |
| 7 | 42 | ಕೆಡಿಪನೇನ | ಕೆಡಿಪನನೇನ |
| 8 | 50 | ಮೆಲ್ಲಣುವದು | ಮೆಲ್ಲನುಣುವುದು |
| 8 | 53 | ಕರ್ಣ | ಕರ್ಣನು |
| 9 | 54 | ವೇಂಕಾಟೇಶ | ವೇಂಕಟೇಶ |
| 9 | 56 | ವಿಧಿಗತಿಯನು | ವಿಧಿಯ ಗತಿಯನು |
| 9 | 60 | ಸಹಿಸುವ | ಸಹಿಸಂತ |
| 11 | 73 | ಕುಗ್ಗಿ | ತಗ್ಗಿ |
| 12 | 80 | ಕಟ್ಟಿದೆಡಯೊಳಿ | ಕಟ್ಟಿದೆಡೆಯೊಳಿ |
| 14 | 90 | ಪಡದರು | ಪಡೆದರು |
| 14 | 95 | ಬುದ್ಧಿಯಿರಲಿರದಿರದಿರ | ಬುದ್ಧಿಯಿರಲಿರದಿರಲಿ |
| 16 | 106 | ಬಾರದು | ಬಾರದೆಂದಿಗು |

| ಪುಟ | ಪದ್ಯ | ಅಶುದ್ಧ | ಶುದ್ಧ |
|---|---|---|---|
| 18 | 117 | ಗುಣವಿದು | ಗುಣವಿದ |
| 18 | 119 | ಬಳಲದೆಯೋ ಮಾಡಿರೆ | ಬಳಲದೆಯೆ ಮಾಡಿರಿ |
| 20 | 131 | ಬೇಕೀ | ಬೇಕೇ |
| 20 | 134 | ಮಡಿಯು | ಪುಡಿಯು |
| 20 | 135 | ಕೆರೆಯುವುದೇತಕೆ | ಕೆರೆವುದೇತಕೆ |
| 21 | 140 | ಕೆಳದಿರೆ | ಕೇಳದಿರೆ |
| 21 | 142 | ಕಾಣದುದುದೆಲ್ಲ | ಕಾಣದುದೆಲ್ಲ |
| 21 | 142 | ಕರುಣೆಯೆಂಬುದು | ಕವಿಗೆದಯೆಂಬುದು |
| 22 | 145 | ಕವಿಯುವ | ಕವಿಯುವ |
| 22 | 146 | ವ್ಯಪ್ಯಾನ್ನವನ್ನು | ವ್ಯಪ್ಯಾನ್ನವನು |
| 22 | 147 | ತಿಳಿವವಿ–ಬುಧರಿ | ತಿಳಿವವಿಬುಧರಿ |
| 22 | 149 | ಮನಸಲಿ | ಮನದಲಿ |
| 22 | 151 | ಗಣ | ಗುಣ |
| 23 | 157 | ಹೂವುಗಳು | ಹೂಗಳು |
| 23 | 157 | ಹೇಣು | ಹೆಣ್ಣು |
| 25 | 169 | ಹಾನಿಕರ | ಹಾ, ನರಕ |
| 27 | 182 | ತೃಪ್ತ | ತೃಪ್ತಿ |
| 28 | 190 | ವ್ಯಕ್ತಿ | ವೃತ್ತಿ |
| 29 | 197 | ಯಾರವಲ್ಲವೆ | ಯಾಟವಲ್ಲವೆ |
| 30 | 203 | ಸಿಯುನಕ್ಷತ್ರಯು | ಸಿರಿಯುನಕ್ಷತ್ರಯು |
| 30 | 206 | ದಧಮಕಧಿಮವು | ದಧಮಕಧಮವು |
| 34 | 232 | ಬಡಿಯಾಸೆಗೆ | ಬಡ್ಡಿಯಾಸೆಗೆ |
| 35 | 239 | ವಸ್ತುಜಯ | ವಸ್ತುಚಯ |
| 35 | 240 | ಬೇಕು | ಬೇಕೈ |
| 35 | 241 | ಸುಜನರೆ | ಸುಜನಕೆ |
| 35 | 242 | ಶೀಲದಿ | ಶೀಲರಿ |
| 35 | 242 | ಚೆಯುದಡೆ | ಚೆಯುದೆಡೆ |
| 36 | 247 | ಚವಡಲಿ | ಜವದರಿ |
| 37 | 252 | ಪ್ರಕ | ವೃತ |
| 37 | 256 | ತಾನಾರ್ಚಿಸುವ | ತಾನಾರ್ಜಿಸುವ |

| ಪುಟ | ಪದ್ಯ | ಅಶುದ್ಧ | ಶುದ್ಧ |
|---|---|---|---|
| 38 | 258 | ಸುಖಿಕ | ಸುಖಿಕೆ |
| 38 | 260 | ಒದಗುವ್ವುವು | ಒದಗವ್ವು |
| 38 | 261 | ಕಪ್ಪ | ಕಪ್ಪ |
| 39 | 265 | ಕೊಳಲು | ತೊಳಲು |
| 39 | 269 | ಕಟ್ಟಿಡದ | ಕಟ್ಟಿಡದ |
| 40 | 273 | ಜರಗದೊಲ್ಲದು | ಜರಗಲೊಲ್ಲದು |
| 40 | 275 | ಇನೇಕರ | ಇದೇತರ |
| 42 | 285 | ಗುಟ್ಟುಗಳವರಿ | ಗುಟ್ಟವರಿ |
| 43 | 296 | ಸಂಭಸು | ಸಂಭವ |
| 44 | 300 | ತಾರೆಯಿಂದ | ತಾತಿಯಿಂದ |
| 44 | 300 | ಕರುಣೆವವ | ಕರುಣೆಸುವ |
| 44 | 302 | ದಿದಾ | ದಿದಾದರೆ |

ಸಾರ್ವಜ್ಞ ಪದಗಳು–ವಿರುದ್ಧಾರ್ಥಕಥನ

| | | | |
|---|---|---|---|
| 46 | 7 | ಜನರ | ಜನರು |
| 46 | 8 | ನೂಡ | ನೊಡ |
| 47 | 16 | ದವರನು | ದವರನ್ನು |
| 47 | 16 | ಕಡೆಯುವ | ಕಡೆಯುವರ |
| 48 | 27 | ಪೊಗೆಸಗುಂವೆಯೊ | ಪೋಲಿಸಗುವೆಯೊ |

ಯಥಾರ್ಥಾರ್ಥಕಥನ

| | | | |
|---|---|---|---|
| 49 | 2 | ನಗ | ನಗೆ |
| 49 | 6 | ಬೇಟೆ | ಬೇಟ |
| 49 | 7 | ಹೊಂಡರಿಬ್ಬರ | ಹೆಂಡಿರಿಬ್ಬರ |
| 49 | 7 | ಚುಟಿ | ಚುಟ್ಟಿ |
| 51 | 17 | ತನಲಿದ್ದ | ತನದಲಿದ್ದ |
| 51 | 22 | ಕಲಕಿ | ಕಲಕೆ |
| 52 | 26 | ಬಿಡಸಲ್ಲಿ | ಜಡರಲ್ಲಿ |
| 52 | 29 | ಮೂಡವರಿದ್ದಲ್ಲಿ | ಮೂಡುವವರಿದ್ದಲ್ಲಿ |
| 52 | 29 | ನುಡೆನ್ನ | ನೋಡೆನ್ನ |

| ಪುಟ ಸಂಖ್ಯೆ | ಪದ್ಯ ಸಂಖ್ಯೆ | ಅಶುದ್ಧ | ಶುದ್ಧ |
|---|---|---|---|
| 52 | 31 | ಬೇರೆಯಂರೊಳ | ಬೇರೆಯಂವರೊಳ |
| 52 | 31 | ಕೋರದಿರಂ | ತೋರದಿರಂ |
| 52 | 32 | ಪರಿವಿ | ಪರರಿ |
| 52 | 32 | ದಾಹ | ಹಾಹ |
| 52 | 33 | ಕೈಗೂಡ | ಕೈಗೂಡೆ |
| 52 | 34 | ಫಲಿಸಿ | ಫಲಿಸೆ |
| 55 | 57 | ಕೃತಿಯು | ಕೃತಿಯುಂ |
| 56 | 62 | ಬರೆಯುಂತಿಹ | ಜರೆಯುಂತಿಹ |
| 56 | 64 | ವೆಚ್ಚಕೆ | ವೆಚ್ಚಕ್ಕೆ |
| 57 | 67 | ಬಿಸಿ | ಬಿಸಿಬಿಸಿ |

## ಚೆಲ್ವನಾರಾಯಣಶತಕಂ

| | | | |
|---|---|---|---|
| 59 | 1 | ಯಾದವವಾದ್ರಿ | ಯಾದವಾದ್ರಿ |
| 59 | 1 | ಶ್ರೀಯಂದವಾದ್ರೀಶ್ವರಂ | ಶ್ರೀಚೆಲ್ವನಾರಾಯಣಂ |
| 59 | 4 | ರಿತ್ತ | ರಿಕ್ತ |
| 60 | 8 | ಕೋರಂ | ಕೋರುತ್ತ |
| 61 | 14 | ಮೆನುತ್ತು–ದೋಷಿ | ಮೆನುತ್ತುದ್ವೇಷಿ |
| 61 | 15 | ಮೇಘಾದಿಂ | ಮೇಘದಿಂ |
| 62 | 21 | ಕಟಿ | ಕಟಿಂ |
| 62 | 25 | ದೋಷಗಳಂ | ದೋಷಂಗಳಂ |
| 62 | 25 | ಮಿಂದುವೇ | ಮಿವರೇ |
| 63 | 26 | ಎಲ್ಲದೊರಳಾಗುಣಂ | ಎಲ್ಲದರೊಳ್ ಗುಣಂ |
| 63 | 27 | ವಿಷತ್ಸ್ವಖ್ಯಾದಿ | ವಿಪತ್ಸ್ವಖ್ಯಾದಿ |
| 63 | 29 | ನೆದ್ದುದು | ನೆದ್ದೆದ್ದು |
| 63 | 29 | ಗೋಗೆ | ಗೋವೆ |
| 63 | 30 | ಬೇಕೆ | ಬೇಕೇ |
| ೧3 | 30 | ವರ್ಣಗಳಂ | ವರ್ಣಂಗಳಂ |
| 63 | 30 | ಮಂಕಣ | ಮಂಕರ್ |
| 36 | 31 | ಸಕಲಮಾದಂಗಗಳಂ | ಸಕಲಮಾದಂಗಂಗಳಂ |

| ಪುಟ ಸಂಖ್ಯೆ | ಪದ್ಯ ಸಂಖ್ಯೆ | ಅಶುದ್ಧ | ಶುದ್ಧ |
|---|---|---|---|
| 63 | 31 | ಬದಿಗೊತ್ತಿರ್ಪುದು | ಒದಗುತ್ತಿರ್ಪುದು |
| 63 | 31 | ಪೊಲೇಂಕಾಂತದಲ್ಲಿಪೊಡಲ್ | ಪೋಲೇಕಾಂತದಲ್ಲೀಪೊಡಲ್ |
| 63 | 31 | ಮುದವಿಂ | ಮುದದಿಂ |
| 64 | 33 | ಕುರುಂಡಂಗಂಗಂದದ | ಕುರುಂಡಂಗಂದದ |
| 64 | 33 | ಸರಸಕಿಲ್ಲದ | ಸರಸಕ್ಕಿಲ್ಲದ |
| 64 | 34 | ಗೊಡಗೊಯ್ವು | ಗೊಡನೊಯ್ವು |
| 64 | 36 | ಲ್ಲಿಪೌಷ್ಪದಿಂ | ಲ್ಲಿಪೌಷ್ಪ್ಯದಿಂ |
| 64 | 38 | ದೇಶಕ್ಕುಚಿತಂ | ದೇಶಕುಚಿತಂ |
| 64 | 38 | ಮೂದೊಡಂಕಾಲಕ್ಕೆ | ಮೂದೊಡಂದೊರೆತೊಡೇಂ ಕಾಲಕ್ಕೆ |
| 64 | 39 | ನೊರೆಯಿರ್ | ನೊರೆಯಲ್ |
| 65 | 41 | ಕುಲದಿಂದೋಡಿ | ಕುಲದಿಂದೋಡಿಃ |
| 65 | 45 | ಮೋಕರ್ಷಿಕ | ಮೋಕರ್ಷಿಪ |
| 65 | 45 | ಧನನ್ಯಾದಿ | ಧನಧಾನ್ಯಾದಿ |
| 66 | 47 | ವಸ್ತ್ರ | ವಕ್ತ್ರ |
| 66 | 53 | ಶಮಕಾಂದವರ್ವ್ಯಸನಂ | ಶಮ-ತಾಂದುರ್ವ್ಯಸನಂ |
| 66 | 53 | ತೌಭ್ಯ | ಲೌಭ್ಯ |
| 67 | 54 | ದಯೇದಾಕ್ಷಿಣ್ಯ | ದಯೆಂದಾಕ್ಷಿಣ್ಯ |
| 67 | 57 | ರೊಳ್ತಾಂ | ರೊಳಂತಾಂ |
| 67 | 58 | ಕಾರ್ಯಗಳಂ | ಕಾರ್ಯಂಗಳಂ |
| 67 | 59 | ಸಾಮರ್ಥ್ಯಮ | ಸಾಮರ್ಥ್ಯಮಂ |
| 68 | 62 | ಗತಿಯ್ತು | ಗತಿಯ್ಯೆ |
| 68 | 63 | ಫಲ | ಫಲ |
| 68 | 64 | ಶಾಸಸ | ಶಾಸನ |
| 69 | 70 | ಕುಯ್ಯಲು | ಕುಯ್ಯಲುಂ |
| 69 | 72 | ಕೊಡೆಲ್ತರಳ್ದ | ಕೊಡೆನಲ್ತೆರಳ್ದ |
| 69 | 74 | ಕೇಳಲರೇರೇ | ಕೇಳಲವರೇ |
| 70 | 75 | ತೊಲಗಲಿ | ತೊಲಗಲ್ |

| ಪುಟ ಸಂಖ್ಯೆ | ಪದ್ಯ ಸಂಖ್ಯೆ | ಅಶುದ್ಧ | ಶುದ್ಧ |
|---|---|---|---|
| 70 | 79 | ಪೇಳಸಹ್ಯ | ಪೇಳಲಸಹ್ಯ |
| 71 | 85 | ಬರಿದಿಂ | ಬರಿವಿಂ |
| 71 | 85 | ಕರವಿಂ | ಕರದಿಂ |
| 71 | 87 | ಯುಪ್ಪೊ | ಮುಪ್ಪೊ |
| 71 | 88 | ಕಿಗ್ಮಾಂಶು | ತಿಗ್ಮಾಂಶು |
| 72 | 89 | ಅಭಿನಂಮ | ಅಭಿನಯಂ |
| 72 | 93 | ದುಷ್ಕೃತ್ಯಕ್ಕೆ | ದುಷ್ಕೃತ್ಯಕೆ |
| 72 | 93 | ದುಗಡ | ದುಗುಡ |
| 72 | 94 | ಮಿಲ್ಲದಂದೆ | ಮಿಲ್ಲದಂತೆ |
| 72 | 95 | ಮೋಕ್ಷಕಿಡರ್ | ಮೋಕ್ಷಕ್ಕೆಡರ್ |
| 73 | 96 | ಭಾರಥ | ಭಾರತ |
| 73 | 98 | ಶಾಸ್ತ್ರಗಳಂ | ಶಾಸ್ತ್ರಂಗಳಂ |
| 73 | 99 | ಪೊದಿರ್ದ | ಪೊಂದಿರ್ದ |
| 73 | 101 | ಮೊಹಾತ್ಮ್ಯಮಂ | ಮಾಹಾತ್ಮ್ಯಮಂ |

ಅರ್ಜೆಯ ಅಚ್ಯುತ

| ಪುಟ ಸಂಖ್ಯೆ | ಪದ್ಯ ಸಂಖ್ಯೆ | ಅಶುದ್ಧ | ಶುದ್ಧ |
|---|---|---|---|
| 75 | 4 | ಬಿಡಲು | ಬಿಡೆಲೊ |
| 76 | 8 | ಧರಿಸವವ | ಧರಿಸುವವ |
| 77 | 19 | ತನತವನು | ತನಪನು |
| 78 | 21 | ನಾನಿರೆಸಿದೆಡೆ | ನಾನಿರಿಸಿದೆಡೆ |
| 78 | 21 | ಜೊಕೆ | ಜೋಕೆ |
| 78 | 23 | ಯೆನುವರು | ಯೆನ್ನುವರು |
| 78 | 24 | ಬೊಂಬೆಯೆಂಬುನ್ನುವರನ್ನು | ಬೊಂಬೆಯೆಂಬುವರನ್ನು |
| 78 | 25 | ದೊಂದುವಿಗ್ರಹ | ದೊಂದುಂಟವಿಗ್ರಹ |